ಶನಿವಾರ, ಜನವರಿ 20, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 20 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಹಾಲುಣಿಸುವ ತಾಯಂದಿರ ಕೂದಲು ಮತ್ತು ಚರ್ಮದ ಆರೈಕೆ ಹೇಗೆ?



‘ಒಕ್ಕಲಿಗರು ಕೃಷಿಗೆ ಸೀಮಿತವಾಗದಿರಿ’ 5
ಪ್ರಜಾವಾಣಿ ಸಂದರ್ಶನ 9 ಅಭ್ಯರ್ಥಿ ಆಯ್ಕೆ: ಸಚಿವರ ಶಿಫಾರಸಿಗೆ ಅಪಸ್ವರ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,683 ▲	21,622 ▲	₹64,150 (ಬೆಂಗಳೂರು) ▲	₹73,000 (ಬೆಂಗಳೂರು) ▲	83.07 ▲

ಬಾಲರಾಮನ ಮೊದಲ ಚಿತ್ರ ಬಹಿರಂಗ



ವಿಎಚ್‌ಪಿ ಶುಕ್ರವಾರ ಬಿಡುಗಡೆಗೊಳಿಸಿದ ಬಾಲರಾಮನ ವಿಗ್ರಹದ ಚಿತ್ರ

ಅಯೋಧ್ಯೆ (ಪಿಟಿಐ): ರಾಮ ಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆ ಸಮಾರಂಭಕ್ಕೆ ಎರಡು ದಿನಗಳು ಬಾಕಿಯಿದ್ದು, ಬಾಲರಾಮನ ವಿಗ್ರಹದ ಮೊದಲ ಚಿತ್ರವನ್ನು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಶುಕ್ರವಾರ ಬಿಡುಗಡೆಗೊಳಿಸಿದೆ.

ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿರುವ ಈ ವಿಗ್ರಹವನ್ನು ಗುರುವಾರ ರಾಮಮಂದಿರದ ಗರ್ಭಗುಡಿಯ ಪೀಠದಲ್ಲಿ ಇಡಲಾಗಿದೆ. ಪ್ರಾಣ ಪ್ರತಿಷ್ಠಾಪನೆಗೆ ಪೂರ್ವಭಾವಿ ಧಾರ್ಮಿಕ ವಿಧಿಗಳು ಶುಕ್ರವಾರವೂ ಮುಂದುವರಿದವು. 12

ಚುನಾವಣೆ ಹತ್ತಿರವಿರುವಾಗ ಮಾದಿಗರ ಮತ ಸೆಳೆಯಲು ಬಿಜೆಪಿ ಕಸರತ್ತು

ಒಳಮೀಸಲಿಗಾಗಿ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಮುನ್ನ ದಕ್ಷಿಣದ ರಾಜ್ಯಗಳಲ್ಲಿ ಮಾದಿಗ ಸಮುದಾಯವನ್ನು ಓಲೈಸಲು ಪ್ರಯತ್ನ ಮುಂದುವರಿಸಿರುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಮಾದಿಗ ಸಮುದಾಯ ಸೇರಿದಂತೆ ಇತರ ಪರಿಶಿಷ್ಟ ಜಾತಿಗಳ ಹಿತಾಸಕ್ತಿ ಕಾಪಾಡಲು ತೆಗೆದುಕೊಳ್ಳಬಹುದಾದ ಆಡಳಿತಾತ್ಮಕ ಕ್ರಮಗಳ ಕುರಿತು ಪರಿಶೀಲಿಸುವುದಕ್ಕೆ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ.

ತೆಲಂಗಾಣ ವಿಧಾನಸಭೆ ಚುನಾವಣಾ ಪ್ರಚಾರದ ವೇಳೆ ಪ್ರಧಾನಿಯವರು, ‘ಮಾದಿಗರ ಸಬಲೀಕರಣಕ್ಕಾಗಿ ಪರಿಶಿಷ್ಟ ಜಾತಿಗಳ ವರ್ಗೀಕರಣ ಮಾಡಬೇಕೆಂಬ ಬೇಡಿಕೆ ಈಡೇರಿಕೆಯ ಸಾಧ್ಯಾಸಾಧ್ಯತೆ ಪರಿಶೀಲಿಸಲು ಕೇಂದ್ರ ಶೀಘ್ರದಲ್ಲೇ ಸಮಿತಿ ರಚಿಸಲಿದೆ’ ಎಂದು ಹೇಳಿದ್ದರು. ಪ್ರಧಾನಿ ಅವರ ನಿರ್ದೇಶನದ ಮೇರೆಗೆ ಸಂಪುಟ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಈಗ ಸಮಿತಿ ರಚಿಸಲಾಗಿದೆ.

‘ರಾಜ್ಯದಲ್ಲಿ ಪರಿಶಿಷ್ಟ ಜಾತಿಯ 101 ಒಳ ಪಂಗಡಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಿ ಒಳಮೀಸಲಾತಿ ನೀಡಲು ಸಂವಿಧಾನ ತಿದ್ದುಪಡಿ ಮಾಡಬೇಕು’ ಎಂದು ಒತ್ತಾಯಿಸಿ ಕರ್ನಾಟಕ ಸರ್ಕಾರವು ಕೇಂದ್ರ ಸಾಮಾಜಿಕ ನ್ಯಾಯ ಸಚಿವಾಲಯಕ್ಕೆ 2023ರ ಮಾರ್ಚ್ 28ರಂದು ಪತ್ರ ಬರೆದಿತ್ತು.

ಆಂಧ್ರ ಪ್ರದೇಶ ಸರ್ಕಾರ ಹಾಗೂ ಇ.ವಿ.ಚಿನ್ನಯ್ಯ ನಡುವಿನ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಪರಿಶಿಷ್ಟ ಜಾತಿಗಳ ಇನ್ನಷ್ಟು ಒಳ ವರ್ಗೀಕರಣಕ್ಕೆ ಅವಕಾಶ ಇಲ್ಲ ಎಂದು 2004ರ ನವೆಂಬರ್‌ನಲ್ಲಿಯೇ ತೀರ್ಪು ನೀಡಿತ್ತು. ಈ ನಡುವೆ, ಪಂಜಾಬ್ ಸರ್ಕಾರ ಹಾಗೂ ದೇವಿಂದರ್ ಸಿಂಗ್ ನಡುವಿನ ಪ್ರಕರಣದ ವಿಚಾರಣೆ ನಡೆಸಿದ್ದ ಸಂವಿಧಾನ ಪೀಠವು ಇ.ವಿ. ಚಿನ್ನಯ್ಯ ಪ್ರಕರಣದ ಆದೇಶದ ಮರುಪರಿಶೀಲನೆ ಅಗತ್ಯವಿದೆ ಎಂದು 2020ರ ಆಗಸ್ಟ್‌ನಲ್ಲಿ ಅಭಿಪ್ರಾಯಪಟ್ಟಿತ್ತು. ಈ ವಿಷಯವನ್ನು ಏಳು ನ್ಯಾಯಮೂರ್ತಿಗಳ ಪೀಠಕ್ಕೆ ವರ್ಗಾಯಿಸುವಂತೆ ಸಂವಿಧಾನ ಪೀಠವು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರಿಗೆ ಶಿಫಾರಸು ಮಾಡಿತ್ತು.

‘ಭಾರತೀಯ ಸಂವಿಧಾನದ ಈಗಿನ ವಿಧಿಗಳ ಅನ್ವಯ, ಪರಿಶಿಷ್ಟ ಜಾತಿಗಳ ಉಪ ವರ್ಗೀಕರಣಕ್ಕೆ ಅನುಮತಿ ಇಲ್ಲ’ ಎಂದು ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಅವರು ಸಂಸತ್ ಅಧಿವೇಶನದಲ್ಲಿ ಹೇಳಿದ್ದರು.

‘ಆಂಧ್ರ ಪ್ರದೇಶದ ಪರಿಶಿಷ್ಟ ಜಾತಿಗಳ ಉಪ ವರ್ಗೀಕರಣ ವಿಷಯದ ಕುರಿತು ಪರಿಶೀಲನೆ ನಡೆಸಿದ್ದ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗವು, ಇದಕ್ಕೆ ಅವಕಾಶ ಕಲ್ಪಿಸಲು ಸಂವಿಧಾನದ ಪರಿಚ್ಛೇದ 341ಕ್ಕೆ ತಿದ್ದುಪಡಿ ಮಾಡುವಂತೆ ಶಿಫಾರಸು ಮಾಡಿದೆ. ಆಯೋಗದ ಶಿಫಾರಸುಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ನೀಡುವಂತೆ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತಗಳಿಗೆ ಸೂಚಿಸಲಾಗಿತ್ತು. ಇಲ್ಲಿಯವರೆಗೆ 20 ರಾಜ್ಯಗಳು ಮತ್ತು 2 ಕೇಂದ್ರಾಡಳಿತ ಪ್ರದೇಶಗಳಿಂದ ಪ್ರತಿಕ್ರಿಯೆಗಳು ಬಂದಿವೆ. ಈ ಪೈಕಿ ಏಳು ರಾಜ್ಯಗಳು ಉಪ-ವರ್ಗೀಕರಣದ ಪರವಾಗಿವೆ. 13 ರಾಜ್ಯಗಳು, ಒಂದು ಕೇಂದ್ರಾಡಳಿತ ಪ್ರದೇಶ ಇದಕ್ಕೆ ವಿರುದ್ಧವಾಗಿವೆ’ ಎಂದು ತಿಳಿಸಿದ್ದರು.

ಸಮುದಾಯದ ಬೇಡಿಕೆ ಏನು?

‘ಪರಿಶಿಷ್ಟ ಜಾತಿಗಳಿಗೆ ನಿಗದಿಯಾದ ಮೀಸಲಾತಿ ಮತ್ತು ಕಲ್ಯಾಣ ಯೋಜನೆಗಳ ಪ್ರಯೋಜನಗಳು ಸಮುದಾಯಗಳಲ್ಲಿ ಸಮಾನವಾಗಿ ಹಂಚಿಕೆಯಾಗುತ್ತಿಲ್ಲ. ಹೀಗಾಗಿ ಮಾದಿಗ ಸಮುದಾಯ ಸೇರಿದಂತೆ ಪರಿಶಿಷ್ಟ ಜಾತಿಗಳ ಉಪ ವರ್ಗೀಕರಣ ಮಾಡಬೇಕು’ ಎಂಬುದು ಈ ಸಮುದಾಯದ ಒತ್ತಾಯ

ಯಾವ ರಾಜ್ಯಗಳಿಂದ ಈ ಬೇಡಿಕೆ?

ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯ ಸರ್ಕಾರಗಳಿಂದ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವ ಸಲ್ಲಿಕೆ. ಒಳಮೀಸಲಾತಿ ಕುರಿತು ಸಂವಿಧಾನದ ಅನುಚ್ಛೇದ 341ಕ್ಕೆ ತಿದ್ದುಪಡಿ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಕರ್ನಾಟಕ ಸರ್ಕಾರದ ಸಚಿವ ಸಂಪುಟ ಸಭೆಯಿಂದ ಗುರುವಾರವಷ್ಟೇ ತೀರ್ಮಾನ

ಸಮಿತಿಯ ಮೊದಲ ಸಭೆ 23ಕ್ಕೆ

ಉನ್ನತ ಮಟ್ಟದ ಸಮಿತಿಯಲ್ಲಿ ಗೃಹ ವ್ಯವಹಾರಗಳ ಸಚಿವಾಲಯ, ಸಿಬ್ಬಂದಿ ಮತ್ತು ತರಬೇತಿ ಇಲಾಖೆ, ಬುಡಕಟ್ಟು ವ್ಯವಹಾರಗಳ ಸಚಿವಾಲಯ, ಕಾನೂನು ವ್ಯವಹಾರಗಳ ಇಲಾಖೆ ಮತ್ತು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಕಾರ್ಯದರ್ಶಿಗೆ ಸ್ಥಾನ. ಇದೇ 23ರಂದು ಸಮಿತಿಯ ಮೊದಲ ಸಭೆ

ಬೋಯಿಂಗ್ ಕೇಂದ್ರಕ್ಕೆ ಚಾಲನೆ

ವೈಮಾನಿಕ ಕ್ಷೇತ್ರಕ್ಕೆ ಕರ್ನಾಟಕವೇ ನೆಲೆ: ಮೋದಿ ಬಣ್ಣನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯವು ದೇಶದ ವೈಮಾನಿಕ ಕ್ಷೇತ್ರದ ಬೃಹತ್ ಕೇಂದ್ರವಾಗಿ ಹೊರ ಹೊಮ್ಮುವುದರಲ್ಲಿ ಸಂದೇಹವೇ ಇಲ್ಲ. ಅಲ್ಲದೇ, ಭಾರತದಲ್ಲಿಯೇ ಪೂರ್ಣ ಪ್ರಮಾಣದಲ್ಲಿ ವಿನ್ಯಾಸಗೊಂಡು ಬೋಯಿಂಗ್ ವಿಮಾನಗಳು ತಯಾರಾಗುವ ದಿನಗಳೂ ದೂರವಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ದೇವನಹಳ್ಳಿಯಲ್ಲಿ ಬೋಯಿಂಗ್‌ನ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕೇಂದ್ರದ ಕ್ಯಾಂಪಸ್ ಮತ್ತು ಬೋಯಿಂಗ್ ಸುಕನ್ಯಾ ಕಾರ್ಯಕ್ರಮವನ್ನು ಅವರು ಶುಕ್ರವಾರ ಉದ್ಘಾಟಿಸಿ ಮಾತನಾಡಿದರು. ‘ಇಲ್ಲಿನ ಬೋಯಿಂಗ್ ಕ್ಯಾಂಪಸ್‌ನ ಸೌಲಭ್ಯವನ್ನು ನೋಡಿದರೆ ಕರ್ನಾಟಕ ವೈಮಾನಿಕ ಕ್ಷೇತ್ರದ ಬೃಹತ್ ಶಕ್ತಿಯಾಗಿ ಉಗಮವಾಗುತ್ತಿರುವ ಸ್ಪಷ್ಟ ಸೂಚನೆ ಕಾಣಿಸುತ್ತಿದೆ’ ಎಂದರು.

ಭಾರತದ ವಿಮಾನ ಕಂಪನಿಗಳಿಂದ ಹೊಸ ವಿಮಾನಗಳಿಗೆ ಬೇಡಿಕೆ ಆದೇಶಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿವೆ. ಹೀಗಾಗಿ ಜಾಗತಿಕ ವೈಮಾನಿಕ ಮಾರುಕಟ್ಟೆಗೆ ಭಾರತ ಹೊಸ ಚೈತನ್ಯ ತುಂಬಲಿದೆ ಎಂದು ಹೇಳಿದರು.

7ನೇ ಪುಟ ನೋಡಿ



ಕ್ಯಾಂಪಸ್‌ನ ಉದ್ಘಾಟನೆ ಸಮಾರಂಭದಲ್ಲಿ, ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಬೋಯಿಂಗ್ ಕಂಪನಿಯ ಸಿಒಒ ಸ್ಟೆಫೇನ್ ಪೋಪ್(ಎಡದಿಂದ ಎರಡನೆಯವರು) ವಿಮಾನದ ಪ್ರತಿಕೃತಿ ತೋರಿಸಿದರು

ಕ್ಯಾಂಪಸ್ ವೈಶಿಷ್ಟ್ಯವೇನು?

- ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದಲ್ಲಿರುವ ಏರೋಸ್ಪೇಸ್ ಪಾರ್ಕ್‌ನಲ್ಲಿ ಬೋಯಿಂಗ್‌ನ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕೇಂದ್ರ ನಿರ್ಮಾಣಗೊಂಡಿದೆ.
- ಈ ಕೇಂದ್ರವು ಜಾಗತಿಕ ಮಟ್ಟದ ವೈಮಾನಿಕ ಎಂಜಿನಿಯರಿಂಗ್ ತಂತ್ರಜ್ಞಾನದ ಬೆಳವಣಿಗೆಗೆ ಪೂರಕವಾಗಿ ಮತ್ತು ಅತಿ ಸಂಕೀರ್ಣ ಕಾರ್ಯಗಳನ್ನು ನಿರ್ವಹಿಸಲಿದೆ. ಭವಿಷ್ಯದ ಏವಿಯಾನಿಕ್ಸ್ ತಂತ್ರಜ್ಞಾನದ ಅಭಿವೃದ್ಧಿ, ಉತ್ಪಾದನೆ ಹಾಗೂ ಜೋಡಣೆ ಕಾರ್ಯವೂ ಇಲ್ಲಿ ನಡೆಯಲಿದೆ.
- ಬೋಯಿಂಗ್ ಇಂಡಿಯಾ ಕ್ಯಾಂಪಸ್ 43 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗಿದೆ. ಇದಕ್ಕಾಗಿ ಬೋಯಿಂಗ್ ಕಂಪನಿ ₹1,600 ಕೋಟಿ ಬಂಡವಾಳ ಹೂಡಿದೆ. ಅಮೆರಿಕ ಬಿಟ್ಟರೆ ಬೋಯಿಂಗ್‌ನ ಎರಡನೇ ಅತಿ ದೊಡ್ಡ ಕೇಂದ್ರ ಇದಾಗಿದೆ.
- ಈ ಕೇಂದ್ರದ ಮೂಲಕ ಬೋಯಿಂಗ್ ವರ್ಷಕ್ಕೆ ₹10,000 ಕೋಟಿ ವಹಿವಾಟಿನ ಗುರಿ ಹೊಂದಿದೆ.

ಬಿಲ್ಕಿಸ್ ಪ್ರಕರಣ: ಅಪರಾಧಿಗಳ ಅರ್ಜಿ ವಜಾ

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನು ಅವರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಅವರ ಕುಟುಂಬದ ಏಳು ಮಂದಿಯನ್ನು ಹತ್ಯೆ ಮಾಡಿದ್ದ ಪ್ರಕರಣದ ಅಪರಾಧಿಗಳು ತಮಗೆ ಶರಣಾಗಲು ಹೆಚ್ಚುವರಿ ಕಾಲಾವಕಾಶ ನೀಡಬೇಕು ಎಂದು ಸಲ್ಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತಿರಸ್ಕರಿಸಿದೆ. ಇದರ ಪರಿಣಾಮವಾಗಿ ಈ ಪ್ರಕರಣದ 11 ಮಂದಿ ಅಪರಾಧಿಗಳು ಜನವರಿ 21ರಂದು ಶರಣಾಗಬೇಕಿದೆ.



ಶರಣಾಗಲು ಹೆಚ್ಚುವರಿ ಕಾಲಾವಕಾಶ ಕೊಡಬೇಕು ಎಂಬ ಕೋರಿಕೆಯೊಂದಿಗೆ 11 ಮಂದಿ ಅಪರಾಧಿಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ವಲ್ ಭುಯಿಯಾಂ ಅವರು ಇದ್ದ ವಿಭಾಗೀಯ ಪೀಠವು ನಡೆಸಿತು. ಅಪರಾಧಿಗಳು ಉಲ್ಲೇಖಿಸಿರುವ ಕಾರಣಗಳಲ್ಲಿ ಹುರುಳಿಲ್ಲ ಎಂದು ಪೀಠವು ಹೇಳಿದೆ.

ಈ ಅಪರಾಧಿಗಳಿಗೆ ಗುಜರಾತ್ ಸರ್ಕಾರವು ಕ್ಷಮಾದಾನ ನೀಡಿ, ಅವರನ್ನು ಜೈಲಿನಿಂದ ಬಿಡುಗಡೆ ಮಾಡಿತ್ತು. ಆದರೆ, ಅವರ ಬಿಡುಗಡೆಯನ್ನು ಸುಪ್ರೀಂ ಕೋರ್ಟ್ ಜನವರಿ 8ರಂದು ರದ್ದುಮಾಡಿದೆ.

7ನೇ ಪುಟ ನೋಡಿ

‘ನೋಂದಣಿ ವೇಳೆ ಆಧಾರ್ ನೈಜತೆ ಪರಿಶೀಲಿಸಿ’

ಬೆಂಗಳೂರು: ‘ಆಸ್ತಿ ಮಾರಾಟ ಅಥವಾ ಇತರೆ ದಾಖಲೆಗಳನ್ನು ನೋಂದಣಿ ಮಾಡುವ ಮುನ್ನ ಅಂತಹ ದಾಖಲೆ ಸಲ್ಲಿಸುವ ವ್ಯಕ್ತಿಯ ಆಧಾರ್ ಅಧಿಕೃತತೆ ಪರಿಶೀಲಿಸಬೇಕು’ ಎಂದು ಹೈಕೋರ್ಟ್, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಆಯುಕ್ತರಿಗೆ ಆದೇಶಿಸಿದೆ.

‘ಅನಾಮಧೇಯ ವ್ಯಕ್ತಿ ಮಾರಾಟ ಮಾಡಿದ್ದಾರೆಂಬ ಆಧಾರದ ಮೇಲೆ ನನ್ನ ಭೂಮಿಯ ಋಣಭಾರ ಪತ್ರದಲ್ಲಿ (ಇಸಿ) ನೋಂದಾಯಿಸಿರುವ ಹೆಸರು ತೆಗೆಯುವಂತೆ ಕೋರಿದ್ದ ಮನವಿಯನ್ನು ಸಬ್ ರಿಜಿಸ್ಟ್ರಾರ್ ತಿರಸ್ಕರಿಸಿದ್ದಾರೆ’ ಎಂದು ಆಕ್ಷೇಪಿಸಿ ರಾಜೇಶ್ ತಿಮ್ಮಣ್ಣ ಉಮ್ರಾಣಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಆಧಾರ್ (ನಿರ್ದಿಷ್ಟ ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ವಿತರಣೆ) ಕಾಯ್ದೆ- 2016ರ ಪ್ರಕಾರ ಯುಐಡಿಎಐ ನೊಂದಿಗೆ ನೋಂದಣಿ ಮಾಡಿಕೊಂಡಿರುವ ಯಾವುದೇ ಸೇವಾ ಪೂರೈಕೆದಾರರು ಆಧಾರ್‌ಕಾರ್ಡ್ ಹೊಂದಿರುವ ವ್ಯಕ್ತಿಯ ಮೊಬೈಲ್ ಸಂಖ್ಯೆಗೆ ಬರುವ ಒಟಿಪಿ ಆಧರಿಸಿ ಅದರ ಅಧಿಕೃತತೆಯನ್ನು ಪರಿಶೀಲಿಸಿಕೊಳ್ಳಬೇಕಿದೆ. ಪರಿಶೀಲನೆ ನಂತರವೇ ನೋಂದಣಿ ಮಾಡಿಕೊಳ್ಳಬೇಕು’ ಎಂದು ನ್ಯಾಯಪೀಠ ಹೇಳಿದೆ.

6,097 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ದಿನಗಳಲ್ಲಿ ರಾಜ್ಯದ 6,097 ಗ್ರಾಮಗಳು ಮತ್ತು 1,186 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಕೊರತೆ ಉದ್ಭವವಾಗಬಹುದು ಎಂಬ ಅಂದಾಜು ವರದಿ ಲಭ್ಯವಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.




ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ, ಭೂದಾಖಲೆಗಳು ಹಾಗೂ ಭೂಮಾಪನ ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಶುಕ್ರವಾರ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬರಗಾಲದಿಂದ ಎದುರಾಗಬಹುದಾದ ಜಲ ಕ್ಷಾಮದ ಕುರಿತು ಗ್ರಾಮಗಳ ಹಂತದಿಂದಲೇ ವರದಿ ಪಡೆಯಲಾಗಿದೆ’ ಎಂದರು.

7ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಉದ್ಯೋಗ ಮೇಳ ಆಯೋಜನೆಗೆ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ, ಪ್ರಾದೇಶಿಕ ಮಟ್ಟದಲ್ಲಿ ಉದ್ಯೋಗ ಮೇಳಗಳನ್ನು ಆಯೋಜಿಸಲು ಕೌಶಲಾಭಿವೃದ್ಧಿ, ಜೀವನೋಪಾಯ ಸಚಿವ ಶರಣಪ್ರಕಾಶ ಪಾಟೀಲ ಅಧ್ಯಕ್ಷತೆಯಲ್ಲಿ ಏಳು ಸಚಿವರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.

ಸಚಿವರಾದ ಎಂ.ಬಿ.ಪಾಟೀಲ, ಎಚ್.ಕೆ.ಪಾಟೀಲ, ಡಾ.ಎಂ. ಸಿ.ಸುಧಾಕರ್, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಬಿ.ನಾಗೇಂದ್ರ ಹಾಗೂ ವಿವಿಧ ಇಲಾಖೆಗಳ ಪ್ರಧಾನ ಕಾರ್ಯ-ದರ್ಶಿಗಳನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

ಬೃಹತ್, ಸಣ್ಣ ಕೈಗಾರಿಕೆ, ಸಾಫ್ಟ್‌ವೇರ್ ಉದ್ಯಮಿಗಳ ಸಹಯೋಗದಲ್ಲಿ ರಾಜ್ಯ, ಪ್ರಾದೇಶಿಕ ಹಾಗೂ ಜಿಲ್ಲಾ ಮಟ್ಟದಲ್ಲಿ ಉದ್ಯೋಗ ಮೇಳಗಳನ್ನು ಆಯೋಜಿಸುವುದು, ಉದ್ಯೋಗದ ಬೇಡಿಕೆಗೆ ಅನುಗುಣವಾಗಿ ಯುವಕ–ಯುವತಿಯರಿಗೆ ಉದ್ಯೋಗ ದೊರಕಿಸಲು ಸಮಿತಿ ನಿರಂತರವಾಗಿ ಶ್ರಮಿಸಲಿದೆ ಎಂದು ಶರಣಪ್ರಕಾಶ ಪಾಟೀಲ ಹೇಳಿದರು.

ಕನ್ನಡಿಗರಿಗೆ ಉದ್ಯೋಗದ ಅವಕಾಶಗಳನ್ನು ಕಲ್ಪಿಸಲು ಸರ್ಕಾರ ಹಲವು ಉದ್ಯೋಗ ಮೇಳಗಳನ್ನು ಹಮ್ಮಿಕೊಳ್ಳಲಿದೆ. ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಶ್ರಮಿಸಲಿದೆ. ಉದ್ಯೋಗ ಸೃಷ್ಟಿಗೆ ಒತ್ತು ನೀಡಲಿದೆ. ಐಟಿ- ಬಿಟಿ, ಹೋಟೆಲ್, ಉತ್ಪಾದನಾ ಕ್ಷೇತ್ರ, ಬ್ಯಾಂಕಿಂಗ್ ವಲಯಗಳಲ್ಲಿ ಗ್ರಾಮೀಣ ಭಾಗದ ಯುವಕ- ಯುವತಿಯರಿಗೆ ಹೆಚ್ಚಿನ ಅವಕಾಶ ದೊರಕಿಸಲಾಗುವುದು ಎಂದು ಮಾಹಿತಿ ನೀಡಿದರು.

ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ: 18 ಸಾವಿರಕ್ಕೂ ಹೆಚ್ಚು ಮಂದಿ ಭೇಟಿ, ₹6.33 ಲಕ್ಷ ಸಂಗ್ರಹ

ಪುಷ್ಪಗಳಲ್ಲಿ ಮೈದಳೆದ ವಚನ ಸಾಹಿತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಬಸವಣ್ಣ ಸೇರಿದಂತೆ ಶಿವಶರಣರ ವಚನಗಳಲ್ಲಿ ಕಂಡಿದ್ದ ಅನುಭವ ಮಂಟಪ, ಪುಷ್ಪದಲ್ಲಿ ಅರಳಿರುವುದನ್ನು ಕಂಡು ಜನ ಪುಳಕಿತರಾದರು.

ಹೂ ರಾಶಿಗಳ ನಡುವೆ ವಚನಗಳು, ಬಸವಣ್ಣನ ಪ್ರತಿಮೆ, ಶರಣರ ಕಲಾಕೃತಿಗಳು, ಭಿತ್ತಿ ಫಲಕಗಳಲ್ಲಿ 12ನೇ ಶತಮಾನ-ದಲ್ಲಿದ್ದ ಜಾತಿ ಪದ್ಧತಿ, ಮೌಢ್ಯಗಳ ಆಚರಣೆಯ ವಿರುದ್ಧ ಬಸವಣ್ಣ ಅವರ ವಚನಕ್ರಾಂತಿಯ ಜಾಗೃತಿ ಭಿತ್ತಿ ಪತ್ರಗಳನ್ನು ಪುಷ್ಪ ಪ್ರಿಯರು ಕುತೂಹಲದಿಂದ ವೀಕ್ಷಿಸಿದರು. ಯುವ ಸಮುದಾಯಕ್ಕೆ ಪುಷ್ಪಗಳ ಮೂಲಕ ಸಮಗ್ರ ವಚನ ಸಾಹಿತ್ಯ ಹಾಗೂ ಅನುಭವ ಮಂಟಪವನ್ನು ತೋಟಗಾರಿಕೆ ಇಲಾಖೆ ಇಲ್ಲಿ ಪರಿಚಯಿಸಿದೆ.


ವಚನಗಳ ಪ್ರಾಚೀನ ಓಲೆಗರಿ, ಹಸ್ತಪ್ರತಿಗಳನ್ನು ವಿದ್ಯಾರ್ಥಿಗಳು ಮತ್ತು ವಿದೇಶಿ ಪ್ರಜೆಗಳು ವೀಕ್ಷಿಸಿ ಮಾಹಿತಿ ಪಡೆದುಕೊಂಡರು.

'ಲಾಲ್‌ಬಾಗ್‌ನ ಗಾಜಿನಮನೆ ಸುತ್ತಮುತ್ತ ಎಲ್‌ಇಡಿ ಪರದೆಗಳಲ್ಲಿ ವಚನಗಳ ಮಹತ್ವ, ನಾಟಕಗಳನ್ನು ಪ್ರದರ್ಶಿಸಲಾಗುತ್ತಿದೆ. ಶುಕ್ರವಾರ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಮಂದಿ ಭೇಟಿ ನೀಡಿದ್ದಾರೆ. ಶನಿವಾರ ಮತ್ತು ಭಾನುವಾರ ಹೆಚ್ಚು ಜನ ಬರುವ ನಿರೀಕ್ಷೆ ಇದೆ' ಎಂದು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಶುಕ್ರವಾರ ಸಸ್ಯಕಾಶಿಗೆ 18,256 ಮಂದಿ ಭೇಟಿ ನೀಡಿದ್ದು, ಪ್ರವೇಶ ಶುಲ್ಕವಾಗಿ ₹6,33,190 ಸಂಗ್ರಹವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಲಾಲ್‌ಬಾಗ್‌ನಲ್ಲಿ ಗಾಜಿನ ಮನೆಯಲ್ಲಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನವನ್ನು ಸಾರ್ವಜನಿಕರು ಶುಕ್ರವಾರ ವೀಕ್ಷಿಸಿದರು
ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.



ಬಸವಣ್ಣ ಅವರನ್ನು ಕರ್ನಾಟಕ ರಾಜ್ಯದ ಸಾಂಸ್ಕೃತಿಕ ನಾಯಕನೆಂದು ರಾಜ್ಯ ಸರ್ಕಾರ ಘೋಷಿಸಿದೆ. ತೋಟಗಾರಿಕೆ ಇಲಾಖೆಯು ಬಸವಣ್ಣ ಅವರ ವಚನ ಕ್ರಾಂತಿಯನ್ನು ಪುಷ್ಪಗಳಲ್ಲಿ ಅನಾವರಣಗೊಳಿಸಿರುವುದು ಖುಷಿ ನೀಡಿದೆ

ಚನ್ನಬಸವಾನಂದ ಸ್ವಾಮೀಜಿ, ಬಸವಗಂಗೋತ್ರಿ ಪೀಠ, ಕುಂಬಳಗೋಡು



ಫಲಪುಷ್ಪ ಪ್ರದರ್ಶನದಲ್ಲಿ ಕಣ್ಮನ ಸೆಳೆಯುವ ಹೂವುಗಳ ಚಿತ್ರಗಳನ್ನು ಯುವತಿಯರು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದರು

ಅಭಿಪ್ರಾಯಗಳು



ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನಕ್ಕೆ ಮೂರನೇ ಬಾರಿಗೆ ಬರುತ್ತಿದ್ದೇನೆ. ಬಸವಣ್ಣ ಅವರ ವಚನ ಕ್ರಾಂತಿಯನ್ನು ಪುಷ್ಪಗಳಲ್ಲಿ ಅನಾವರಣ ಮಾಡಲಾಗಿದೆ. ಇದು ವಿದ್ಯಾರ್ಥಿಗಳು ಸೇರಿದಂತೆ ಎಲ್ಲರೂ ವಚನ ಸಾಹಿತ್ಯ ತಿಳಿದುಕೊಳ್ಳಲು ಉತ್ತಮ ವೇದಿಕೆ

ರಾಧಾ, ಜಯನಗರದ ನಿವಾಸಿ



ಕರ್ನಾಟಕದ ಕ್ರಾಂತಿ ಪುರುಷ ಬಸವಣ್ಣ ಅವರ ವಿಷಯಾಧಾ-ರಿತವಾದ ಫಲಪುಷ್ಪ ಪ್ರದರ್ಶನ ದಲ್ಲಿ ವಚನ ಸಾಹಿತ್ಯ ಮತ್ತು ಶರಣರ ಬಗ್ಗೆ ಒಳ್ಳೆಯ ಸಂದೇಶ ನೀಡಲಾಗಿದೆ

ವಿ.ಕೆ. ಶೆಟ್ಟಿ, ಮಂಗಳೂರು



ಫಲಪುಷ್ಪ ಪ್ರದರ್ಶ-ನವನ್ನು ವೀಕ್ಷಿಸುವು-ದಕ್ಕೆ ಭಾರತಕ್ಕೆ ಬಂದಿದ್ದೇನೆ. ಒಂದೇ ವೇದಿಕೆಯಲ್ಲಿ ಇಷ್ಟೊಂದು ಬಗೆಯ ಪುಷ್ಪಗಳನ್ನು ನಾನು ಮೊದಲ ಬಾರಿಗೆ ನೋಡಿ ಬಹಳ ಖುಷಿಯಾಗಿದೆ

ಕ್ರಿಸ್, ಆಸ್ಟ್ರೇಲಿಯಾ

ಸುದ್ದಿ 2 ನಿಮಿಷ

ಅಲೆಮಾರಿ ಆಯೋಗ ರಚಿಸಲು ಜನಸೇವಾ ಸಮಿತಿ ಆಗ್ರಹ

ಬೆಂಗಳೂರು: ಅಲೆಮಾರಿ ಆಯೋಗ ರಚಿಸುವಂತೆ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ, ಚನ್ನದಾಸರ, ಹೊಲೆಯದಾಸರ್, ಮಾಲದಾಸರ್ ಜನಸೇವಾ ಸಮಿತಿ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಬಸರಾಜ ನಾರಾಯಣಕರ, 'ಅಲೆಮಾರಿ ಜನಾಂಗದ ವಸತಿರಹಿತರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುದಾನದಲ್ಲಿ ಮನೆ ನಿರ್ಮಿಸಿ-ಕೊಳ್ಳಲು ₹5 ಲಕ್ಷ ನೀಡಬೇಕು' ಎಂದು ಒತ್ತಾಯಿಸಿದರು.

ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕವಾಗಿ ಅಲೆಮಾರಿ ಸಮುದಾಯಗಳು ಹಿಂದುಳಿದಿದ್ದು, ಅವರ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಬೇಕು. ಅಲೆಮಾರಿಗಳಿಗೆ ಪ್ರತ್ಯೇಕ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಬೇಕು' ಎಂದು ಆಗ್ರಹಿಸಿದರು.

'ಅಲೆಮಾರಿ ಸಮುದಾಯಗಳ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬೆಂಗಳೂರಿನಿಂದ ಬೆಳಗಾವಿವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗು-ವುದು' ಎಂದು ತಿಳಿಸಿದರು.

'ಆರಂಭವಾಗಲಿದೆ ರಾಮರಾಜ್ಯ'



ಬೆಂಗಳೂರು: ಅಯೋಧ್ಯೆಯ ರಾಮಮಂದಿರದಲ್ಲಿ ರಾಮನ ಮೂರ್ತಿ ಪ್ರತಿಷ್ಠಾಪನೆ ಮೂಲಕ ರಾಮ ರಾಜ್ಯಕ್ಕೆ ಅಡಿಗಲ್ಲು ಹಾಕಲಾಗಿದೆ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಸಂಗೀತ ನಿರ್ದೇಶಕಿ ಜಯಶ್ರೀ ಅರವಿಂದ ಅವರು ಶ್ರೀರಾಮನ ಕುರಿತ ಹಾಡುಗಳಿಗೆ ಸಂಗಿತ ಸಂಯೋಜನೆ ಮಾಡಿರುವ ಧ್ವನಿ ಸುರುಳಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ರಾಮ ರಾಜ್ಯ ಎಂದರೆ ಎಲ್ಲರಿಗೂ ಸಮಾನ ಅವಕಾಶ, ಸಮೃದ್ಧಿ, ಬಡತನ ಎಲ್ಲಿಯೂ ಕಾಣದಂತಾಗುವುದು, ಅನ್ಯಾಯ ತಡೆಯುವುದು, ಎಲ್ಲರಿಗೂ ನ್ಯಾಯ ಸಿಗುವಂತೆ ಮಾಡುವುದೇ ಮೋದಿ ಅವರ ರಾಮರಾಜ್ಯದ ಕನಸು ಎಂದರು.

500 ವರ್ಷಗಳಿಗೂ ಹೆಚ್ಚು ಕಾಲ ಅಯೋಧ್ಯೆಯ ಜನ್ಮ ಸ್ಥಳದಿಂದ ರಾಮನನ್ನು ದೂರ ಇಡಲಾಗಿತ್ತು. ರಾಮನ ಜನ್ಮಸ್ಥಳದಲ್ಲಿ ಬಾಬರಿ ಮಸೀದಿ ಇದ್ದ ಕಾರಣ ಅಲ್ಲಿ ಪೂಜೆ ಸಲ್ಲಿಸಲು ಆಗಿರಲಿಲ್ಲ. ಜ.22ಕ್ಕೆ ಮತ್ತೆ ರಾಮನ ಪ್ರಾಣ ಪ್ರತಿಷ್ಠಾಪನೆ ಆಗುತ್ತದೆ. ನರೇಂದ್ರ ಮೋದಿಯವರಿಂದಲೇ ತ್ರೇತಾಯುಗದ ರಾಮನ ಪ್ರತಿಷ್ಠಾಪನೆ ಆಗ ಬೇಕು ಎಂದು ಮೊದಲೇ ತೀರ್ಮಾನ ಆಗಿತ್ತು ಎನಿಸುತ್ತದೆ ಎಂದರು.

ಶಾಸಕ ರವಿ ಸುಬ್ರಮಣ್ಯ, ಉತ್ತರಾದಿ ಮಠದ ಸಂಚಾಲಕ ಸತ್ಯಧ್ಯಾನ ಆಚಾರ್ಯ ಕಟ್ಟಿ, ಜಯಶ್ರೀ ಅರವಿಂದ ಉಪಸ್ಥಿತರಿದ್ದರು.

'ರೆಡ್ಡಿ ನಿಗಮ ಸ್ಥಾಪನೆಗೆ ಚಿಂತನೆ'

ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮ: ಸಿದ್ದರಾಮಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವು ರೆಡ್ಡಿ ಸಮುದಾಯದ ಅಭಿವೃದ್ಧಿ ನಿಗಮ ಸ್ಥಾಪನೆ ಬಗ್ಗೆ ಚಿಂತನೆ ನಡೆಸಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ರೆಡ್ಡಿ ಸಮುದಾಯದವರು ಅಭಿ ವೃದ್ಧಿ ನಿಗಮ ಸ್ಥಾಪನೆ ಬಗ್ಗೆ ಮನವಿ ಮಾಡಿದ್ದರು. ಅವರ ಮನವಿಯನ್ನು ಸರ್ಕಾರ ಗಮನದಲ್ಲಿಟ್ಟುಕೊಂಡಿದ್ದು, ನಿಗಮ ರಚನೆ ಬಗ್ಗೆ ಸರ್ಕಾರ ಗಮನ ನೀಡಲಿದೆ. ರೆಡ್ಡಿ ಸಂಘದವರು ಶಿಕ್ಷಣ ಕೇಂದ್ರ ಸ್ಥಾಪನೆಗೆ ಆನೇಕಲ್‌ನಲ್ಲಿ ಜಮೀನು ಕೇಳಿದ್ದಾರೆ. ಅರಣ್ಯ ಭೂಮಿ ಬಿಟ್ಟು, ಕಂದಾಯ ಜಮೀನು ಇದ್ದಲ್ಲಿ ಸರ್ಕಾರ ಜಾಗ ನೀಡಲಿದೆ. ರಾಜ್ಯದ ಪ್ರಥಮ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ ಹುಟ್ಟೂರಿನಲ್ಲಿ ಸ್ಮಾರಕ ಅಭಿವೃದ್ಧಿಗೂ ಕ್ರಮ ಕೈಗೊಳ್ಳಲಾ-ಗುವುದು' ಎಂದು ಹೇಳಿದರು.

'ನಮ್ಮ ಸರ್ಕಾರ ಮನುಷ್ಯ ಜಾತಿಯ ಪರವಿದೆ. ಬಡವರಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ. ವೇಮನ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡರೆ ಅವರ ಜಯಂತಿಗೆ ಅರ್ಥ ಬರುತ್ತದೆ' ಎಂದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, 'ಕೆ.ಸಿ.ರೆಡ್ಡಿ ಅವರ ಸ್ಮಾರಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಅವರ ಹುಟ್ಟೂರಿಗೆ ಭೇಟಿ ನೀಡಿ, ಮುಂದಿನ ಹೆಜ್ಜೆ ಇರಿಸಲಾಗುವುದು. ಜಯಂತಿಗಳ ಮೂಲಕ ಮಹಾನ್ ಸಾಧಕರ ಸಾಧನೆಯನ್ನು ಯುವ ಸಮುದಾಯಕ್ಕೆ ತಲುಪಿಸಲಾಗುತ್ತಿದೆ' ಎಂದು ಹೇಳಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 'ಕೆ.ಸಿ.ರೆಡ್ಡಿ ಅವರ ಹುಟ್ಟೂರಿನಲ್ಲಿ-ರುವ ಸ್ಮಾರಕ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಬೇಕು' ಎಂದು ಮನವಿ ಮಾಡಿದರು.

ಶಾಸಕ ಜನಾರ್ದನ ರೆಡ್ಡಿ, ಕರ್ನಾಟಕ ರೆಡ್ಡಿ ಜನ ಸಂಘದ ಅಧ್ಯಕ್ಷ ಎಸ್. ಜಯರಾಮ ರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎನ್. ಮಂಜುಳಾ, ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಲೇಖಕಿ ಕೆ.ಆರ್.ಸಂಧ್ಯಾರೆಡ್ಡಿ ಪಾಲ್ಗೊಂಡಿದ್ದರು.



ಕಾರ್ಯಕ್ರಮದಲ್ಲಿ ಮಹಾಯೋಗಿ ವೇಮನ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುಷ್ಪ ನಮನ ಸಲ್ಲಿಸಿದರು. ಶಿವರಾಜ ತಂಗಡಗಿ, ರಾಮಲಿಂಗಾರೆಡ್ಡಿ, ಮಾಜಿ ಸಚಿವ ಎಚ್‌.ಎಂ.ರೇವಣ್ಣ ಪಾಲ್ಗೊಂಡಿದ್ದರು

'ರಾಮಲಿಂಗಾರೆಡ್ಡಿಗೆ ಡಿಸಿಎಂ ಸ್ಥಾನ ನೀಡಿ'

ವೇಮನ ಜಯಂತಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರು ಭಾಷಣ ಮುಗಿಸುವ ವೇಳೆಗೆ ರೆಡ್ಡಿ ಸಮುದಾಯದವರು ರಾಮಲಿಂಗಾರೆಡ್ಡಿ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಹೊಸದಾಗಿ ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಯ ಬಗ್ಗೆ ನಾನು ಮಾತ-ನಾಡುವುದಿಲ್ಲ. ಈ ಹುದ್ದೆ ಬಗ್ಗೆ ಮಾತನಾಡುವ ಹಾಗಿಲ್ಲ. ಮಾತನಾಡಿದರೂ ಅದು ತಪ್ಪಾಗುತ್ತದೆ. ಈಗಾಗಲೇ ನಮ್ಮ ಹೈಕಮಾಂಡ್ ಉಪ ಮುಖ್ಯಮಂತ್ರಿ ಹುದ್ದೆಯ ಬಗ್ಗೆ ಮಾತನಾಡಬೇಡಿ ಎಂದು ಎಚ್ಚರಿಕೆ ನೀಡಿದೆ. ಆದ್ದರಿಂದ ಡಿಸಿಎಂ ವಿಚಾರವಾಗಿ ನಾನು ಏನನ್ನೂ ಹೇಳುವುದಿಲ್ಲ' ಎಂದರು.

ವಿದ್ಯುತ್ ವ್ಯತ್ಯಯ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ವಿದ್ಯುತ್ ನಿರ್ವಹಣಾ ಕೇಂದ್ರಗಳಲ್ಲಿ ನಿರ್ವಹಣೆ ಕಾಮಗಾರಿ ಕೈಗೊಳ್ಳುವುದರಿಂದ ಇದೇ 20, 21 ಹಾಗೂ 22ರಂದು ವಿವಿಧ ಸ್ಥಳಗಳಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ವ್ಯತ್ಯಯ-ವಾಗಲಿದೆ.

20ಕ್ಕೆ ನಾಗನಾಥಪುರ ವಿದ್ಯುತ್ ನಿರ್ವಹಣಾ ಕೇಂದ್ರ: ಹೊಸೂರು ಮುಖ್ಯರಸ್ತೆ, ಬಂಡೆಪಾಳ್ಯ, ಸಿಂಗಸಂದ್ರ, ಜಿ.ಬಿ. ಪಾಳ್ಯ, ಕೂಡ್ಲು ಗೇಟ್, ಎಇಸಿಎಸ್ ಲೇಔಟ್ ಎ–ಬಿ ಬ್ಲಾಕ್, ಹೊಂಗಸಂದ್ರ, ಓಂಶಕ್ತಿ ಲೇಔಟ್, ಬೊಮ್ಮನಹಳ್ಳಿ, ಬೇಗೂರು ಗೇಟ್, ಬಿಟಿಆರ್ ಉದ್ಯಾನ, ಮುನೇಶ್ವರ ಲೇಔಟ್, ಹರಳುಕುಂಟೆ, ಹೊಸಪಾಳ್ಯ, ಓರ್ಥೋನ್ ಟೆಕ್‌ಪಾರ್ಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

21ಕ್ಕೆ ಖೋಡೆಸ್ ಗ್ಲಾಸ್ ಫ್ಯಾಕ್ಟರಿ ವಿದ್ಯುತ್ ನಿರ್ವಹಣಾ ಕೇಂದ್ರ: ಆವಲಹಳ್ಳಿ, ನಂದಿ ಗಾರ್ಡನ್ ಅಪಾರ್ಟ್‌ಮೆಂಟ್, ಅಂಜನಾಪುರ ಗ್ರಾಮ, ರಾಯಲ್ ಲೇಕ್ ಫ್ರಂಟ್ ವ್ಯೂ ರೆಸಿಡೆನ್ಸಿ, ಬ್ರೂಕ್ಸ್ ಲೇಔಟ್, ವಡ್ಡರಪಾಳ್ಯ, ಆವಲಹಳ್ಳಿ ಸ್ಲಂ, ಶ್ರೀನಿವಾಸ ಬ್ಯಾಂಕ್ ಲೇಔಟ್, ರಾಯಲ್ ಲೇಔಟ್ ಅಧಿಕಾರಿಗಳು ನಾರಾಯಣ ನಗರ 1 ಮತ್ತು 2ನೇ ಬ್ಲಾಕ್, ತಲಘಟ್ಟಪುರ, ನ್ಯಾಯಾಂಗ ಬಡಾವಣೆ, ವಾಜರಹಳ್ಳಿ, ಶೋಭಾ ಅಪಾರ್ಟ್‌ಮೆಂಟ್, ರಾಘವಪಾಳ್ಯ ಗುಂಡು ತೋಪು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

22ಕ್ಕೆ ದೇವರಬೀಸನಹಳ್ಳಿ ವಿದ್ಯುತ್ ನಿರ್ವಹಣಾ ಕೇಂದ್ರ: ಬೆಳ್ಳಂದೂರು, ಆರ್.ಎಂ. ಝಡ್, ದೇವರಬಿಸನಹಳ್ಳಿ, ಕರಿಯಮ್ಮನಪಾಳ್ಯ, ಅಕ್ಮೆ ಪ್ರಾಜೆಕ್ಟ್‌ಗಳು, ಅನುಪಮಾ, ಟೋಟಲ್ ಮಾಲ್, ಶೋಭಾ ಐರಿಸ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

'ಸರ್ಕಾರಿ ಆಸ್ಪತ್ರೆಗಳ ಐಸಿಯು ಬಲಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕ (ಐಸಿಯು) ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸುವ ಅಗತ್ಯ ಇದೆ' ಎಂದು ವೈದ್ಯಕೀಯ ತಜ್ಞರು ಆರೋಗ್ಯ ಇಲಾಖೆಗೆ ಸಲಹೆ ನೀಡಿದರು.

ರಾಜ್ಯದ ಮುಂದಿನ ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಸಿಗಬೇಕಾದ ಆದ್ಯತೆ ಬಗ್ಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ವೈದ್ಯಕೀಯ ತಜ್ಞರೊಂದಿಗೆ ನಗರದಲ್ಲಿ ಶುಕ್ರವಾರ ಸಭೆ ನಡೆಸಿದರು. ನಾರಾಯಣ ಹೃದಯಾಲಯದ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ, ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಪ್ರಾಧ್ಯಾಪಕ ಡಾ.ರವಿ ಕೆ. ಸೇರಿ ವಿವಿಧ ಆಸ್ಪತ್ರೆಗಳ ತಜ್ಞ ವೈದ್ಯರ ಜತೆಗೆ ಆರೋಗ್ಯ ಕ್ಷೇತ್ರದ ಸುಧಾರಣೆ ಬಗ್ಗೆ ಚರ್ಚಿಸಿದರು.

ಐಸಿಯು ಚಿಕಿತ್ಸೆ ವ್ಯವಸ್ಥೆಯನ್ನು ಬಲಪಡಿಸಬೇಕೆಂಬ ತಜ್ಞರ ಸಲಹೆಗೆ ಪ್ರತಿ-ಕ್ರಿಯಿಸಿದ ದಿನೇಶ್ ಗುಂಡೂರಾವ್, 'ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಐಸಿಯು ಬೆಡ್‌ಗಳು ಸಾಕಷ್ಟಿವೆ. ಆದರೆ, ಕೆಲವೆಡೆ ಸಿಬ್ಬಂದಿ ಕೊರತೆಯಿಂದ ಐಸಿಯು ಬೆಡ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಒದಗಿಸುತ್ತಿಲ್ಲ. ಐಸಿಯು ಬೆಡ್‌ಗಳನ್ನು ಜನರಲ್ ಬೆಡ್‌ಗಳಾಗಿ ಬಳಸಲಾ-ಗುತ್ತಿದೆ. ಈ ಬಗ್ಗೆ ಬಜೆಟ್‌ನಲ್ಲಿ ಯೋಜನೆ ರೂಪಿಸಲಾಗುವುದು' ಎಂದರು.

'ನರ್ಸಿಂಗ್ ಕೋರ್ಸ್‌ಗಳನ್ನು ತಾಲ್ಲೂಕು ಆಸ್ಪತ್ರೆ, ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರಾರಂಭಿಸಬೇಕು. ವಿದೇಶಗಳಲ್ಲೂ ಆರೋಗ್ಯ ಸಿಬ್ಬಂದಿಗೆ ಬೇಡಿಕೆ ಹೆಚ್ಚಿದೆ. ಆದ್ದರಿಂದ ಈ ಬಗ್ಗೆ ಕ್ರಮವಹಿಸಬೇಕು' ಎಂದು ಡಾ.ದೇವಿಪ್ರಸಾದ್ ಶೆಟ್ಟಿ ಸಲಹೆ ನೀಡಿದರು.

ಖಾಸಗಿ ಆಸ್ಪತ್ರೆಗಳ ವೈದ್ಯರು 'ಆಯುಷ್ಮಾನ್ ಭಾರತ- ಆರೋಗ್ಯ ಕರ್ನಾಟಕ' ಯೋಜನೆಯಡಿ ಚಿಕಿತ್ಸೆಗಳಿಗೆ ಸರ್ಕಾರ ನೀಡುತ್ತಿರುವ ಚಿಕಿತ್ಸಾ ದರ ಹೆಚ್ಚಾಗಬೇಕು ಎಂದು ಮನವಿ ಮಾಡಿಕೊಂಡರು.

'ಈ ಪ್ರಸ್ತಾವನೆ ಸರ್ಕಾರದ ಮುಂದಿದೆ. ಮುಖ್ಯಮಂತ್ರಿ ಜೊತೆ ಚರ್ಚಿಸಿ, ದರ ಪರಿಷ್ಕರಣೆ ಬಗ್ಗೆ ಶೀಘ್ರದಲ್ಲೇ ತೀರ್ಮಾನ ಕೈಗೊಳ್ಳಲಾಗುವುದು' ಎಂದರು.

'ಶಿಕ್ಷಣ ವಾಸ್ತವದ ಪ್ರಯೋಗ ಶಾಲೆಯಾಗಲಿ'

ಬೆಂಗಳೂರು: ಉನ್ನತ ಶಿಕ್ಷಣ ಬೋಧನೆ ಗಷ್ಟೇ ಸೀಮಿತವಾಗಬಾರದು. ವಾಸ್ತವದ ಪ್ರಯೋಗಗಳಿಗೆ ತೆರೆದುಕೊಳ್ಳುವ ರೀತಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಜಿ.ಜಗದೀಶ್ ಹೇಳಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಉನ್ನತ ಶಿಕ್ಷಣದಲ್ಲಿ 21ನೇ ಶತಮಾನದ ಕೌಶಲಗಳು' ಕುರಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾ-ವಣೆಗಳಾಗಿವೆ. ಬದಲಾವಣೆಗೆ ತಕ್ಕಂತೆ ಉನ್ನತ ಶಿಕ್ಷಣ ಸಂಸ್ಥೆಗಳೂ ಸಜ್ಜುಗೊಳ್ಳಬೇಕು. ಕಲಿಕಾ ವಿಧಾನಗಳು ಬದಲಾಗಬೇಕು. ಅಧ್ಯಾಪಕರು ನಿರಂತರವಾಗಿ ಪುನಃಶ್ಚೇತನಗೊಳ್ಳಬೇಕು ಎಂದರು.

ಲಘು ವಾಹನ ಸಂಚಾರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಣ್ಯ ಮೇಲ್ಸೇತುವೆಯ 'ಸಾಮರ್ಥ್ಯ ಪರೀಕ್ಷೆ' ಮುಕ್ತಾಯವಾಗಿದ್ದು, ಲಘು ವಾಹನಗಳ ಸಂಚಾರಕ್ಕೆ ಶುಕ್ರವಾರ ಬೆಳಿಗ್ಗೆಯಿಂದ ಅವಕಾಶ ಕಲ್ಪಿಸಲಾಗಿದೆ.

ಮೇಲ್ಸೇತುವೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಿದ್ದರಿಂದ ರಾಷ್ಟ್ರೀಯ ಹೆದ್ದಾರಿ–4ರ ತುಮಕೂರು ರಸ್ತೆಯಲ್ಲಿ ಮೂರು ದಿನಗಳ ಕಾಲ ವಿಪರೀತ ದಟ್ಟಣೆ ಉಂಟಾಗಿ, ಸವಾರರು ಸಮಸ್ಯೆಗೆ ಸಿಲುಕಿದ್ದರು. ಪೀಣ್ಯ, ಜಾಲಹಳ್ಳಿ ಕ್ರಾಸ್, ದಾಸರಹಳ್ಳಿ ಜಂಕ್ಷನ್, ನಾಗಸಂದ್ರ ಹಾಗೂ ಟೋಲ್ ಬಳಿ ದಟ್ಟಣೆ ತೀವ್ರವಾಗಿತ್ತು.

ಶುಕ್ರವಾರ ಬೆಳಿಗ್ಗೆ 11ರ ಬಳಿಕ ಮೇಲ್ಸೇತುವೆಯಲ್ಲಿ ಕಾರು, ಜೀಪು, ಆಟೊ, ಬೈಕ್, ಆಂಬುಲೆನ್ಸ್ ಸೇರಿದಂತೆ ಲಘು ವಾಹನಗಳ ಸಂಚಾರಕ್ಕೆ ಅವಕಾಶ ನೀಡಲಾಗಿದ್ದು, ಇದರಿಂದ ಚಾಲಕರು ನಿಟ್ಟುಸಿರು ಬಿಡುವಂತಾಗಿದೆ. ಸದ್ಯಕ್ಕೆ ಲಾರಿ, ಬಸ್ ಹಾಗೂ ಸರಕು ಸಾಗಣೆ ವಾಹನಗಳು ಮೇಲ್ಸೇತುವೆ ಪಕ್ಕದ ಹೆದ್ದಾರಿ ಹಾಗೂ ಸರ್ವೀಸ್ ರಸ್ತೆಯಲ್ಲೇ ಸಂಚರಿಸುತ್ತಿವೆ.

ಮೇಲ್ಸೇತುವೆ ಸಾಮರ್ಥ್ಯ ಪರೀಕ್ಷೆಗಾಗಿ ಜ.16ರಿಂದ 19ರ ಬೆಳಿಗ್ಗೆ 11ರವರೆಗೆ ಎಲ್ಲ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿತ್ತು.

ವರದಿ ಬರಲು ಐದು ದಿನ: '16 ಟ್ರಕ್ ಬಳಸಿ ಎರಡು ಸ್ಥಳಗಳಲ್ಲಿ 250 ಟನ್ ಭಾರ ಹೇರಿ ಮೇಲ್ಸೇತುವೆ ಸಾಮರ್ಥ್ಯ ಪರೀಕ್ಷಿಸಲಾಗಿದೆ. ಪಿಲ್ಲರ್‌ಗಳಲ್ಲಿರುವ ಸ್ಪ್ರಿಂಗ್ ಎಷ್ಟು ಕೆಳಕ್ಕೆ ಇಳಿದಿವೆ ಹಾಗೂ ಹೊಸದಾಗಿ ಅಳವಡಿಕೆ ಮಾಡಿರುವ 240 ಕೇಬಲ್‌ಗಳ ಸಾಮರ್ಥ್ಯ ಹೇಗಿದೆ ಎಂಬುದನ್ನು ತಜ್ಞರು ನಮೂದಿಸಿಕೊಂಡಿದ್ದಾರೆ. ಮೇಲ್ಸೇತುವೆಯು ಭಾರಿ ವಾಹನಗಳ ಸಂಚಾರಕ್ಕೆ ಯೋಗ್ಯವಾಗಿದೆಯೇ? ಇಲ್ಲವೇ ಎಂಬುದರ ಕುರಿತು ಐದು ದಿನಗಳ ಕಾಲ ಅಧ್ಯಯನ ನಡೆಯಲಿದೆ. ನಂತರ, ಹೆದ್ದಾರಿ ಪ್ರಾಧಿಕಾರಕ್ಕೆ ವರದಿ ಸಲ್ಲಿಕೆಯಾಗಲಿದೆ. ಪ್ರಾಧಿಕಾರದ ಅಧಿಕಾರಿಗಳು ಸಭೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ' ಎಂದು ಮೇಲ್ಸೇತುವೆ ಅಧ್ಯಯನ ಸಮಿತಿ ಸದಸ್ಯ ಚಂದ್ರಕಿಶನ್ ತಿಳಿಸಿದರು.

ಸಾಮರ್ಥ್ಯ ಪರೀಕ್ಷೆ ಯಶಸ್ವಿ?: 'ಸಾಮರ್ಥ್ಯ ಪರೀಕ್ಷೆ ಬಹುತೇಕ ಯಶಸ್ವಿಯಾಗಿದ್ದು, ಈ ತಿಂಗಳ ಅಂತ್ಯದಿಂದ ಪೀಣ್ಯ ಮೇಲ್ಸೇತುವೆಯಲ್ಲಿ ಎಲ್ಲ ಮಾದರಿಯ ವಾಹನ ಸಂಚಾರಕ್ಕೆ ಅನುಮತಿ ಲಭಿಸುವ ಸಾಧ್ಯತೆಯಿದೆ. ಪರೀಕ್ಷೆ ವೇಳೆ ಮೇಲ್ಸೇತುವೆ ಸಾಮರ್ಥ್ಯ ಹೆಚ್ಚಿರುವುದು ಕಂಡುಬಂದಿದೆ. 20 ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ಹೆದ್ದಾರಿ ಇದು. ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚಾರ ನಡೆಸುವುದರಿಂದ ತಾಂತ್ರಿಕ ಅಧ್ಯಯನ ನಡೆದ ಮೇಲೆಯೇ ಅಂತಿಮ ವರದಿ ಸಿದ್ಧ ಪಡಿಸಲಾಗುವುದು' ಎಂದು ಮೂಲಗಳು ಹೇಳಿವೆ.

ಪೀಣ್ಯ ಮೇಲ್ಸೇತುವೆ



ಪೀಣ್ಯ ಮೇಲ್ಸೇತುವೆ

833 ವಸತಿ ಶಾಲೆಗಳಲ್ಲಿ ಸ್ಮಾರ್ಟ್ ತರಗತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 833 ವಸತಿ ಶಾಲೆಗಳಲ್ಲಿ ಸ್ಮಾರ್ಟ್ ತರಗತಿಗಳಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಭೆಯಲ್ಲಿ ಅವರು ಮಾತನಾಡಿದರು.

ಮೊರಾರ್ಜಿ, ಕಿತ್ತೂರುರಾಣಿ ಚನ್ನಮ್ಮ ಸೇರಿ ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳ ಮಕ್ಕಳಿಗೂ ಆಧುನಿಕ ಶಿಕ್ಷಣದ ಸೌಲಭ್ಯ ಕಲ್ಪಿಸಲು ನಿರ್ಧರಿಸಲಾಗಿದೆ. ಪ್ರತಿ ವಸತಿ ಶಾಲೆಯಲ್ಲೂ ಕನಿಷ್ಠ ಒಂದು ಕೊಠಡಿಯನ್ನು ಸ್ಮಾರ್ಟ್ ತರಗತಿಗೆ ಸಜ್ಜುಗೊಳಿಸಲಾಗುವುದು. ವಿಡಿಯೊ, ಆನ್‌ಲೈನ್ ಆಧಾರಿತ ಪ್ರಾತ್ಯಕ್ಷಿಕೆಗಳ ಮೂಲಕ ಪಾಠಗಳನ್ನು ಕಲಿಸಲು ವ್ಯವಸ್ಥೆ ಮಾಡಲಾಗುವುದು ಎಂದರು.

ಅಂಬೇಡ್ಕರ್ ಅಭಿವೃದ್ಧಿ ನಿಗಮದ ಯೋಜನೆಗಳನ್ನು ಅರ್ಹ ಬಡವರಿಗೆ ತಲುಪುವಂತೆ ಅಧಿಕಾರಿಗಳು ನಿಗಾವಹಿಸಬೇಕು. ಪರಿಶಿಷ್ಟ ವರ್ಗಗಳ ಬಡವರ ಬದುಕು ಹಸನಾಗಿಸಲು ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಸೂಚಿಸಿದರು.

‘ನಕ್ಷೆ ಸ್ವಯಂ ದೃಢೀಕರಣ’ ವ್ಯವಸ್ಥೆ ಶೀಘ್ರ ಜಾರಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ‘ನಕ್ಷೆ ಸ್ವಯಂ ದೃಢೀಕರಣ’ ವ್ಯವಸ್ಥೆಯನ್ನು ಶೀಘ್ರ ಜಾರಿಗೆ ತರಲಾಗುತ್ತದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಪ್ರಮಾಣೀಕೃತ ವಾಸ್ತುಶಿಲ್ಪಿಗಳಿಂದ ಕಟ್ಟಡ ನಿರ್ಮಾಣ ನಕ್ಷೆಯ ಸ್ವಯಂ ದೃಢೀಕರಣ ವ್ಯವಸ್ಥೆ ಕಲ್ಪಿಸಲು ಯೋಜನೆ ಸಿದ್ಧವಾಗಿದೆ’ ಎಂದು ಹೇಳಿದರು.

ಎಂ.ಜಿ.ರಸ್ತೆಯ ರಂಗೋಲಿ ಮೆಟ್ರೊ ಆರ್ಟ್ ಕೇಂದ್ರದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಟೀರಿಯರ್ ಡಿಸೈನ್ ಶುಕ್ರವಾರ ಏರ್ಪಡಿಸಿದ್ದ ‘ಡಿಸೈನೂರು’ ಹಬ್ಬದಲ್ಲಿ ಅವರು ಮಾತನಾಡಿದರು.

‘ಪ್ರಮಾಣೀಕೃತ ಲೆಕ್ಕಪರಿಶೋಧಕರು ಇರುವಂತೆ, ಪ್ರಮಾಣೀಕೃತ ಕಟ್ಟಡ ವಾಸ್ತುಶಿಲ್ಪಿಗಳನ್ನು ಗುರುತಿಸಲಾಗುವುದು. ಅವರಿಗೆ ಕಟ್ಟಡಗಳ ನಕ್ಷೆ ಸ್ವಯಂ ದೃಢೀಕರಿಸುವ ಅವಕಾಶ ನೀಡಲಾಗುವುದು. ಇದರಿಂದ ನಕ್ಷೆ ಮಂಜೂರಿಗೆ ಬಿಬಿಎಂಪಿಗೆ ಹೋಗುವ ಅಗತ್ಯ ಇರುವುದಿಲ್ಲ. ಅಧಿಕಾರಿಗಳ ಕಿರುಕುಳ ಮತ್ತು ಕೆಲಸ ವಿಳಂಬವೂ ತಪ್ಪುತ್ತದೆ’ ಎಂದರು.

‘ಎಷ್ಟು ಅಳತೆಯ ನಿವೇಶನಗಳ ಕಟ್ಟಡಗಳಿಗೆ ನಕ್ಷೆ ಸ್ವಯಂ ದೃಢೀಕರಣ ವ್ಯವಸ್ಥೆ ಅನ್ವಯವಾಗಲಿದೆ ಎಂಬುದನ್ನು ಶೀಘ್ರ ಪ್ರಕಟಿಸಲಾಗುವುದು. ಕಾನೂನಿನ ಅರಿವಿರುವ ಕಟ್ಟಡ ವಾಸ್ತುಶಿಲ್ಪಿಗಳು ಸರ್ಕಾರದ ನಿರ್ಣಯಕ್ಕೆ ಪೂರಕವಾಗಿ ಕೆಲಸ ಮಾಡಬೇಕು’ ಎಂದು ಹೇಳಿದರು.

‘ನಿರ್ಮಾಣ ಮತ್ತು ವಿನ್ಯಾಸ ಕ್ಷೇತ್ರದಲ್ಲಿ ತಂತ್ರಜ್ಞಾನ ಸಾಕಷ್ಟು ಬೆಳವಣಿಗೆ ಕಂಡಿದೆ. ಈ ಕ್ಷೇತ್ರಕ್ಕೆ ಸೃಜನಶೀಲ ಮತ್ತು ಹೊಸ ಆಲೋಚನೆಗಳ ಅಗತ್ಯವಿದೆ. ತಂತ್ರಜ್ಞಾನ ಬೆಳೆಯುತ್ತಿರುವುದರಿಂದ ಪ್ರತಿ ದಿನವೂ ಈ ಕ್ಷೇತ್ರದಲ್ಲಿ ಸವಾಲುಗಳು ಎದುರಾಗುತ್ತವೆ. ಮುಂದಿನ ದಿನಗಳಲ್ಲಿ ಕಟ್ಟಡ ವಿನ್ಯಾಸಕಾರರಿಗೆ ಹೆಚ್ಚು ಕೆಲಸ ದೊರೆಯುವಂತಾಗಲಿ. ನಿಮ್ಮ ಕೆಲಸದ ವಿಚಾರದಲ್ಲಿ ಏನಾದರೂ ತೊಂದರೆ ಉಂಟಾದರೆ ನನ್ನನ್ನು ನೇರ ಭೇಟಿಯಾಗಿ ಸಮಸ್ಯೆ ತಿಳಿಸಬಹುದು’ ಎಂದರು.

ಗೆಳತಿ ಯೋಜನೆ: ಅರ್ಜಿ ಆಹ್ವಾನ

ಬೆಂಗಳೂರು: ಆ್ಯಸಿಡ್ ದಾಳಿಗೊಳಗಾದ ಮಹಿಳೆಯರಿಗೆ ಪುನರ್ವಸತಿ ಕಲ್ಪಿಸುವ ‘ಗೆಳತಿ ಯೋಜನೆ’ ಅಡಿಯಲ್ಲಿ ಸಹಾಯಧನ ಪಡೆಯಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಅರ್ಜಿ ಆಹ್ವಾನಿಸಿದೆ.

ಗೆಳತಿ ಯೋಜನೆ ಅಡಿಯಲ್ಲಿ ಪ್ರತಿ ಫಲಾನುಭವಿಗೆ ಘಟಕ ವೆಚ್ಚ ₹5 ಲಕ್ಷ (₹2.5 ಲಕ್ಷ ಸಾಲ ಹಾಗೂ ₹2.5 ಲಕ್ಷ ಸಹಾಯಧನ) ನೀಡಲಾಗುತ್ತಿದೆ. ಆ್ಯಸಿಡ್ ದಾಳಿಗೆ ಒಳಗಾದ ಸಂತ್ರಸ್ತ ಮಹಿಳೆಯರು ಇದೇ 31ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಆಯಾ ಜಿಲ್ಲಾ ಉಪ ನಿರ್ದೇಶಕರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, 6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು–560011.

ನಕಲಿ ದಾಖಲೆ ಸೃಷ್ಟಿಸಿ ಸಾಲ ಪಡೆಯುತ್ತಿದ್ದ ಮಧ್ಯವರ್ತಿಗಳಿಗೆ ಸಹಕರಿಸುತ್ತಿದ್ದ ಆರೋಪ

ನಾಲ್ವರು ಬ್ಯಾಂಕ್ ಅಧಿಕಾರಿಗಳ ಬಂಧನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಯಸ್ಕರನ್ನೇ ಗುರಿಯಾಗಿಸಿ ಆಸ್ತಿ ದಾಖಲೆ ಪಡೆದು ವಂಚನೆ
- ಕಮಿಷನ್ ಆಸೆಗೆ ನೆರವು ನೀಡುತ್ತಿದ್ದ ಬ್ಯಾಂಕ್ ಅಧಿಕಾರಿಗಳು
- ತನಿಖೆ ನಡೆಸುತ್ತಿರುವ ಸಿಸಿಬಿ ಪೊಲೀಸರು

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸುವ ಜತೆಗೆ ಮನೆ ಮಾಲೀಕರ ಮನವೊಲಿಸಿ ಆಸ್ತಿ ದಾಖಲಾತಿಗಳನ್ನು ಪಡೆದು ವಂಚನೆ ಮಾಡುತ್ತಿದ್ದ ಮಧ್ಯವರ್ತಿಗಳಿಗೆ ಸಹಕರಿಸುತ್ತಿದ್ದ ಬ್ಯಾಂಕ್‌ನ ನಾಲ್ವರು ಅಧಿಕಾರಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಸೇಂಟ್ ಮಾರ್ಕ್ಸ್ ರಸ್ತೆಯ ಬ್ಯಾಂಕ್‌ವೊಂದರ ಎಜಿಎಂ ಮುರಳೀಧರ್, ಮಹಾಲಕ್ಷ್ಮಿ ಲೇಔಟ್‌ನ ಬ್ಯಾಂಕ್‌ವೊಂದರ ವ್ಯವಸ್ಥಾಪಕ ರಾಕೇಶ್, ಹೊಸಕೋಟೆಯಲ್ಲಿರುವ ಬ್ಯಾಂಕ್‌ನ ಮಲ್ಲಿಕಾರ್ಜುನ್, ಜಯನಗರ ಬ್ಯಾಂಕ್‌ವೊಂದರ ಶಶಿಕಾಂತ್ ಬಂಧಿತರು.

ಮುರಳೀಧರ್, ರಾಕೇಶ್ ದಾಖಲೆ ಪರಿಶೀಲನೆ ನಡೆಸದೇ ಸಾಲ ಮಂಜೂರು ಮಾಡುತ್ತಿದ್ದರು. ಮಲ್ಲಿಕಾರ್ಜುನ್, ಶಶಿಕಾಂತ್ ಅವರು ಮಧ್ಯವರ್ತಿಗಳಿಗೆ ನಕಲಿ ಖಾತೆಗಳನ್ನು ಮಾಡಿಕೊಡುತ್ತಿದ್ದರು. ಇವರು ವಿವಿಧ ಬ್ಯಾಂಕ್‌ಗಳಲ್ಲಿ ವ್ಯವಸ್ಥಾಪಕರಾಗಿ, ಸಹಾಯಕ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು ಎಂದು ಮೂಲಗಳು ಹೇಳಿವೆ.

ಈ ಹಿಂದೆ ಪುಟ್ಟೇನಹಳ್ಳಿ ಹಾಗೂ ಹುಳಿಮಾವು ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು. ಅದನ್ನು ಸಿಸಿಬಿ ವರ್ಗಾವಣೆ ಮಾಡಲಾಗಿತ್ತು. ಈ ಹಿಂದೆ ಐವರು ಏಜೆಂಟರನ್ನು ಬಂಧಿಸಲಾಗಿತ್ತು. ಅವರ ವಿಚಾರಣೆ ವೇಳೆ ನೀಡಿದ ಮಾಹಿತಿ ಆಧರಿಸಿ ಬ್ಯಾಂಕ್ ಅಧಿಕಾರಿಗಳನ್ನು ಈಗ ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ವೃದ್ಧರ ಹೆಸರಿನಲ್ಲಿರುವ ನಿವೇಶನ, ಮನೆ ಖರೀದಿಸುವ ನೆಪದಲ್ಲಿ ಮಧ್ಯವರ್ತಿಗಳು ನಕಲಿ ದಾಖಲೆ ಸೃಷ್ಟಿಸುತ್ತಿದ್ದರು. ಬ್ಯಾಂಕ್ ಅಧಿಕಾರಿಗಳ ಎದುರು ಅಸಲಿ ಎಂದು ಬಿಂಬಿಸಿ ಲಕ್ಷಾಂತರ ರೂಪಾಯಿ ಸಾಲ ಪಡೆಯುತ್ತಿದ್ದರು. ವೃದ್ಧರನ್ನೇ ಗುರಿಯಾಗಿಸುತ್ತಿದ್ದರು. ಡಿಸೆಂಬರ್‌ನಲ್ಲಿ ವಂಚನೆ ಜಾಲ ಪತ್ತೆಯಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಹುಳಿಮಾವಿನಲ್ಲಿ ವೃದ್ಧರೊಬ್ಬರ ಮನೆಯ ದಾಖಲೆ ದುರ್ಬಳಕೆ ಮಾಡಿಕೊಂಡು ಮಧ್ಯವರ್ತಿ, ಬ್ಯಾಂಕ್‌ನಿಂದ ₹ 1.50 ಕೋಟಿ ಸಾಲ ಪಡೆದುಕೊಂಡಿದ್ದ. ಪುಟ್ಟೇನಹಳ್ಳಿಯಲ್ಲಿಯೂ ಮನೆ ಸ್ವತ್ತಿಗೆ ನಕಲಿ ದಾಖಲೆ ಸೃಷ್ಟಿಸಿ ₹ 3.85 ಕೋಟಿ ಪಡೆದುಕೊಳ್ಳಲಾಗಿತ್ತು.

ಮಧ್ಯವರ್ತಿಗಳಾದ ಭಾಸ್ಕರ್ ಕೃಷ್ಣ, ಮಹೇಶ್, ಅರುಣ್, ದಿವಾಕರ್ ಎಂಬುವವರು ಹುಳಿಮಾವು ನಿವಾಸಿಯೊಬ್ಬರ ಮನೆ ಖರೀದಿಸುವ ನೆಪದಲ್ಲಿ ದಾಖಲೆ ಪಡೆದು ಬ್ಯಾಂಕ್‌ಗೆ ಸಲ್ಲಿಸಿ ಸಾಲ ಮಂಜೂರು ಮಾಡಿಸಿಕೊಂಡಿದ್ದರು. ಅವರಿಗೆ ಈ ಬ್ಯಾಂಕ್ ಅಧಿಕಾರಿಗಳು ಕಮಿಷನ್ ಆಸೆಗೆ ನೆರವು ನೀಡಿದ್ದರು.

'ಕಳೆದ ಜುಲೈನಲ್ಲಿ ವೃದ್ಧರೊಬ್ಬರು, ಜೆ.ಪಿ. ನಗರದಲ್ಲಿದ್ದ ಮನೆಯನ್ನು ಮಾರಾಟ ಮಾಡಲು ನಿರ್ಧರಿಸಿದ್ದರು. ಅವರನ್ನು ಭೇಟಿಯಾಗಿದ್ದ ಭಾಸ್ಕರ್ ₹10 ಸಾವಿರ ಮುಂಗಡ ಹಣ ನೀಡಿ ನೀಡಿದ್ದ. ಅಲ್ಲದೇ ದಾಖಲಾತಿಗಳನ್ನೂ ಪಡೆದುಕೊಂಡಿದ್ದ. ಮತ್ತೊಬ್ಬ ಆರೋಪಿಯಿಂದ ಕರೆ ಮಾಡಿಸಿ, ನಾನು ಭಾಸ್ಕರ್ ಸಂಬಂಧಿ. ಮನೆ ಖರೀದಿಗೆ ಭಾಸ್ಕರ್ ಅವರು ಬ್ಯಾಂಕ್‌ನಿಂದ ಸಾಲ ಮಾಡುತ್ತಿದ್ದಾರೆ. ಬ್ಯಾಂಕ್ ಅಧಿಕಾರಿಗಳು ವಿಚಾರಿಸಿದರೆ ಸಹಕಾರ ನೀಡುವಂತೆ ಮನವಿ ಮಾಡಿದ್ದ. ಬಳಿಕ ಬ್ಯಾಂಕ್ ಅಧಿಕಾರಿಗಳ ನೆರವಿನಿಂದ ಸಾಲ ಪಡೆದುಕೊಂಡಿದ್ದ. ನಂತರ ಮನೆ ಮಾಲೀಕರಿಗೆ ಕರೆ ಮಾಡಿ ಸಾಲ ದೊರೆಯದ ಕಾರಣಕ್ಕೆ ಮನೆ ಖರೀದಿ ಸಾಧ್ಯವಾಗುತ್ತಿಲ್ಲವೆಂದು ಹೇಳಿದ್ದ' ಎಂಬುದು ತನಿಖೆಯಿಂದ ಗೊತ್ತಾಗಿದೆ.

ಪ್ರಶ್ನೆ ಪತ್ರಿಕೆ ನೀಡುವ ಆಮಿಷ: ಪಿಎಸ್‌ಐ ವಿಚಾರಣೆ

ಬೆಂಗಳೂರು: 'ವಾಣಿಜ್ಯ ತೆರಿಗೆ ಇಲಾಖೆ ಇನ್‌ಸ್ಪೆಕ್ಟರ್ (ಸಿಟಿಐ) ಹುದ್ದೆಗಳ ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ನೀಡುವುದಾಗಿ ಸಬ್ ಇನ್‌ಸ್ಪೆಕ್ಟರ್‌ವೊಬ್ಬರು ಆಮಿಷವೊಡ್ಡಿ ಹಣಕ್ಕೆ ಬೇಡಿಕೆಯಿಟ್ಟಿದ್ದಾರೆ' ಎಂದು ಆರೋಪಿಸಿ ಪರೀಕ್ಷಾರ್ಥಿಗಳು ಹಾಗೂ ಪೋಷಕರು ಚಂದ್ರಾಲೇಔಟ್ ಪೊಲೀಸ್ ಠಾಣೆ ಎದುರು ಶುಕ್ರವಾರ ರಾತ್ರಿ ಪ್ರತಿಭಟನೆ ನಡೆಸಿದರು.

'ಗುಪ್ತಚರ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಪಿಎಸ್‌ಐ ಆಮಿಷವೊಡ್ಡಿದ್ದಾರೆ. ಅವರು ಮಾತನಾಡಿರುವ ಆಡಿಯೊ ಸಿಕ್ಕಿದೆ. ಪ್ರಶ್ನೆ ಪತ್ರಿಕೆ ನೀಡುವುದಾಗಿ ವಾಟ್ಸ್‌ಆ್ಯಪ್‌ನಲ್ಲಿ ಚರ್ಚಿಸಿದ್ದಾರೆ' ಎಂದು ಪ್ರತಿಭಟನಕಾರರು ದೂರಿದರು.

'ಪಿಎಸ್‌ಐ ಅನ್ನು ಬಂಧಿಸಬೇಕು. ನಮಗೆ ನ್ಯಾಯ ಬೇಕು' ಎಂದು ಪ್ರತಿಭಟನಕಾರರು ಕೋರಿದರು. ಠಾಣೆ ಎದುರು ನೂರಾರು ಅಭ್ಯರ್ಥಿಗಳು ಜಮಾಯಿಸಿದ್ದರಿಂದ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಜ.21ರಂದು ವಾಣಿಜ್ಯ ತೆರಿಗೆ ಇಲಾಖೆ ಇನ್‌ಸ್ಪೆಕ್ಟರ್‌ಗಳ ನೇಮಕಾತಿಗೆ ಪರೀಕ್ಷೆ ನಡೆಯಲಿದೆ. 1.60 ಲಕ್ಷ ಅಭ್ಯರ್ಥಿಗಳು ಸಿಟಿಐ ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಜ.23ರಂದು ಪಿಎಸ್‌ಐ ಪರೀಕ್ಷೆ ನಡೆಯಲಿದೆ. ಎರಡೂ ಪರೀಕ್ಷೆಗಳ ಅಕ್ರಮಕ್ಕೆ ಸಂಚು ರೂಪಿಸುವ ಆರೋಪ ಕೇಳಿ ಬಂದಿದೆ.

'ವಾಟ್ಸ್‌ಆ್ಯಪ್‌ನಲ್ಲಿ ಚರ್ಚಿಸಿರುವ ಪಿಎಸ್‌ಐ ಅನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.



ಮೌಂಟ್ ಕಾರ್ಮೆಲ್ ಕಾಲೇಜಿನ ಮಾನವಿಕ ಶಾಸ್ತ್ರ ವಿಭಾಗದಿಂದ ಶುಕ್ರವಾರ ಆಯೋಜಿಸಿದ್ದ 'ಮನನ' ಕಾರ್ಯಕ್ರಮದಲ್ಲಿ ಕಾಲೇಜಿನ ಹಳೆಯ ವಿದ್ಯಾರ್ಥಿನಿ, ನಟಿ ವಸುಂಧರಾ ದಾಸ್ ಮಾತನಾಡಿದರು.

ಯುವಕನಿಗೆ ಚಾಕು ಇರಿತ

ಬೆಂಗಳೂರು: ದುಷ್ಕರ್ಮಿಗಳ ಗುಂಪೊಂದು ಜೆ.ಜೆ. ನಗರದ ಸಲೂನ್ ಶಾಪ್‌ಗೆ ನುಗ್ಗಿ, ಯುವಕನಿಗೆ ಚಾಕುವಿನಿಂದ ಇರಿದು ಪರಾರಿಯಾಗಿದೆ.

ಜೆ.ಜೆ. ನಗರದ ಶಾಹಿದ್ ಅಹಮದ್ ಇರಿತಕ್ಕೆ ಒಳಗಾದ ಯುವಕ. ಅವರನ್ನು ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಗಿದೆ.

ಆರೋಪಿಗಳಾದ ತಬ್ರೇಜ್ ನದೀಂ, ಗುಡ್ಡು, ವಾಹೀಂ, ರಾಹಿಲ್ ರಿಯಾನ್, ರೋಷನ್, ಸಲೀಂ ತಲೆಮರೆಸಿಕೊಂಡಿದ್ದು ಅವರ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಸಲೂನ್ ಶಾಪ್ ಎದುರು ವಾಹನ ಪಾರ್ಕಿಂಗ್ ವಿಚಾರಕ್ಕೆ ಶಾಹಿದ್ ಹಾಗೂ ಆರೋಪಿಗಳ ನಡುವೆ ಜಗಳ ನಡೆದಿತ್ತು. ಜಗಳ ವಿಕೋಪಕ್ಕೆ ತಿರುಗಿ, ಶಾಹಿದ್ ಮೇಲೆ ಹಲ್ಲೆ ನಡೆಸಲಾಗಿತ್ತು. ಆತಂಕಗೊಂಡ ಶಾಹಿದ್ ಅಹಮದ್ ಪಕ್ಕದಲ್ಲಿದ್ದ ಸಲೂನ್‌ಗೆ ತೆರಳಿ ತಪ್ಪಿಸಿಕೊಳ್ಳಲು ಯತ್ನಿಸಿದ್ದರು. ಇವರನ್ನು ಹಿಂಬಾಲಿಸಿಕೊಂಡು ಬಂದ ಆರೋಪಿಗಳು ಸಲೂನ್ ಶಾಪ್ ಒಳಕ್ಕೆ ನುಗ್ಗಿ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ದೇಶ ತೊರೆಯಲು ಬಾಂಗ್ಲಾ ಮಹಿಳೆಗೆ ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಪ್ರಜೆಯನ್ನು ಪ್ರೀತಿಸಿ ಮದುವೆಯಾಗಿ ನಂತರ ಆತನಿಂದ ದೂರವಾಗಿದ್ದ ಬಾಂಗ್ಲಾ ಮಹಿಳೆಯ ವೀಸಾ ಅವಧಿ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಆಕೆಯನ್ನು ತಾಯ್ನಾಡಿಗೆ ವಾಪಸು ಕಳುಹಿಸುವಂತೆ ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ ಅಧಿಕಾರಿಗೆ (ಎಫ್‌ಆರ್‌ಆರ್‌ಒ) ಹೈಕೋರ್ಟ್ ನಿರ್ದೇಶಿಸಿದೆ.

ವೀಸಾ ಅವಧಿ ವಿಸ್ತರಿಸಲು ನಿರಾಕರಿಸಿ ನಿರ್ಗಮನ ಪರವಾನಗಿ ನೀಡಿದ್ದ ಎಫ್‌ಆರ್‌ಆರ್‌ಒ ಕ್ರಮವನ್ನು ಪ್ರಶ್ನಿಸಿ ಬಾಂಗ್ಲಾದ ರಕ್ತಿಮಾ ಖಾನುಮ್ (46) ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿದಾರರ ವೀಸಾ ಅವಧಿ ಪೂರ್ಣಗೊಂಡಿದ್ದು, ಅದನ್ನು ಸಕ್ಷಮ ಪ್ರಾಧಿಕಾರ ವಿಸ್ತರಿಸಿಲ್ಲ. ದಾಖಲೆಗಳು ಇಲ್ಲದೆ ಭಾರತದ ನೆಲದಲ್ಲಿ ಉಳಿಯಲು ವಿದೇಶಿಯರು ಯಾವುದೇ ಹಕ್ಕನ್ನು ಪ್ರತಿಪಾದಿಸಲಾಗದು' ಎಂದು ನ್ಯಾಯಪೀಠ ತಿಳಿಸಿದೆ.

ಎಫ್‌ಆರ್‌ಆರ್‌ಒ ಪರ ವಾದ ಮಂಡಿಸಿದ್ದ ಡೆಪ್ಯೂಟಿ ಸಾಲಿಸಿಟರ್ ಜನರಲ್ ಶಾಂತಿಭೂಷಣ್, 'ಅರ್ಜಿದಾರರು ನೆಲೆಸಿರುವ ಪ್ರದೇಶ ವ್ಯಾಪ್ತಿಯ ಪೊಲೀಸರು ವೀಸಾ ವಿಸ್ತರಿಸದಂತೆ ಎಫ್‌ಆರ್‌ಆರ್‌ಒಗೆ ಶಿಫಾರಸು ಮಾಡಿದ್ದಾರೆ. ಸದ್ಯ ಆಕೆಯನ್ನು ಪತಿ ತೊರೆದಿದ್ದಾರೆ. ಭಾರತದಲ್ಲಿನ ಆಕೆಯ ಕಾರ್ಯ ಚಟುವಟಿಕೆ ಸಂಶಯಾಸ್ಪದವಾಗಿದೆ. ಆಕೆ ಭಾರತದಲ್ಲಿಯೇ ಉಳಿಯಲು ಯಾವುದೇ ಸಹಾನುಭೂತಿ ತೋರಿಸಬಾರದು' ಎಂಬ ಮನವಿಯನ್ನು ನ್ಯಾಯಪೀಠ ಮನ್ನಿಸಿದೆ.

'ಅವಧಿ ಮೀರಿ ಭಾರತದಲ್ಲಿ ನೆಲೆಸಿರುವ ವಿದೇಶಿಯರನ್ನು ದೇಶದಿಂದ ಹೊರಹಾಕಲು ಕೇಂದ್ರ ಸರ್ಕಾರ ಅಧಿಕಾರ ಹೊಂದಿದೆ. ರಾಷ್ಟ್ರಕ್ಕೆ ಅಪಾಯವಿರುವ ಪ್ರಕರಣಗಳಲ್ಲಿ ಸಹಾನುಭೂತಿ ತೋರಿಸಲಾಗದು. ಅರ್ಜಿದಾರರನ್ನು ದೇಶದಿಂದ ಹೊರಗೆ ಕಳುಹಿಸಲು ಎಫ್‌ಆರ್‌ಆರ್‌ಒ ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಪ್ರಕರಣವೇನು?: ರಕ್ತಿಮಾ ಖಾನುಮ್ (46) ಬಾಂಗ್ಲಾ ದೇಶದವರು. ಭಾರತದ ಜನಾರ್ದನ ರೆಡ್ಡಿ ಅವರನ್ನು ಪ್ರೀತಿಸಿ 2017ರ ಡಿಸೆಂಬರ್ 25ರಂದು ಮದುವೆಯಾಗಿದ್ದರು. ಬಳಿಕ ಜನಾರ್ದನ ರೆಡ್ಡಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿದ್ದರು. ಸ್ವಲ್ಪ ಕಾಲ ದಂಪತಿ ಚೆನ್ನೈನಲ್ಲಿ ವಾಸವಾಗಿದ್ದರು. ಭಿನ್ನಾಭಿಪ್ರಾಯ ಉಂಟಾದ ಕಾರಣ ಅವರಿಬ್ಬರೂ ಪ್ರತ್ಯೇಕಗೊಂಡಿದ್ದರು.

2019ರಲ್ಲಿ ರಕ್ತಿಮಾ ಅವರ ಪ್ರವಾಸಿ ವೀಸಾ ಅವಧಿ ಕೊನೆಗೊಂಡಿತ್ತು. ಪ್ರವಾಸಿ ವೀಸಾವಾಗಿ ವೀಸಾವನ್ನು ಪರಿವರ್ತಿಸಿಕೊಂಡಿದ್ದ ಅವರು ಭಾರತಲ್ಲಿಯೇ ನೆಲೆಸಿದ್ದರು. ಈ ಪರಿವರ್ತಿತ ವೀಸಾ ಅವಧಿಯೂ 2022ರ ಆಗಸ್ಟ್ 20ರಂದು ಕೊನೆಗೊಂಡಿತ್ತು. ಸದ್ಯ ಬೆಂಗಳೂರಿನಲ್ಲಿ ನೆಲೆಸಿರುವ ರಕ್ತಿಮಾ, ವೀಸಾ ವಿಸ್ತರಣೆಗೆ ಅರ್ಜಿ ಸಲ್ಲಿಸಿದ್ದರು.

ಸುದ್ದಿ 2 ನಿಮಿಷ

ಬೈಕ್ ಕಳವು: ಇಬ್ಬರ ಬಂಧನ

ಬೆಂಗಳೂರು: ಮನೆಯ ಎದುರು ನಿಲುಗಡೆ ಮಾಡಿರುವ ಬೈಕ್‌ಗಳ ಹ್ಯಾಂಡಲ್ ಲಾಕ್ ತೆಗೆದು ಬೈಕ್ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ವಿಲ್ಸನ್‌ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಲ್ಸನ್‌ಗಾರ್ಡನ್ ನಿವಾಸಿಗಳಾದ ಅರ್ಷದ್ ಖಾನ್, ಪ್ರದೀಪ್ ಬಂಧಿತರು.

ಬಂಧಿತರಿಂದ ₹4 ಲಕ್ಷ ಮೌಲ್ಯದ ಏಳು ಬೈಕ್, 1 ಕಾರು ಜಪ್ತಿ ಮಾಡಿಕೊಳ್ಳಲಾಗಿದೆ.

'ರಾತ್ರಿ ವೇಳೆ ಮನೆ ಎದುರು ನಿಲುಗಡೆ ಮಾಡುತ್ತಿದ್ದ ಬೈಕ್‌ಗಳನ್ನೇ ಗುರಿಯಾಗಿಸಿ ಕಳವು ಮಾಡುತ್ತಿದ್ದರು. ಬಳಿಕ ಕಡಿಮೆ ಬೆಲೆಗೆ ಮಾರಾಟ ಮಾಡಿ ಅದರಿಂದ ಬಂದ ಹಣದಲ್ಲಿ ವಿಲಾಸಿ ಜೀವನ ನಡೆಸುತ್ತಿದ್ದರು. ವಿಲ್ಸನ್ ಗಾರ್ಡನ್ ಸೇರಿದಂತೆ ನಗರದ ಬೇರೆ ಬೇರೆ ಠಾಣೆಗಳ ವ್ಯಾಪ್ತಿಯಲ್ಲಿ ಇಬ್ಬರು ಆರೋಪಿಗಳು ಬೈಕ್ ಕಳವು ನಡೆಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಸೆಂಟ್ರಿಂಗ್ ಕುಸಿದು ಇಬ್ಬರು ಕಾರ್ಮಿಕರ ಸಾವು



ಆನೇಕಲ್: ತಾಲ್ಲೂಕಿನ ಬಾಡರಹಳ್ಳಿ ಬಳಿ ಶುಕ್ರವಾರ ನಿರ್ಮಾಣ ಹಂತದಲ್ಲಿದ್ದ ಖಾಸಗಿ ಶಾಲೆ ಕಟ್ಟಡದ ಸೆಂಟ್ರಿಂಗ್ ಕುಸಿದು ಇಬ್ಬರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. 17 ಮಂದಿ ಕಾರ್ಮಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಪಶ್ಚಿಮ ಬಂಗಾಳ ಕೋಲ್ಕತ್ತ ಮೂಲದ ಸಾಯಿದ್ ಅಲಿ ಮಂಡಲ್ (40), ಮಿನಾಲ್ ಬಿಶ್ವಾಸ್ (30) ಮೃತ ಕಾರ್ಮಿಕರು.

ಗಾಯಾಳುಗಳನ್ನು ಆನೇಕಲ್‌ನ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಇಬ್ಬರ ಸ್ಥಿತಿ ಗಂಭೀರವಾಗಿದ್ದು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ 19 ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಶುಕ್ರವಾರ ಬೆಳಿಗ್ಗೆ ಕಟ್ಟಡದ ಎರಡನೇ ಮಹಡಿಯಲ್ಲಿ ಕಾಂಕ್ರಿಟ್ ಹಾಕುವ ವೇಳೆ ಸೆಂಟ್ರಿಂಗ್ ಕುಸಿದಿದೆ.

ಕ್ರಮ: ಸ್ಥಳಕ್ಕೆ ಭೇಟಿ ನೀಡಿದ ಸಂಸದ ಡಿ.ಕೆ.ಸುರೇಶ್, ಈ ಸಂಬಂಧ ತನಿಖೆ ನಡೆಸಿ ನಿರ್ಲಕ್ಷ್ಯ ವಹಿಸಿದವರ ವಿರುದ್ಧ ಕ್ರಮಕೈಗೊಳ್ಳಲು ಪೊಲೀಸರು ಮತ್ತು ಕಾರ್ಮಿಕ ಇಲಾಖೆಗೆ ಸೂಚಿಸಲಾಗಿದೆ ಎಂದರು.

ಅನಂತಕುಮಾರ ಹೆಗಡೆ ವಿರುದ್ಧ ದೂರು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಹೇಳಿಕೆ ನೀಡಿರುವ ಉತ್ತರ ಕನ್ನಡ ಜಿಲ್ಲೆಯ ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ಕಾಂಗ್ರೆಸ್ ಮುಖಂಡ ಸನತ್ ಕುಮಾರ್ ಅವರು ಬಾಗಲಗುಂಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. 'ದೂರು ಸ್ವೀಕರಿಸಲಾಗಿದೆ. ಎಫ್‌ಐಆರ್ ದಾಖಲಿಸಿಕೊಂಡಿಲ್ಲ. ಕುಮಟಾ ಪೊಲೀಸ್ ಠಾಣೆಯಲ್ಲಿ ಈಗಾಗಲೇ ಇದೇ ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಾಗಿದೆ. ಮತ್ತೊಮ್ಮೆ ಎಫ್‌ಐಆರ್ ಮಾಡಿಕೊಳ್ಳಲು ಆಗುವುದಿಲ್ಲ. ಕಾನೂನು ತಜ್ಞರ ಸಲಹೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದರು.

'ವಿಪ್ ಉಲ್ಲಂಘಿಸಿ ಅನರ್ಹ: ಚುನಾವಣೆ ಸ್ಪರ್ಧೆಗೆ ಅಡ್ಡಿಯಿಲ್ಲ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಪಕ್ಷದ ವಿಪ್ ಉಲ್ಲಂಘಿಸಿದ ಆರೋಪದಡಿ ಅನರ್ಹಗೊಂಡ ಸ್ಥಳೀಯ ಸಂಸ್ಥೆ ಸದಸ್ಯರು ಭವಿಷ್ಯದಲ್ಲಿನ ಚುನಾವಣೆ ಮತ್ತು ಉಪ ಚುನಾವಣೆಗಳಲ್ಲಿ ಸ್ಪರ್ಧಿಸಲು ನಿರ್ಬಂಧ ಇರುವುದಿಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಚುನಾವಣಾಧಿಕಾರಿ ಕ್ರಮ ಪ್ರಶ್ನಿಸಿ ಚಿಕ್ಕಬಳ್ಳಾಪುರ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಕೆ.ಎಂ.ಮುನೇಗೌಡ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಶ್ರೀಮಂತ ಬಾಳಾಸಾಹೇಬ ಪಾಟೀಲ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಆದೇಶದಲ್ಲಿ, 191(2)ರ ಅಡಿಯಲ್ಲಿ ಅನರ್ಹಗೊಂಡರೆ ಮಾತ್ರ ಅದು ಸದಸ್ಯತ್ವಕ್ಕೆ ಅನ್ವಯವಾಗಲಿದೆ' ಎಂದು ತಿಳಿಸಿದೆ.

ಪ್ರಕರಣವೇನು?: ಚಿಂತಾಮಣಿ ನಗರಸಭೆ ಸದಸ್ಯ ಸ್ಥಾನಕ್ಕೆ 2023ರ ಡಿಸೆಂಬರ್ 27ರಂದು ನಿಗದಿಯಾಗಿದ್ದ ಉಪ ಚುನಾವಣೆಗೆ ಮೊಹಮದ್ ಶಫೀಕ್ ನಾಮಪತ್ರ ಸಲ್ಲಿಸಿದ್ದರು.

ಅವರು ವಿಪ್ ಉಲ್ಲಂಘನೆ ಆರೋಪದಡಿ ಅನರ್ಹಗೊಂಡಿದ್ದರು.

ಈ ನಾಮಪತ್ರವನ್ನು ಚುನಾವಣಾಧಿಕಾರಿ 2023ರ ಡಿಸೆಂಬರ್ 16ರಂದು ಅಂಗೀಕರಿಸಿದ್ದರು.

ಇದನ್ನು ಪ್ರಶ್ನಿಸಿದ್ದ ಮುನೇಗೌಡ, 'ವಿಪ್ ಉಲ್ಲಂಘನೆ ಆರೋಪದಡಿ ಶಫೀಕ್ ಅನರ್ಹಗೊಂಡಿದ್ದಾರೆ. ಹಾಗಾಗಿ, ಅವರ ಅರ್ಜಿ ತಿರಸ್ಕರಿಸಬೇಕು' ಎಂದು ಚುನಾವಣಾಧಿಕಾರಿಗೆ ಮನವಿ ಮಾಡಿದ್ದರು. ಈ ಮನವಿಯನ್ನು ಚುನಾವಣಾಧಿಕಾರಿ ತಿರಸ್ಕರಿಸಿದ್ದರು. ಇದನ್ನು ಪ್ರಶ್ನಿಸಿ ಮುನೇಗೌಡ ಹೈಕೋರ್ಟ್ ಮೆಟ್ಟಿಲೇರಿದ್ದರು.

ನೇಮಕಾತಿ ಹಗರಣ: ಇ.ಡಿ ಶೋಧ

ಮಂಗಳೂರು: ಕೋಲಾರ– ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟದ (ಕೋಚಿಮುಲ್) ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಶೋಧ ನಡೆಸಿದರು.

ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ, ಪರೀಕ್ಷಾಂಗ ಹಾಗೂ ಆಡಳಿತ ಕುಲಸಚಿವರ ಕಚೇರಿ, ಬ್ಯಾಂಕ್‌ಗಳಲ್ಲಿ ಪರಿಶೀಲನೆ ನಡೆಸಿ, ಕೊಚಿಮುಲ್ ನೇಮಕಾತಿ ಹಗರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದಾಳಿ ನಡೆಸಿರುವುದನ್ನು ಇ.ಡಿ ಅಧಿಕಾರಿಗಳು ಖಚಿತಪಡಿಸಿದ್ದಾರೆ. ಕೆಲವು ದಿನಗಳ ಹಿಂದೆ ಮಂಗಳೂರು ವಿಶ್ವವಿದ್ಯಾಲಯಕ್ಕೆ ನೋಟಿಸ್ ಜಾರಿಯಾಗಿತ್ತು. ಕೊಚಿಮುಲ್ ನೇಮಕಾತಿಗೆ ಸಂಬಂಧಿಸಿದ ಪರೀಕ್ಷೆಯನ್ನು ವಿಶ್ವವಿದ್ಯಾಲಯವು ನಡೆಸಿ, ಮೌಲ್ಯಮಾಪನ ನಡೆಸಿತ್ತು. ಇದರಲ್ಲಿ ಅವ್ಯವಹಾರ ನಡೆದಿರುವ ಶಂಕೆ ಇದೆ. ಈ ಪ್ರಕರಣದಲ್ಲಿ ಕೆಲ ಸಿಬ್ಬಂದಿಯೂ ಭಾಗಿಯಾಗಿರುವ ಅನುಮಾನ ಇದ್ದು, ಅವರು ತಲೆಮರೆಸಿಕೊಂಡಿದ್ದಾರೆ ಎಂದು ಉನ್ನತ ಮೂಲಗಳು ದೃಢಪಡಿಸಿವೆ.

ಈ ಸಂಬಂಧ ಮಾಹಿತಿ ಪಡೆಯಲು ಕುಲಸಚಿವರನ್ನು ಸಂಪರ್ಕಿಸಲು ಪ್ರಯತ್ನಿಸಿದರೂ, ಅವರು ಲಭ್ಯರಾಗಲಿಲ್ಲ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಒಕ್ಕೂಟದ ಅಧ್ಯಕ್ಷ ಲೋಲಾಕ್ಷ ಮಾತನಾಡಿ, 'ಮಂಗಳೂರು ವಿಶ್ವವಿದ್ಯಾಲಯದ ಮೇಲೆ ನಡೆದಿರುವ ಇ.ಡಿ ದಾಳಿ ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡಿದೆ' ಎಂದರು.

ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ

ವೇತನ ಹೆಚ್ಚಳಕ್ಕೆ ಹಾಸ್ಟೆಲ್ ಕಾರ್ಮಿಕರ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ, ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕ ಸಂಘದ ನೇತೃತ್ವದಲ್ಲಿ ಹಾಸ್ಟೆಲ್ ಕಾರ್ಮಿಕರು ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಿದರು.

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ವಿವಿಧ ವಿಶ್ವವಿದ್ಯಾಲಯಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ನಡೆಯುತ್ತಿರುವ ವಸತಿ ನಿಲಯಗಳು, ವಸತಿ ಶಾಲೆಗಳು, ವಸತಿ ಕಾಲೇಜು ಹಾಗೂ ಆಶ್ರಮ ಶಾಲೆಗಳಲ್ಲಿ ಹೊರಗುತ್ತಿಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಲಕ್ಷಾಂತರ ಮಕ್ಕಳ ಉತ್ತಮ ವಿದ್ಯಾಭ್ಯಾಸಕ್ಕೆ ಪೂರಕವಾಗಿ ಮಕ್ಕಳಿಗೆ ಊಟ, ವಸತಿ, ಸುರಕ್ಷತೆ ಕಲ್ಪಿಸುತ್ತಿದ್ದಾರೆ. ಕನಿಷ್ಠ ಕೂಲಿಯಲ್ಲೇ ಮಹತ್ವದ ಸೇವೆ ಒದಗಿಸುತ್ತಿದ್ದಾರೆ. ಅವರ ವೇತನವನ್ನು ತಿಂಗಳಿಗೆ ₹35,950ಕ್ಕೆ ಹೆಚ್ಚಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಅಡುಗೆ ಸಿಬ್ಬಂದಿ, ಅಡುಗೆ ಸಹಾಯಕರು, ಕಾವಲುಗಾರರ ಕೆಲಸವನ್ನು ಕಾಯಂ ಮಾಡಬೇಕು. ಸಮಾಜ ಕಲ್ಯಾಣ ಇಲಾಖೆ ಸಿಬ್ಬಂದಿ ಕಡಿತದ ಆದೇಶವನ್ನು ತಕ್ಷಣವೇ ಹಿಂದಕ್ಕೆ ಪಡೆಯಬೇಕು. ಬಾಕಿ ವೇತನವನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕ ಸಂಘದ ನೇತೃತ್ವದಲ್ಲಿ ಹಾಸ್ಟೆಲ್ ಕಾರ್ಮಿಕರು ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಸಂಘದ ರಾಜ್ಯ ಸಮಿತಿಯ ಕೆ.ವಿ. ಭಟ್ ಮಾತನಾಡಿ, 'ಕೆಲವು ಜಿಲ್ಲೆಗಳಲ್ಲಿ ರೊಟ್ಟಿ ಮಾಡುವ ಕೆಲಸವನ್ನು ಹಾಸ್ಟೆಲ್ ಕಾರ್ಮಿಕರು ಮಾಡಬೇಕಿದೆ. ಹೀಗಾಗಿ ಹೆಚ್ಚಿನ ಸಿಬ್ಬಂದಿ ಅಗತ್ಯವಿದ್ದು ಸಿಬ್ಬಂದಿ ನೇಮಿಸಬೇಕು. ಆಶ್ರಮ ಶಾಲೆಗಳಲ್ಲಿ ಕಾವಲುಗಾರರು ಇಲ್ಲದೇ ಸಮಸ್ಯೆಯಾಗಿದೆ. ತಕ್ಷಣವೇ ಕಾವಲುಗಾರರನ್ನು ನೇಮಿಸಬೇಕು' ಎಂದು ಕೋರಿದರು.

'ವಾರದ ರಜೆ, ರಾಷ್ಟ್ರೀಯ ಹಬ್ಬಗಳ ರಜೆ, ಸಾಂದರ್ಭಿಕ ರಜೆಗಳನ್ನು ನೀಡಬೇಕು ಅಥವಾ ರಜೆಯ ದಿನಗಳಂದು ಕೆಲಸ ಮಾಡಿಸಿಕೊಂಡಲ್ಲಿ ಕಾರ್ಮಿಕ ಕಾಯ್ದೆಯನ್ವಯ ದುಪ್ಪಟ್ಟು ವೇತನ ಪಾವತಿಸಬೇಕು' ಎಂದರು.

ಲಾಕ್‌ಡೌನ್ ಅವಧಿಯ ವೇತನವನ್ನು ತಕ್ಷಣವೇ ಪಾವತಿಸಬೇಕು. ತಿಂಗಳ ವೇತನ, ಇಪಿಎಫ್, ಇಎಸ್‌ಐ ವಂತಿಗೆಯನ್ನು ಪ್ರತಿತಿಂಗಳು ನೀಡದ ಗುತ್ತಿಗೆ ಏಜೆನ್ಸಿಯವರ ಮೇಲೆ ದೂರು ದಾಖಲಿಸಬೇಕು ಎಂದೂ ಆಗ್ರಹಿಸಿದರು.

ಬಿಬಿಎಂಪಿ ಎಇ, ಗ್ಯಾಂಗ್‌ಮನ್ ಬಂಧನ

ಪ್ರಜಾವಾಣಿ ವಾರ್ತೆ



ಪ್ರವೀಣ್ ಬಿರಾದಾರ್



ಸುರೇಶ್

ಬೆಂಗಳೂರು: ವಿದ್ಯುತ್ ಕೇಬಲ್‌ಗಳ ಬದಲಾವಣೆ ಮತ್ತು ರಸ್ತೆ ಅಗೆಯಲು ಅನುಮತಿ ನೀಡಲು ₹ 25,000 ಲಂಚ ಪಡೆದ ಬಿಬಿಎಂಪಿ ಪ್ರಶಾಂತ್ ನಗರ ವಾರ್ಡ್‌ನ ಸಹಾಯಕ ಎಂಜಿನಿಯರ್ ಪ್ರವೀಣ್ ಬಿರಾದಾರ್ ಮತ್ತು ಗ್ಯಾಂಗ್‌ಮನ್ ಸುರೇಶ್ ಅವರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಶ್ರೀ ಚಕ್ರ ಎಲೆಕ್ಟ್ರಿಕಲ್ಸ್ ಎಂಬ ಖಾಸಗಿ ಕಂಪನಿಯು ವಿದ್ಯುತ್ ಕೇಬಲ್ ಬದಲಾವಣೆ ಕಾಮಗಾರಿಗೆ ರಸ್ತೆ ಅಗೆಯಲು ಅನುಮತಿ ಕೋರಿತ್ತು. ಅನುಮತಿ ನೀಡಲು ₹35,000 ಲಂಚ ನೀಡುವಂತೆ ಸಹಾಯಕ ಎಂಜಿನಿಯರ್ ಬೇಡಿಕೆ ಇಟ್ಟಿದ್ದರು. ಚೌಕಾಸಿ ನಡೆಸಿದಾಗ ₹ 25,000 ಲಂಚ ಕೊಟ್ಟರಷ್ಟೆ ಅನುಮತಿ ನೀಡುವುದಾಗಿ ಆರೋಪಿ ಹೇಳಿದ್ದರು.

ಈ ಕುರಿತು ಖಾಸಗಿ ಕಂಪನಿಯ ಎಂಜಿನಿಯರ್ ಬಿ.ಎಸ್. ರಘುನಂದನ್, ಲೋಕಾಯುಕ್ತದ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು. ಪ್ರಶಾಂತ್ ನಗರ ಬಿಬಿಎಂಪಿ ವಾರ್ಡ್ ಕಚೇರಿಗೆ ಶುಕ್ರವಾರ ಸಂಜೆ ತೆರಳಿದ ದೂರುದಾರರು, ಸಹಾಯಕ ಎಂಜಿನಿಯರ್ ಅವರನ್ನು ಭೇಟಿ ಮಾಡಿದರು.

ಪ್ರವೀಣ್ ಸೂಚನೆಯಂತೆ ಸುರೇಶ್ ಹಣ ಪಡೆದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು, ಇಬ್ಬರೂ ಆರೋಪಿಗಳನ್ನು ಬಂಧಿಸಿದರು ಎಂದು ಲೋಕಾಯುಕ್ತದ ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕದ ಎಸ್‌ಪಿ–1 ಶ್ರೀನಾಥ್ ಜೋಶಿ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಡಿವೈಎಸ್‌ಪಿ ಬಸವರಾಜ್ ಮಗ್ದುಂ, ಇನ್‌ಸ್ಪೆಕ್ಟರ್‌ಗಳಾದ ಕೇಶವಮೂರ್ತಿ, ಆನಂದ್, ಮಂಜುನಾಥ್ ಹೂಗಾರ್ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ಚಿನ್ನದ ಸರ ಕಸಿದು ಪರಾರಿ: ಬಂಧನ

ಬೆಂಗಳೂರು: ರಾಜರಾಜೇಶ್ವರಿ ನಗರದ ರಶ್ಮಿ ರೈಸ್ ಅಪಾರ್ಟ್‌ಮೆಂಟ್‌ನಲ್ಲಿ ಲಿಫ್ಟ್ ಹತ್ತುವ ಸಂದರ್ಭದಲ್ಲಿ ಮಹಿಳೆಯೊಬ್ಬರಿಂದ ಚಿನ್ನದ ಸರ ಕಸಿದು ಪರಾರಿಯಾಗಿದ್ದ ಆರೋಪಿಯನ್ನು ಆರ್.ಆರ್.ನಗರ ಪೊಲೀಸರು ಬಂಧಿಸಿದ್ದಾರೆ.

ಬ್ಯಾಟರಾಯನಪುರದ ಟಿಂಬರ್ ಯಾರ್ಡ್ ಲೇಔಟ್‌ನ ರಾಘವನಗರದ ವಿ.ಎಂ.ಸುಮಂತ್ (23) ಬಂಧಿತ ಆರೋಪಿ.

ಆರೋಪಿಯಿಂದ ₹3 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಬಂಧಿತ ವಿದ್ಯಾರ್ಥಿಯಾಗಿದ್ದು, ಹಣಕ್ಕಾಗಿ ಚಿನ್ನದ ಸರ ಕಸಿದು ಪರಾರಿಯಾಗಿದ್ದ ಎಂಬುದು ತನಿಖೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

'ಸ್ನೇಹಿತರ ಮನೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ತೆರಳಿದ್ದ ಮಹಿಳೆ, ಫ್ಲ್ಯಾಟ್‌ಗೆ ಮರಳಲು ಅಪಾರ್ಟ್‌ಮೆಂಟ್‌ನ ಲಿಫ್ಟ್ ಬಳಿಯಿದ್ದ ವೇಳೆ ಆರೋಪಿ ಚಿನ್ನದ ಸರ ಕಸಿದು ಪರಾರಿಯಾಗಿದ್ದ. ಈ ಸಂಬಂಧ ಎಚ್.ಎಂ.ಸುವರ್ಣ ಅವರು ದೂರು ನೀಡಿದ್ದರು. ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಬೆಳ್ಳಿ ಇಟ್ಟಿಗೆ ಸಮರ್ಪಿಸಲು ತೆರಳಿದ ರಾಮ ಭಕ್ತರ ತಂಡ

ಅಯೋಧ್ಯೆಗೆ ಹೊರಟ ಹೂಡಿ ಗ್ರಾಮಸ್ಥರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿ ಪ್ರತಿಷ್ಠಾಪನೆಯ ಹಿನ್ನೆಲೆಯಲ್ಲಿ ಹೂಡಿ ಹಾಗೂ ಸುತ್ತಮುತ್ತಲಿನ ಗ್ರಾಮದ ರಾಮನ ಭಕ್ತರು ಎರಡು ಕೆ.ಜಿ ತೂಕದ ಬೆಳ್ಳಿ ಇಟ್ಟಿಗೆಯನ್ನು ರಾಮಮಂದಿರಕ್ಕೆ ಸಮರ್ಪಿಸಲು ಹೂಡಿ ಮಂಜುನಾಥ್ ನೇತೃತ್ವದಲ್ಲಿ ಅಯೋಧ್ಯೆಗೆ ಪ್ರಯಾಣ ಬೆಳೆಸಿದರು.

ಅಯೋಧ್ಯೆಗೆ ಪ್ರಯಾಣ ಬೆಳೆಸುವ ಮುನ್ನ ಗ್ರಾಮಸ್ಥರೊಂದಿಗೆ ಹೂಡಿ ಗ್ರಾಮದ ಶ್ರೀವಿನಾಯಕ ದೇವಸ್ಥಾನದಲ್ಲಿ ಬೆಳ್ಳಿ ಇಟ್ಟಿಗೆಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

2019ರಲ್ಲಿ ಹೂಡಿ ಗ್ರಾಮದ ಮಂಜುನಾಥ್ ಮತ್ತು ಹನ್ನೆರಡು ಜನರ ತಂಡ, ರಾಮ ಮಂದಿರ ನಿರ್ಮಾಣವಾಗಬೇಕು ಎಂಬ ಆಶಯದೊಂದಿಗೆ ತಲೆಯ ಮೇಲೆ ಇಟ್ಟಿಗೆ ಹೊತ್ತು ಹೂಡಿ ಗ್ರಾಮದಿಂದ ಅಯೋಧ್ಯೆಯವರೆಗೂ ಪಾದಯಾತ್ರೆ ಬೆಳೆಸಿದ್ದರು. 66 ದಿನಗಳ ಈ ಪಾದಯಾತ್ರೆ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ ರಾಜ್ಯಗಳ ಮೂಲಕ ಅಯೋಧ್ಯೆ ತಲುಪಿತ್ತು.



ಹೂಡಿ ಗ್ರಾಮದ ಶ್ರೀವಿನಾಯಕ ದೇವಸ್ಥಾನದಲ್ಲಿ ಮಂಜುನಾಥ್ ಅವರು ಬೆಳ್ಳಿ ಇಟ್ಟಿಗೆಗೆ ವಿಶೇಷ ಪೂಜೆ ಸಲ್ಲಿಸಿದರು. ಕೇಬಲ್ ಮಂಜುನಾಥ್, ಮಂಜಯ್ಯ, ಕೇಡಿ ವೆಂಕಟೇಶ್, ಮುನಿಕೃಷ್ಣ, ವೇಣು, ಆಂಜಿ, ರಕ್ಷಿತ್ ಇದ್ದರು

ಪಾದಯಾತ್ರೆ ಮುಗಿಸಿ ಬಂದ 18ನೇ ದಿನಕ್ಕೆ ಸುಪ್ರೀಂಕೋರ್ಟ್ ಐತಿಹಾಸಿಕ ತೀರ್ಪು ನೀಡಿ ರಾಮ ಮಂದಿರ ನಿರ್ಮಾಣಕ್ಕೆ ಆದೇಶ ನೀಡಿತ್ತು. ತಲೆಯ ಮೇಲೆ ಹೊತ್ತು ಅಯೋಧ್ಯೆಗೆ ಕೊಂಡೊಯ್ದಿದ್ದ ಇಟ್ಟಿಗೆಯನ್ನು ರಾಮ ಮಂದಿರ ಶಿಲಾನ್ಯಾಸದ ದಿನದಂದು ಬಳಸುವಂತೆ ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಬರೆಯಲಾಗಿತ್ತು.

ರಾಮಭಕ್ತ ಹೂಡಿ ಮಂಜುನಾಥ್ ಮಾತನಾಡಿ, 'ನಮ್ಮ ಬಹುದಿನಗಳ ಕನಸು ನನಸಾಗಿದೆ. ಆದ್ದರಿಂದ ಹೂಡಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರೆಲ್ಲ ಸೇರಿ ಬೆಳ್ಳಿ ಇಟ್ಟಿಗೆಯನ್ನು ಸಮರ್ಪಿಸಲು ಅಯೋಧ್ಯೆಗೆ ಹೋಗುತ್ತಿದ್ದೇವೆ' ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೇಬಲ್ ಮಂಜುನಾಥ್, ಮಂಜಯ್ಯ, ಕೇಡಿ ವೆಂಕಟೇಶ್, ಮುನಿಕೃಷ್ಣ, ವೇಣು, ಆಂಜಿ, ರಕ್ಷಿತ್ ಇದ್ದರು.

ಶಿಕ್ಷಕರ ಕ್ಷೇತ್ರ: ಅಭ್ಯರ್ಥಿ ಕಣಕ್ಕಿಳಿಸಲು ಬಿಜೆಪಿ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪ ಚುನಾವಣೆಗೆ ಹಾಸನದ ಮಾಜಿ ಶಾಸಕ ಪ್ರೀತಂ ಗೌಡ ಅಥವಾ ವಿಧಾನ ಪರಿಷತ್ ಮಾಜಿ ಸದಸ್ಯ ಅಶ್ವತ್ಥ ನಾರಾಯಣ ಗೌಡ ಅವರನ್ನು ಕಣಕ್ಕೆ ಇಳಿಸಲು ಬಿಜೆಪಿ ಚಿಂತನೆ ನಡೆಸಿದೆ.

ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಯಾಗಿ ಜೆಡಿಎಸ್ ರಾಜ್ಯ ಕಾನೂನು ಘಟಕದ ಅಧ್ಯಕ್ಷ ಎ.ಪಿ. ರಂಗನಾಥ್ ಅವರು ಕಣಕ್ಕೆ ಇಳಿಯುತ್ತಿದ್ದಾರೆ ಎಂದು ಜೆಡಿಎಸ್ ಮುಖಂಡರು ಘೋಷಿಸಿದ ಬೆನ್ನಲ್ಲೇ, ಬಿಜೆಪಿ ಸಹ ತನ್ನ ಅಭ್ಯರ್ಥಿ ಕಣಕ್ಕೆ ಇಳಿಸುವ ಕುರಿತು ಚರ್ಚೆ ನಡೆಸಿರುವುದು ಕುತೂಹಲ ಮೂಡಿಸಿದೆ.

ಜೆಪಿ ಭವನದಲ್ಲಿ ಗುರುವಾರ ನಡೆದ ಬೆಂಗಳೂರು ಮಹಾನಗರ ಜನತಾದಳ (ಜಾತ್ಯತೀತ) ಪಕ್ಷದ ಮುಖಂಡರ ಸಭೆಯಲ್ಲಿ ಎ.ಪಿ. ರಂಗನಾಥ್ ಅವರು ಮೈತ್ರಿ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯಲಿದ್ದಾರೆ ಎಂದು ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಕೆ.ಎ.ತಿಪ್ಪೇಸ್ವಾಮಿ, ಮುಖಂಡ ಎಚ್.ಎಂ.ರಮೇಶ್ ಗೌಡ ಘೋಷಿಸಿದ್ದರು.

ಜೆಡಿಎಸ್ ಪಕ್ಷ ಎನ್‌ಡಿಎ ಮೈತ್ರಿಕೂಟದ ಭಾಗವಾಗಿದೆ. ಲೋಕಸಭೆ ಚುನಾವಣೆಯಲ್ಲಿನ ಸ್ಥಾನ ಹಂಚಿಕೆ ಕುರಿತು ಮಾತುಕತೆಯೂ ನಡೆಯುತ್ತಿದೆ. ಕಾಂಗ್ರೆಸ್ ಸರ್ಕಾರದ ವಿರುದ್ಧ ಒಟ್ಟಾಗಿ ಹೋರಾಡುವ ನಿರ್ಧಾರವನ್ನು ಎರಡೂ ಪಕ್ಷದ ನಾಯಕರು ಮಾಡಿದ್ದಾರೆ. ವಿಧಾನ ಪರಿಷತ್ತಿನ ಚುನಾವಣೆ ಯಲ್ಲಿ ಕಾಂಗ್ರೆಸ್‌ನ ಪುಟ್ಟಣ್ಣ ವಿರುದ್ಧ ಮೈತ್ರಿಕೂಟದ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುವ ಬಗ್ಗೆ ಚರ್ಚೆ ನಡೆ ದಿತ್ತು. ಅದು, ಅಂತಿಮಗೊಳ್ಳುವ ಮೊದಲೇ, ಜೆಡಿಎಸ್ ತನ್ನ ಅಭ್ಯರ್ಥಿ ಯನ್ನು ಘೋಷಿಸಿದೆ. ಚುನಾವಣೆ ಎದುರಾಗುವ ಮೊದಲೇ ಎರಡೂ ಪಕ್ಷಗಳ ಮಧ್ಯೆ ಸಮನ್ವಯ ಇಲ್ಲದೇ ಇರುವುದನ್ನು ಇದು ತೋರಿಸಿದೆ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ನಡೆದಿದೆ.

'ರೈಲ್ವೆ ಭೂಮಿ ಗುತ್ತಿಗೆ: ಪ್ರಧಾನಿ ಮೌನವೇಕೆ'

ಬೆಂಗಳೂರು: 'ಹುಬ್ಬಳ್ಳಿಯ ಎಂಟಿಎಸ್ ನಗರದಲ್ಲಿರುವ ₹1,360 ಕೋಟಿ ಮೌಲ್ಯದ 13 ಎಕರೆ ರೈಲ್ವೆ ಜಮೀನನ್ನು ₹83 ಕೋಟಿಗೆ ಗುತ್ತಿಗೆಗೆ ಕೊಡಲು ಹೊರಟಿರುವುದರ ಹಿಂದಿರುವ ಷಡ್ಯಂತ್ರದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ನಾಯಕರು ಏಕೆ ಮೌನ ವಹಿಸಿದ್ದಾರೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಪ್ರಶ್ನಿಸಿದರು.

ಶುಕ್ರವಾರ ಮಾತನಾಡಿದ ಅವರು, 'ಜಮೀನು ಗುತ್ತಿಗೆ ಪ್ರಕ್ರಿಯೆ ಸಂಶಯಾಸ್ಪದವಾಗಿದೆ. 30 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ನೀಡಲು ಅವಕಾಶವಿಲ್ಲ. 99 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುತ್ತಿರುವುದರ ಹಿಂದಿನ ಉದ್ದೇಶವೇನು? ಇದೂ ಶೇಕಡ 40ರಷ್ಟು ಕಮಿಷನ್ ದಂಧೆಯ ಮುಂದುವರಿದ ಭಾಗವೆ' ಎಂದರು. 'ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ಕರ್ನಾಟಕವನ್ನು ಪ್ರತಿನಿಧಿಸುವ ಇತರ ಸಚಿವರು, ಪ್ರಧಾನಿ ಏಕೆ ಈ ವಿಚಾರದಲ್ಲಿ ಮೌನಕ್ಕೆ ಶರಣಾಗಿದ್ದಾರೆ? ಕೇಂದ್ರ ರೈಲ್ವೆ ಸಚಿವರು ಏಕೆ ಮಾತನಾಡುತ್ತಿಲ್ಲ? ಎಲ್ಲರೂ ಈ ಬಗ್ಗೆ ಕರ್ನಾಟಕದ ಜನರಿಗೆ ಉತ್ತರಿಸಲಿ' ಎಂದರು.

ಬಾಲಗಂಗಾಧರನಾಥ ಸ್ವಾಮೀಜಿಯ 79ನೇ ಜಯಂತಿ ಕಾರ್ಯಕ್ರಮದಲ್ಲಿ ದೇವೇಗೌಡ ಹೇಳಿಕೆ

‘ಕಾವೇರಿ ನೀರಿಗಾಗಿ ನಿರಂತರ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ನದಿ ನೀರಿನ ವಿಚಾರವಾಗಿ ಕರ್ನಾಟಕಕ್ಕೆ ನಿರಂತರ ಅನ್ಯಾಯವಾಗುತ್ತಿದೆ. ಈ ಸಮಸ್ಯೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರಿಂದ ಮಾತ್ರ ಬಗೆಹರಿಸಲು ಸಾಧ್ಯ’ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಹೇಳಿದರು.

ಕರ್ನಾಟಕ ರಾಜ್ಯ ಒಕ್ಕಲಿಗರ ಡೈರೆಕ್ಟರಿ ಟ್ರಸ್ಟ್ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಬಾಲಗಂಗಾಧರನಾಥ ಸ್ವಾಮೀಜಿ ಅವರ 79ನೇ ಜಯಂತಿ ಹಾಗೂ ಟ್ರಸ್ಟ್‌ನ ಬೆಳ್ಳಿ ಹಬ್ಬ ಉದ್ಘಾಟಿಸಿ, ಮಾತನಾಡಿದರು.

‘ಕಾವೇರಿ ನದಿ ನೀರು ನಿಯಂತ್ರಣಾ ಪ್ರಾಧಿಕಾರದ ಆದೇಶದ ಪ್ರಕಾರ ರಾಜ್ಯವು ಫೆಬ್ರವರಿ ತಿಂಗಳಲ್ಲಿ ಪ್ರತಿದಿನ 998 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸಬೇಕು. ಇಷ್ಟು ಪ್ರಮಾಣದಲ್ಲಿ ನೀರನ್ನು ಹರಿಸಲು ಇಲ್ಲಿ ನೀರು ಎಲ್ಲಿದೆ? ಒಂದು ವೇಳೆ ನೀರನ್ನು ಹರಿಸಿದರೆ ಇಲ್ಲಿನ ರೈತರು ಏನು ಮಾಡಬೇಕು? ಈ ಸಮಸ್ಯೆ ಬಗ್ಗೆ ನಾನು ಕೊನೆಯ ಉಸಿರು ಇರುವವರೆಗೂ ಹೋರಾಟ ಮಾಡುತ್ತೇನೆ. ತಮಿಳುನಾಡಿನಲ್ಲಿ ಇರುವವರು ನಮ್ಮ ಸಹೋದರರಾದರೂ ಒಂದು ಮಿತಿಯಲ್ಲಿ ಇರಬೇಕಾಗುತ್ತದೆ’ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಎಚ್‌.ಡಿ. ದೇವೇಗೌಡ ಮಾತನಾಡಿದರು. ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ ಮತ್ತು ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ನಮ್ಮ ರೈತರ ಬಗೆಗಿನ ಕಾಳಜಿಯಿಂದ ಬಿಜೆಪಿ ಜತೆಗೆ ಕೈಜೋಡಿಸಿದ್ದೇವೆಯೇ ಹೊರತು, ವೈಯಕ್ತಿಕ ಲಾಭಕ್ಕಾಗಿ ಅಲ್ಲ’ ಎಂದು ತಿಳಿಸಿದರು.

ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ‘ಬಾಲಗಂಗಾಧರನಾಥ ಸ್ವಾಮೀಜಿ ಅವರು ಈ ನಾಡು ಕಂಡ ಮಹಾನ್ ಚೇತನ. ಧಾರ್ಮಿಕ ಶಕ್ತಿ, ಸಂಘಟನಾ ಸಾಮರ್ಥ್ಯದಿಂದ ಅವರು ಆರೋಗ್ಯ ಸೇರಿ ವಿವಿಧ ಕ್ಷೇತ್ರಗಳಲ್ಲಿ ಕ್ರಾಂತಿ ಮಾಡಿದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಬಾಲಗಂಗಾಧರನಾಥ ಸ್ವಾಮೀಜಿ ಅವರು ವಿವಿಧ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳನ್ನು ಸ್ಮರಿಸಿಕೊಂಡರು.

ಕರ್ನಾಟಕ ರಾಜ್ಯ ಒಕ್ಕಲಿಗರ ಡೈರೆಕ್ಟರಿ ಟ್ರಸ್ಟ್‌ನ ಅಧ್ಯಕ್ಷ ಕೆ.ಟಿ. ಚಂದ್ರು, ‘ಇದೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಬಾಲಗಂಗಾಧರನಾಥ ಸ್ವಾಮೀಜಿ ಅವರ ಜಯಂತಿಯನ್ನು ಆಚರಿಸಿದ್ದೇವೆ. ಸರ್ಕಾರವು ಬಾಲಗಂಗಾಧರನಾಥ ಸ್ವಾಮೀಜಿ ಅವರ ಜಯಂತಿ ಆಚರಣೆಗೆ ಕ್ರಮವಹಿಸಬೇಕು’ ಎಂದರು.

‘ಕಾನೂನು ವಿ.ವಿ: ನೇಮಕಾತಿ ಪ್ರಕ್ರಿಯೆ ಶೀಘ್ರ’

ಪ್ರಜಾವಾಣಿ ವಾರ್ತೆ

ಧಾರವಾಡ: ‘ರಾಜ್ಯದ ಕಾನೂನು ವಿಶ್ವವಿದ್ಯಾಲಯಕ್ಕೆ ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಶೀಘ್ರ ಆರಂಭಿಸಲಾಗುವುದು’ ಎಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

‘ಕಾನೂನು ವಿಶ್ವವಿದ್ಯಾಲಯದಲ್ಲಿ ಕೋರ್ಸ್ ಸೀಟುಗಳ ಸಂಖ್ಯೆ 180 ರಿಂದ 300ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಮೂಲಸೌಲಭ್ಯಕ್ಕಾಗಿ ₹ 70 ಕೋಟಿ ಅನುದಾನ ಒದಗಿಸಲು ಅನುಮೋದನೆ ನೀಡಲಾಗಿದೆ. ಇದರಲ್ಲಿ ಆಡಳಿತ ಭವನ, ಗ್ರಂಥಾಲಯ, ಕ್ಯಾಂಟೀನ್, ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣವಾಗಲಿವೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ಕಾಂಗ್ರೆಸ್ ಸೇರುವವರು ನೀತಿಗೆಟ್ಟವರು’ ಎಂದು ಜೆಡಿಎಸ್‌ನ ಶಿವಲಿಂಗೇಗೌಡರು ಟೀಕಿಸಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, ‘ರಾಜಕೀಯ ಅಜ್ಞಾನ ಇರುವವರ ಹೇಳಿಕೆಗೆ ಪ್ರತಿಕ್ರಿಯೆ ನೀಡಲ್ಲ. ರಾಜ್ಯದ ಕಾಂಗ್ರೆಸ್ ಸರ್ಕಾರವು ಏಳು ತಿಂಗಳಿನಿಂದ ಒಂದು ಕೋಟಿಗೂ ಹೆಚ್ಚು ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆತ್ತುವ, ಸರ್ಕಾರದ ಸವಲತ್ತುಗಳು ಶೇ 95 ಫಲಾನುಭವಿಗಳಿಗೆ ತಲುಪಿಸುವ ಕೆಲಸ ಮಾಡಿದೆ. ಇದನ್ನು ಶಿವಲಿಂಗೌಡ ಅರ್ಥ ಮಾಡಿಕೊಳ್ಳಬೇಕು’ ಎಂದು ಹೇಳಿದರು.

ಈಜಿಪುರ ಮೇಲ್ಸೇತುವೆ ಸಾಮರ್ಥ್ಯ ಪರೀಕ್ಷೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಜಿಪುರ ಎಲಿವೇಟೆಡ್ ಕಾರಿಡಾರ್ ಯೋಜನೆಯ ಕಾಮಗಾರಿ ಅರ್ಧಕ್ಕೆ ನಿಂತಿದ್ದು, ಇದನ್ನು ಮುಂದುವರಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ನಿರ್ಧರಿಸಲು ಪರೀಕ್ಷೆಗಳು ನಡೆಯುತ್ತಿವೆ.

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಪ್ರೊ. ಚಂದ್ರಕಿಶನ್ ಅವರ ಸೂಚನೆ ಮೇರೆಗೆ ಬ್ಯೂರೊ ವೆರಿಟಾಸ್ ಏಜೆನ್ಸಿಯ ಡಾ. ಕುಮಾರ್ ಅವರ ತಂಡ ಪರೀಕ್ಷೆಗಳನ್ನು ಶುಕ್ರವಾರ ನಡೆಸಿದರು.

ಕಾಮಗಾರಿ ಸ್ಥಗಿತಗೊಂಡು ಎರಡು ವರ್ಷಗಳಾಗಿರುವುದರಿಂದ, ಯಾವ ಪ್ರಮಾಣದಲ್ಲಿ ತುಕ್ಕು ಹಿಡಿದಿದೆ, ಕಾಂಕ್ರೀಟ್ ಗುಣಮಟ್ಟ ಹೇಗಿದೆ, ಬಿರುಕು ಬಿಟ್ಟಿರುವ ಪರಿಣಾಮ ಯಾವ ಮಟ್ಟದ್ದು ಸೇರಿದಂತೆ ಸಾಮರ್ಥ್ಯ ಪರೀಕ್ಷೆಗಳನ್ನು ನಡೆಸಲಾಯಿತು.

‘ಈ ಪರೀಕ್ಷೆಗಳ ವರದಿಯನ್ನು ನಾಲ್ಕೈದು ದಿನಗಳಲ್ಲಿ ಐಐಎಸ್‌ಸಿಗೆ ಏಜೆನ್ಸಿ ನೀಡಲಿದೆ. ಅದರ ನಂತರ ಸ್ಥಗಿತಗೊಂಡಿರುವ ಕಾಮಗಾರಿಯನ್ನು ಯಾವ ರೀತಿಯಲ್ಲಿ ಮುಂದುವರಿಸಬೇಕು ಎಂಬ ಮಾರ್ಗದರ್ಶನದ ವರದಿಯನ್ನು ಐಐಎಸ್‌ಸಿ ನೀಡಲಿದೆ. ಅದರಂತೆ ಕಾಮಗಾರಿಯನ್ನು ನಡೆಸಲಾಗುತ್ತದೆ. ವರದಿ ಬರುವವರೆಗೂ ರ‍್ಯಾಂಪ್‌ಗಳ ಕಾಮಗಾರಿ ನಡೆಸಲಾಗುತ್ತದೆ’ ಎಂದು ಬಿಬಿಎಂಪಿ ಯೋಜನೆ ವಿಭಾಗದ ಎಂಜಿನಿಯರ್ ತಿಳಿಸಿದರು.



ಈಜಿಪುರ ಮೇಲ್ಸೇತುವೆ ಕಾಮಗಾರಿಯ ಸಾಮರ್ಥ್ಯ ಪರೀಕ್ಷೆಯನ್ನು ತಜ್ಞರ ತಂಡ ಶುಕ್ರವಾರ ನಡೆಸಿತು

2017ರಲ್ಲಿ ರೂಪುಗೊಂಡಿದ್ದ ಈಜಿಪುರ ಎಲಿವೇಟೆಡ್ ಕಾರಿಡಾರ್ ಯೋಜನೆಯ ಕಾಮಗಾರಿ 2021ರಲ್ಲಿ ಗುತ್ತಿಗೆ ರದ್ದಾಗಿದ್ದರಿಂದ ಸ್ಥಗಿತಗೊಂಡಿತ್ತು. ಕಾಮಗಾರಿ ಪುನರಾರಂಭದ ಟೆಂಡರ್‌ಗೆ ಸಚಿವ ಸಂಪುಟ 2023ರ ಸೆಪ್ಟೆಂಬರ್ 7ರಂದು ಅನುಮೋದನೆ ನೀಡಿತ್ತು. ₹176.11 ಕೋಟಿಗೆ ಬಿಎಸ್‌ಸಿಪಿಎಲ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಯೊಂದಿಗೆ ‘ಟರ್ನ್ ಕೀ ಲಂಪ್‌ಸಮ್’ ಗುತ್ತಿಗೆಯ ಒಪ್ಪಂದಕ್ಕೆ ಬಿಬಿಎಂಪಿ ನವೆಂಬರ್ 17ರಂದು ಕಾರ್ಯಾದೇಶ ನೀಡಿತ್ತು. ಆದರೆ ಎರಡು ತಿಂಗಳಿಂದ ಯಾವುದೇ ಕೆಲಸ ನಡೆದಿಲ್ಲ.

‘ಮೇಲ್ಸೇತುವೆ ಕಾಮಗಾರಿಗೆ ಅಡ್ಡವಾಗಿರುವ ಮರಗಳನ್ನು ಕಡಿಯಲಾಗುತ್ತಿದೆಯೇ ಹೊರತು, ರ‍್ಯಾಂಪ್ ಸೇರಿದಂತೆ ಹೊಸದಾಗಿ ಪ್ರಾರಂಭ ಮಾಡಬಹುದಾದ ಕಾಮಗಾರಿಯನ್ನು ಗುತ್ತಿಗೆದಾರರು ಆರಂಭಿಸಿಲ್ಲ’ ಎಂದು ಸ್ಥಳೀಯರು ದೂರಿದರು.

‘ಕಾಮಗಾರಿಗೆ ಕಾರ್ಯಾದೇಶ ನೀಡಿದ್ದರೂ, ಒಪ್ಪಂದದಂತೆ ನೀಡಬೇಕಾದ ಮುಂಗಡ ಹಣವನ್ನು ಬಿಬಿಎಂಪಿ ಈವರೆಗೂ ಬಿಡುಗಡೆ ಮಾಡಿಲ್ಲ. ಎರಡು ತಿಂಗಳಿಂದ ಹಣ ಬಿಡುಗಡೆ ಮಾಡಲು ಮನವಿ ಮಾಡಿದ್ದರೂ ಬಿಬಿಎಂಪಿ ಅಧಿಕಾರಿಗಳು ಸ್ಪಂದಿಸಿಲ್ಲ. ಹೀಗಾಗಿ ಪೂರ್ಣ ಪ್ರಮಾಣದಲ್ಲಿ ಕಾಮಗಾರಿ ಆರಂಭಿಸಲು ಸಾಧ್ಯವಾಗಿಲ್ಲ. ಒಂದೆರಡು ಕಡೆ ರ‍್ಯಾಂಪ್ ಕೆಲಸ ಆರಂಭಿಸಲಾಗಿದೆ’ ಎಂದು ಗುತ್ತಿಗೆದಾರರು ತಿಳಿಸಿದರು.



ಹೈದರಾಬಾದ್‌ನಲ್ಲಿ ಈಚೆಗೆ ನಡೆದ ಸಮಾರಂಭದಲ್ಲಿ ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹರಿ ಮಾರರ್ ಅವರಿಗೆ ‘ವರ್ಷದ ಅತ್ಯುತ್ತಮ ವಿಮಾನ ನಿಲ್ದಾಣ’ ಪ್ರಶಸ್ತಿಯನ್ನು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಪ್ರದಾನ ಮಾಡಿದರು

ಕೆಐಎ ವರ್ಷದ ಅತ್ಯುತ್ತಮ ವಿಮಾನ ನಿಲ್ದಾಣ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಹೈದರಾಬಾದ್‌ನಲ್ಲಿ ಈಚೆಗೆ ನಡೆದ ‘ವಿಂಗ್ಸ್ ಇಂಡಿಯಾ ಅವಾರ್ಡ್ಸ್ 2024’ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎ) ‘ವರ್ಷದ ಅತ್ಯುತ್ತಮ ವಿಮಾನ ನಿಲ್ದಾಣ’ ಪ್ರಶಸ್ತಿಗೆ ಭಾಜನವಾಗಿದೆ.

ಕಾರ್ಯಾಚರಣೆಯ ಶ್ರೇಷ್ಠತೆ, ಪ್ರಯಾಣಿಕರ ಉತ್ತಮ ಅನುಭವ, ಅತ್ಯಾಧುನಿಕ ತಂತ್ರಜ್ಞಾನದ ಬಳಕೆಗೆ ಆದ್ಯತೆ ನೀಡಿರುವುದನ್ನು ಗಮನಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಸುಗಮ ಮತ್ತು ಒತ್ತಡ ಮುಕ್ತ ಪ್ರಯಾಣದ ಅನುಭವ ನೀಡಲು ವಿಮಾನ ನಿಲ್ದಾಣ ಪ್ರವೇಶ ಮತ್ತು ನಿರ್ಗಮನ ದ್ವಾರದಲ್ಲಿ ಮಾಹಿತಿ ಪ್ರದರ್ಶನ ಫಲಕಗಳನ್ನು ಹೆಚ್ಚು ಅಳವಡಿಸಲಾಗಿದೆ.

ನಿಲ್ದಾಣದಲ್ಲಿ ಉತ್ತಮ ಪರಿಸರ ಕಾಪಾಡಿಕೊಳ್ಳುವ ಜತೆಗೆ ಸುಸ್ಥಿರತೆ ಕಾಯ್ದುಕೊಳ್ಳಲಾಗಿದೆ. ಏಕ ಬಳಕೆ ಪ್ಲಾಸ್ಟಿಕ್ ಅನ್ನು ನಿಷೇಧಿಸಲಾಗಿದೆ. ಅರಣ್ಯೀಕರಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಟರ್ಮಿನಲ್-2ರಲ್ಲಿ ದೇಶದ ಶ್ರೀಮಂತ ಸಂಸ್ಕೃತಿ, ಪರಂಪರೆ ಬಿಂಬಿಸುವ ವಿವಿಧ ರೂಪದ 60 ಕಲಾಕೃತಿಗಳನ್ನು ಪ್ರದರ್ಶಿಸಲಾಗಿದೆ.

120 ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ: ಪ್ರದೀಪ್ ಈಶ್ವರ್

ಬೆಂಗಳೂರು: ಎಸ್‌ಎಸ್‌ಎಲ್‌ಸಿಯ ತಲಾ 60 ಬಾಲಕ–ಬಾಲಕಿಯರನ್ನು ಆಯ್ಕೆ ಮಾಡಿಕೊಂಡು ಒಟ್ಟು 120 ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡಲು ಶಾಸಕ ಪ್ರದೀಪ್ ಈಶ್ವರ್ ನಿರ್ಧರಿಸಿದ್ದಾರೆ.

ಚಿಕ್ಕಬಳ್ಳಾಪುರ ಭಾಗದಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಗಣನೀಯವಾಗಿ ಕಡಿಮೆಯಾಗುತ್ತಿದೆ. ಉತ್ತಮ ಫಲಿತಾಂಶ ಬರುವಂತೆ ಮಾಡಲು ‘ಸೂಪರ್–60’ ಯೋಜನೆ ಅಡಿ ಆಯ್ಕೆಯಾದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪರಿಶ್ರಮ ನೀಟ್ ಅಕಾಡೆಮಿಯಲ್ಲಿ ಮೂರು ತಿಂಗಳ ತರಬೇತಿ ನೀಡಲಾಗುವುದು. ಆ ಮೂಲಕ ಫಲಿತಾಂಶದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ‘ಟಾಪ್–10’ ಒಳಗೆ ತರುವ ಗುರಿ ಹೊಂದಲಾಗಿದೆ ಎಂದು ಪ್ರದೀಪ್ ಈಶ್ವರ್ ಮಾಹಿತಿ ನೀಡಿದರು.

ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಯರನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ಈಗಾಗಲೇ ಚಿಕ್ಕಬಳ್ಳಾಪುರ ಕ್ಷೇತ್ರದ ವ್ಯಾಪ್ತಿಯ 27 ಪ್ರೌಢಶಾಲೆಗಳಲ್ಲಿ ಪರೀಕ್ಷೆ ನಡೆಸಿದ್ದಾರೆ. ಈ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದ ಬಡವರು, ಅನಾಥರು, ಏಕ ಪೋಷಕರನ್ನು ಹೊಂದಿರುವ ಮಕ್ಕಳಿಗೆ ಆದ್ಯತೆ ನೀಡಿ 120 ವಿದ್ಯಾರ್ಥಿ–ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡಲಾಗಿದೆ. ಅವರ ಪೋಷಕರು, ಶಾಲಾ ಮುಖ್ಯಸ್ಥರು ಹಾಗೂ ಶಿಕ್ಷಣ ಇಲಾಖೆ ಅನುಮತಿ ಪಡೆದು ಮೂರು ತಿಂಗಳು ಅವರಿಗೆ ಬೆಂಗಳೂರಿನಲ್ಲಿ ವಾಸ್ತವ್ಯ ಕಲ್ಪಿಸಲಾಗುತ್ತಿದೆ ಎಂದರು.

ಫೆ.29 ರಿಂದ 15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ

200ಕ್ಕೂ ಹೆಚ್ಚು ಚಿತ್ರಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಫೆ.29 ರಿಂದ ಮಾ.7ರವರೆಗೆ ಬೆಂಗಳೂರಿನಲ್ಲಿ ನಡೆಯಲಿದ್ದು, ಚಿತ್ರೋತ್ಸವದಲ್ಲಿ ದೇಶ ವಿದೇಶಗಳ 200ಕ್ಕೂ ಹೆಚ್ಚು ಸಿನಿಮಾಗಳು ಪ್ರದರ್ಶನಗೊಳ್ಳಲಿವೆ ಎಂದು ಮುಖ್ಯಮಂತ್ರಿಗಳ ಕಾರ್ಯದರ್ಶಿ ತ್ರಿಲೋಕ್ ಚಂದ್ರ ಹೇಳಿದರು.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಿತ್ರೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಸಮಾರೋಪ ಸಮಾರಂಭ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯಲಿದ್ದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಸ್ಪರ್ಧೆಗಳ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಬೆಂಗಳೂರಿನ ರಾಜಾಜಿನಗರದಲ್ಲಿರುವ ಒರಾಯನ್ ಮಾಲ್‌ನ ಪಿವಿಆರ್ ಸಿನಿಮಾದ 11 ಪರದೆಗಳು, ಚಾಮರಾಜಪೇಟೆಯಲ್ಲಿರುವ ರಾಜ್‌ಕುಮಾರ್ ಕಲಾ ಭವನ, ಬನಶಂಕರಿ ಎರಡನೇ ಹಂತದಲ್ಲಿರುವ ಸುಚಿತ್ರಾ ಫಿಲ್ಮ್ ಸೊಸೈಟಿಯಲ್ಲಿ ಪ್ರತಿನಿಧಿಗಳಿಗೆ ಮಾರ್ಚ್ 1 ರಿಂದ ಚಲನಚಿತ್ರ ಪ್ರದರ್ಶನ ಆರಂಭವಾಗಲಿದೆ’ ಎಂದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಕಚೇರಿ ಕೃಷ್ಣಾದಲ್ಲಿ ಶುಕ್ರವಾರ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದ ಲಾಂಛನ ಬಿಡುಗಡೆ ಮಾಡಿದರು. ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಎನ್‌. ವಿದ್ಯಾಶಂಕರ್, ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ, ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್, ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಸರ್ಕಾರದ ಕಾರ್ಯದರ್ಶಿ ತ್ರಿಲೋಕ್ ಚಂದ್ರ, ವಾರ್ತಾ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ಭಾಗವಹಿಸಿದ್ದರು

ಏಷ್ಯಾ ಚಲನಚಿತ್ರ ವಿಭಾಗ, ಭಾರತೀಯ ಚಲನಚಿತ್ರಗಳ ವಿಭಾಗ (ಚಿತ್ರಭಾರತಿ), ಕನ್ನಡ ಚಲನಚಿತ್ರಗಳ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದ್ದು, ಜಗತ್ತಿನ 50 ದೇಶಗಳಿಂದ ಸಿನಿಮಾಗಳನ್ನು ನಿರೀಕ್ಷಿಸಲಾಗಿದೆ.

ಇದೇ ವೇಳೆ ಆಯ್ದ ಪರದೆಗಳಲ್ಲಿ ಚಿತ್ರೋದ್ಯಮ ಸಂಬಂಧಿತ ಕಾರ್ಯಾಗಾರ, ಸಂವಾದ ಮತ್ತು ತಜ್ಞರಿಂದ ಉಪನ್ಯಾಸಗಳು ನಡೆಯಲಿವೆ.

ಪ್ರತಿನಿಧಿ ನೋಂದಣಿ: ‘www.biffes.org ತಾಣದಲ್ಲಿ ಪ್ರತಿನಿಧಿಗಳ ನೋಂದಣಿ ಕಾರ್ಯ ಫೆ.15 ರಿಂದ ಆರಂಭವಾಗಲಿದೆ. ಆಸಕ್ತರು ಇಲ್ಲಿ ಪ್ರತಿನಿಧಿ ಶುಲ್ಕ ಪಾವತಿಸಿ ನೋಂದಾಯಿಸಿಕೊಳ್ಳಬಹುದು. ಸಾರ್ವಜನಿಕರಿಗೆ ₹800, ಚಿತ್ರೋದ್ಯಮದ ಸದಸ್ಯರು, ಫಿಲ್ಮ್ ಸೊಸೈಟಿ ಸದಸ್ಯರು, ಹಿರಿಯ ನಾಗರಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ₹400 ಶುಲ್ಕ ನಿಗದಿಪಡಿಸಲಾಗಿದೆ’ಎಂದು ಕಲಾತ್ಮಕ ನಿರ್ದೇಶಕ ಎನ್‌.ವಿದ್ಯಾಶಂಕರ್ ತಿಳಿಸಿದರು. ವಾರ್ತಾ ಇಲಾಖೆ ಆಯುಕ್ತರಾದ ಹೇಮಂತ್ ನಿಂಬಾಳ್ಕರ್ ಈ ಸಂದರ್ಭದಲ್ಲಿ ಹಾಜರಿದ್ದರು.

ಸಂಘರ್ಷ ಶಮನಕ್ಕೆ ಇರಾನ್–ಪಾಕಿಸ್ತಾನ ಸಮ್ಮತಿ

ಇಸ್ಲಾಮಾಬಾದ್ (ಪಿಟಿಐ): ಉಗ್ರರ ನೆಲೆಗಳನ್ನು ಗುರಿಯಾಗಿಸಿ ಪರಸ್ಪರ ವಾಯು ಪ್ರದೇಶದ ಗಡಿ ಉಲ್ಲಂಘಿಸಿ ಕ್ಷಿಪಣಿ ದಾಳಿ ನಡೆಸಿದ ಪರಿಣಾಮ ಉಭಯ ರಾಷ್ಟ್ರಗಳ ನಡುವೆ ಉಂಟಾಗಿದ್ದ ಸಂಘರ್ಷದ ಪರಿಸ್ಥಿತಿ ಶಮನಗೊಳಿಸಲು, ಭಯೋತ್ಪಾದನೆಯನ್ನು ಸಮನ್ವಯದಿಂದ ಹತ್ತಿಕ್ಕಲು ಇರಾನ್ ಮತ್ತು ಪಾಕಿಸ್ತಾನ ಶುಕ್ರವಾರ ಸಮ್ಮತಿಸಿವೆ.

ಪಾಕ್ ವಿದೇಶಾಂಗ ಸಚಿವ ಜಲೀಲ್ ಅಬ್ಬಾಸ್ ಜಿಲಾನಿ ಅವರು ಇರಾನ್ ವಿದೇಶಾಂಗ ಸಚಿವ ಹುಸೇನ್ ಅಮೀರ್– ಅಬ್ದುಲ್ಲಾಹಿಯಾನ್ ಅವರೊಂದಿಗೆ ದೂರವಾಣಿಯಲ್ಲಿ ಈ ಸಂಬಂಧ ಮಾತುಕತೆ ನಡೆಸಿದರು.

‘ಪರಸ್ಪರ ನಂಬಿಕೆ ಮತ್ತು ಸಹಕಾರದ ಮನೋಭಾವದೊಂದಿಗೆ ಇರಾನ್ ಜತೆ ಕೆಲಸ ಮಾಡುವ ತಮ್ಮ ದೇಶದ ಬಯಕೆಯನ್ನು ವಿದೇಶಾಂಗ ಸಚಿವ ಜಿಲಾನಿ ವ್ಯಕ್ತಪಡಿಸಿದ್ದಾರೆ. ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವ ಗೌರವಿಸುವುದು ಈ ಸಹಕಾರಕ್ಕೆ ಆಧಾರವಾಗಿರಬೇಕು ಎಂದೂ ಅವರು ಒತ್ತಿ ಹೇಳಿದ್ದಾರೆ’ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯದ ಹೇಳಿಕೆ ತಿಳಿಸಿದೆ.

ನಗರದಲ್ಲಿ ಇಂದು

‘ಕ್ಲೈಂಟ್ ಕೌನ್ಸೆಲಿಂಗ್ ಆ್ಯಂಡ್ ಅಡ್ವೊಕೆಸಿ ಸ್ಕಿಲ್ಸ್’ ಕಾರ್ಯಾಗಾರ: ಉದ್ಘಾಟನೆ: ಎಸ್. ವಿವೇಕಾನಂದ, ಅಧ್ಯಕ್ಷತೆ: ಕೆ. ಕೃಷ್ಣಸ್ವಾಮಿ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಕಾನೂನು ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9.30

ಕುಂ. ವೀರಭದ್ರಪ್ಪ ಅವರ ‘ಮಾಕನಡುಕು’, ‘ಶಾಮಣ್ಣ’ ಪುಸ್ತಕಗಳ ಬಿಡುಗಡೆ: ಅಧ್ಯಕ್ಷತೆ: ಎಚ್. ಟಿ. ಪೋತೆ, ಪುಸ್ತಕಗಳ ಕುರಿತು: ಮಲ್ಲೇಪುರಂ ಜಿ. ವೆಂಕಟೇಶ್, ಎಚ್.ಎಲ್. ಪುಷ್ಪ, ಆಯೋಜನೆ: ವಸಂತ ಪ್ರಕಾಶನ, ಸ್ಥಳ: ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 11

‘ವಿತ್ತೀಯ ಒಕ್ಕೂಟ: 16ನೇ ಹಣಕಾಸು ಆಯೋಗದ ಮುಂದಿರುವ ಸವಾಲುಗಳು’ ವಿಚಾರ ಸಂಕಿರಣ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ವಿಜಯ ಕೇಳ್ಕರ್, ಅತಿಥಿ: ಎಂ. ಗೋವಿಂದ ರಾವ್, ಆಯೋಜನೆ: ರಾಮಯ್ಯ ವಿಶ್ವವಿದ್ಯಾಲಯ, ಸ್ಥಳ: ಹೋಟೆಲ್ ತಾಜ್ ವೆಸ್ಟ್‌ಎಂಡ್, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಇಕೆಬಾನ, ಪುಷ್ಪ ರಂಗೋಲಿ ತರಕಾರಿ ಕೆತ್ತನೆ, ಡಚ್ ಹೂವಿನ ಜೋಡಣೆ, ಥಾಯ್‌ಆರ್ಟ್, ಜಾನೂರು ಮತ್ತು ಬೋನ್ಸಾಯಿ ಗಿಡಗಳ ಪ್ರದರ್ಶನದ ಉದ್ಘಾಟನೆ: ಶಾಲಿನಿ ರಜನೀಶ್, ಅತಿಥಿ: ತಾರಾ ಅನುರಾಧ, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್‌ಬಾಗ್, ಮಧ್ಯಾಹ್ನ 1



ಸುಮೇಧ ಎನ್‌., ಸುಪ್ರಜಾ ಎನ್‌.

ರಂಗಾಭಿವಂದನಾ: ಪ್ರಸ್ತುತಿ: ಸುಮೇಧ ಎನ್., ಸುಪ್ರಜಾ ಎನ್., ಉಪಸ್ಥಿತಿ: ಬಲವಂತರಾವ್ ಪಾಟೀಲ್, ವಾಸುದೇವ ಶರ್ಮ ಎನ್.ವಿ., ಮಂಜುಳಾ ಪರಮೇಶ್, ಉಮಾ ಅನಂತ ವೇಣೂರು, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 6

ಮನೆಯಂಗಳದಲ್ಲಿ ಮಾತುಕತೆ: ಅತಿಥಿ: ಪಿಚ್ಚಳ್ಳಿ ಶ್ರೀನಿವಾಸ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

ಫ್ಯೂಷನ್ ಸಂಗೀತ ಮತ್ತು ನೃತ್ಯೋತ್ಸವ: ಉದ್ಘಾಟನೆ: ಸುನಿಲ್ ಕುಮಾರ್ ಧಾರೇಶ್ವರ್, ಅತಿಥಿಗಳು: ಶ್ರುತಿ ಖುರಾನ, ಪದಮ್ ಖಿಂಚಾ, ಅಧ್ಯಕ್ಷತೆ: ಕೆ.ಜಿ. ರಾಘವನ್, ಫ್ಯೂಷನ್ ಸಂಗೀತ–’ವಾದ್ಯವೈಭವ‘: ಶ್ರೀಧರ್ ಸಾಗರ್ ಮತ್ತು ತಂಡ, ಪಿಟೀಲು: ಹೃಷಿತಾ ಕೆಡಗೆ, ಮೃದಂಗ: ನಿಕ್ಷಿತ್ ಪುತ್ತೂರು, ಖಂಜೀರ: ಕಾರ್ತಿಕ್, ಡ್ರಮ್ಸ್: ಸಾಯಿ ವಂಶಿ, ‘ಮೋಡಿ ಮಾಡುವ ಒಡಿಸ್ಸಿ’ ಯಕ್ಷಗಾನ ಪ್ರದರ್ಶನ: ಮಧುಲಿತಾ ಮಹಾಪಾತ್ರ, ಸಹನಾ ಆರ್. ಮಯ್ಯಾ, ಕೆ. ಕೃಷ್ಣಮೂರ್ತಿ ತುಂಗಾ, ಚಿತ್ಕಲಾ ಕೆ. ತುಂಗಾ, ಆಯೋಜನೆ: ಇನ್ಫೊಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

‘ರಾಮೋತ್ಸವ’ ಮೈಸೂರು ಸಾಂಪ್ರದಾಯಿಕ ಚಿತ್ರಕಲೆಗಳ ಪ್ರದರ್ಶನ: ಅತಿಥಿಗಳು: ಎಂ.ಜೆ. ಕಮಲಾಕ್ಷಿ, ಪುಷ್ಪಾ ದ್ರಾವಿಡ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4

ಕೆ.ಎ. ದಯಾನಂದ ಅವರ ‘ಹಾದಿಗಲ್ಲು’ ಪುಸ್ತಕದ ಚಿತ್ರಕಲಾ ಪ್ರದರ್ಶನ: ಉದ್ಘಾಟನೆ: ರಾಜಪ್ಪ ದಳವಾಯಿ, ಅಧ್ಯಕ್ಷತೆ: ಎಂ.ಎಸ್. ಮೂರ್ತಿ, ಅತಿಥಿ: ಧರಣಿದೇವಿ ಮಾಲಗತ್ತಿ, ಆಯೋಜನೆ: ಪದ, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

ಸಿ. ಚಂದ್ರಪ್ಪ ಅವರ ‘ಅಶೋಕ’ ಪುಸ್ತಕ ಬಿಡುಗಡೆ: ವಿಜಯ್ ಪೂಣಚ್ಚ, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ್, ಪುಸ್ತಕದ ಕುರಿತು: ಎಂ. ಕೊಟ್ರೇಶ್, ಆಯೋಜನೆ: ಸಪ್ನ ಬುಕ್ ಹೌಸ್, ಸ್ಥಳ: ಶತಮಾನೋತ್ಸವ ಸಭಾಂಗಣ, ದಿ. ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 5

ಉಮಾ ರಾಜಣ್ಣ ಅವರ ‘ಚೆಲ್ಲವರಿದ ಬೆಳಕು’ ಪುಸ್ತಕ ಬಿಡುಗಡೆ: ಮಲ್ಲಿಕಾ ಘಂಟಿ, ಉಪಸ್ಥಿತಿ: ಮಂಜುಳಾ ಗೋನಾಳ, ರೂಪಾ ಜಿ., ಪಿ. ಚಂದ್ರಿಕಾ, ಆಯೋಜನೆ: ಅಭಿನವ, ಬುಕ್ ಬ್ರಹ್ಮ, ಸ್ಥಳ: ನಾಣಿ ಅಂಗಳ, ಸುಚಿತ್ರ ಕಲ್ಚರಲ್ ಅಕಾಡೆಮಿ ಬನಶಂಕರಿ, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಧನ್ಯಾ ಎಂ. ಕಶ್ಯಪ್, ಉಪಸ್ಥಿತಿ: ಉಷಾ ದಾತರ್, ಮಮತಾ ಪಿ. ರಾಜ್, ಭಾರ್ಗವಿ ವೆಂಕಟರಾಮ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 5.30

‘ಜಲಗಾರ’ ನಾಟಕ ಪ್ರದರ್ಶನ: ನಿರ್ದೇಶನ: ಎಸ್. ಲಕ್ಷ್ಮೀನಾರಾಯಣ, ಸ್ಥಳ: ಗಾಂಧಿಭವನ, ಸಂಜೆ 6



ಹಾಲುಣಿಸುವ ತಾಯಂದಿರ ಕೂದಲು ಉದುರುವುದೇಕೆ?

ವಿಪರೀತ ಕೂದಲು ಉದುರುವುದು ನಿರಂತರ ಆತಂಕ, ಸಿಟ್ಟು, ದುಃಖವನ್ನು ಅನುಭವಿಸುತ್ತಿರುವ ಸೂಚನೆಯೂ ಇರಬಹುದು ಅಥವಾ ಅಗತ್ಯ ಪೋಷಕಾಂಶಗಳು, ಕಬ್ಬಿಣ, ಸತು, ಪ್ರೊಟೀನ್, ವಿಟಮಿನ್‌ಗಳ ಕೊರತೆಯೂ ಕಾರಣವಾಗಿರಬಹುದು.

ಕಲಾವತಿ ಬೈಚಬಾಳ



ಹಾಲೂಡುವ ಮಗುವಿನ ಮುಖ ನೋಡಿದರೆ ಕೂದಲುದುರುತ್ತದೆ ಎಂದು ಹಿರಿಯರು ಹೇಳುವ ಪ್ರತೀತಿ ಇತ್ತು. ಮಗುವಿಗೆ ನೋಡಿದರೆ ಉದುರದಿದ್ದರೂ, ಬಾಣಂತಿಯರು ಸರಿಯಾಗಿ ಉಣ್ಣದೇ ಇದ್ದರೆ ಕೂದಲುದುರುತ್ತದೆ. ತಾಯ್ತನದ ಈ ಹಂತದಲ್ಲಿ ಕೂದಲುದುರುವುದು ಸಮಸ್ಯೆಯಾಗಿದೆ. ಮಹಿಳೆಯರಲ್ಲಿ ಕೂದಲುದುರುವುದರ ಕಾರಣ ಮತ್ತು ಪರಿಹಾರವನ್ನು ಹುಬ್ಬಳ್ಳಿಯ ತಜ್ಞ ವೈದ್ಯರಾದ ಡಾ. ರಂಜನ್ ಜೀವಣ್ಣವರ್ ತಿಳಿಸಿದ್ದಾರೆ.

ವಿಪರೀತ ಕೂದಲು ಉದುರುವುದು ನಿರಂತರ ಆತಂಕ, ಸಿಟ್ಟು, ದುಃಖವನ್ನು ಅನುಭವಿಸುತ್ತಿರುವ ಸೂಚನೆಯೂ ಇರಬಹುದು ಅಥವಾ ಅಗತ್ಯ ಪೋಷಕಾಂಶಗಳು, ಕಬ್ಬಿಣ, ಸತು, ಪ್ರೊಟೀನ್, ವಿಟಮಿನ್‌ಗಳ ಕೊರತೆಯೂ ಕಾರಣವಾಗಿರಬಹುದು. ಥೈರಾಯ್ಡ್, ಹಾರ್ಮೋನುಗಳ ಏರುಪೇರು, ದೈಹಿಕ ಮತ್ತು ಮಾನಸಿಕ ಒತ್ತಡ, ನಿದ್ರಾಹೀನತೆ, ಪಿಸಿಒಡಿ, ಥೈರಾಯ್ಡ್ ಸಮಸ್ಯೆ ಕೂಡ ಕೂದಲು ಉದುರಲು ಕಾರಣವಾಗುತ್ತದೆ.

ಕೆಲವರಲ್ಲಿ ಮೂರರಿಂದ ಆರು ತಿಂಗಳವರೆಗೆ ಕೂದಲು ನಿಧಾನವಾಗಿ ಉದುರುವುದು ಕಂಡು ಬಂದರೆ, ಇನ್ನು ಕೆಲವರಲ್ಲಿ ಕೆಲವೇ ತಿಂಗಳಲ್ಲಿ ಹೆಚ್ಚು ಕೂದಲು ಉದುರುವ ಸಮಸ್ಯೆ ಕಾಣಿಸುತ್ತದೆ. ಇದಕ್ಕೆ ಕಾರಣಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ.

ಪ್ರತಿ ಕೂದಲಿನ ಜೀವಿತಾವಧಿಯು ಅವರ ಅನುವಂಶಿಕತೆಯನ್ನು ಅವಲಂಬಿಸಿರುತ್ತದೆ. ಅಂದಾಜಿನ ಪ್ರಕಾರ ಒಂದು ಕೂದಲು ಎರಡ್ಮೂರು ವರ್ಷ ಬದುಕುಳಿಯುತ್ತದೆ. ಅದು ಉದುರಿದ ನಂತರ ಮತ್ತೆ ಅದೇ ಜಾಗದಲ್ಲಿ ಹೊಸ ಕೂದಲು ಬಂದರೆ ಅದು ಸಹಜ ಪ್ರಕ್ರಿಯೆ. ಉದಾಹರಣೆಗೆ ದಿನವೊಂದಕ್ಕೆ ನೂರು ಕೂದಲು ಉದುರಿ ಮತ್ತೆ ಅದೇ ಜಾಗದಲ್ಲಿ ಹೊಸ ಕೂದಲು ಬೆಳೆದರೆ ಅದು ಸಹಜ ಉದುರುವಿಕೆ, ಉದುರಿದ ಜಾಗದಲ್ಲಿ ಹೊಸ ಕೂದಲು ಬೆಳೆಯದಿದ್ದರೆ ಅದು ಅಸಹಜ ಕೂದಲು ಉದುರುವಿಕೆ ಎಂದು ವೈದ್ಯರು ಅಭಿಪ್ರಾಯಪಡುತ್ತಾರೆ.

ಮಹಿಳೆಯರಲ್ಲಿ ಅತೀ ಹೆಚ್ಚು ಕೂದಲು ಉದುರುವುದು ಕಬ್ಬಿಣಾಂಶದ ಕೊರತೆಯಿಂದ. ಇದರಿಂದ ಕೂದಲು ಶಕ್ತಿ ಕಳೆದುಕೊಂಡು ದುರ್ಬಲವಾಗುತ್ತ ಹೋಗುತ್ತದೆ. ಬರಬರುತ್ತ ಕೂದಲು ತೆಳ್ಳಗಾಗುತ್ತ ಹೋಗುತ್ತದೆ. ಕೂದಲು ಯಾಕೆ ಉದುರುತ್ತಿದೆ ಎಂದು ಸಮಸ್ಯೆಯ ಮೂಲ ಕಂಡು ಹಿಡಿಯುವುದು ತುಂಬಾ ಮುಖ್ಯ. ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ ಕಾರಣಗಳಿರುವುದರಿಂದ ವೈದ್ಯರಿಂದ ಚಿಕಿತ್ಸೆ ಪಡೆಯುವುದು ಸೂಕ್ತ. ಅಲ್ಲದೇ ಮನೆಯಲ್ಲಿಯೇ ಕಾಳಜಿ ವಹಿಸಬಹುದಾದ ಕೆಲವು ಪರಿಹಾರೋಪಾಯಗಳು ಇಲ್ಲಿವೆ..

- ವಾರಕ್ಕೆ ಕನಿಷ್ಠ ಎರಡು ಬಾರಿಯಾದರು ತಲೆ ಸ್ನಾನ ಮಾಡಿ. ಪೌಷ್ಟಿಕ ಆಹಾರ, ಸೊಪ್ಪು, ಮೊಳಕೆಕಾಳು, ತರಕಾರಿ, ಹಣ್ಣುಗಳನ್ನು ಹೆಚ್ಚಾಗಿ ಸೇವಿಸಿ. ಕಾರ್ಬೋಹೈಡ್ರೇಟ್ಸ್ ಅಂಶವಿರುವ ಅಕ್ಕಿ, ಸಿಹಿ ತಿಂಡಿ ಕಡಿಮೆ ತಿನ್ನಿ, ಪಿಜ್ಜಾ, ಬರ್ಗರ್ ತಿನ್ನದಿರಿ.
- ನೀರನ್ನು ಯಥೇಚ್ಛವಾಗಿ ಕುಡಿಯಿರಿ. ವಿಟಮಿನ್ ಬಿ12 ಹಾಗೂ ವಿಟಮಿನ್ ಡಿ ಇರುವ ಆಹಾರ ಸೇವಿಸಿ.
- ವಾರಕ್ಕೊಮ್ಮೆಯಾದರೂ ತಲೆಗೆ ಕೊಬ್ಬರಿ ಎಣ್ಣೆ ಹಚ್ಚಿ, ಅರ್ಧ ಗಂಟೆಯಾದರೂ ಮಸಾಜ್ ಮಾಡುವುದರಿಂದ ನರಗಳು ಸಕ್ರಿಯಗೊಂಡು, ರಕ್ತ ಪರಿಚಲನೆಗೆ ಸಹಕಾರಿಯಾಗುತ್ತದೆ. ಒಂದು ದಿನಕ್ಕಿಂತ ಹೆಚ್ಚು ಸಮಯ ತಲೆಯಲ್ಲಿ ಎಣ್ಣೆ ಇರದಂತೆ ನೋಡಿಕೊಳ್ಳಿ. ಬಿರುಬಿಸಿಲು, ದೂಳಿನಿಂದ ಕೂದಲನ್ನು ರಕ್ಷಿಸಿ.
- ಅತಿ ಬಿಸಿಯಾದ ನೀರಿನಿಂದ ತಲೆ ಸ್ನಾನ ಮಾಡದಿರಿ. ಸ್ನಾನದ ನಂತರ ಬಿಸಿ ನೀರಿನಲ್ಲಿ ಅದ್ದಿದ ಟವಲ್ ಅನ್ನು ಕೆಲ ಸಮಯ ತಲೆಗೆ ಸುತ್ತಿಕೊಳ್ಳಿ. ಹಸಿ ಕೂದಲನ್ನು ಬಾಚಬೇಡಿ. ಬೇರೆಯವರು ಬಳಸಿದ ಬಾಚಣಿಕೆ, ಮಲಗುವ ದಿಂಬು, ಹಾಸಿಗೆ, ಟವಲ್ ಉಪಯೋಗಿಸದಿರಿ.
- ಕೆಲವೇ ನಿಮಿಷಗಳಲ್ಲಿ ಕೂದಲಿಗೆ ಬಣ್ಣ ನೀಡುವಂಥ ಹೇರ್ ಡೈಗಳನ್ನು ಬಳಸಲೇಬೇಡಿ. ಇದರಿಂದ ತಲೆಯಲ್ಲಿ ಕೆರೆತ, ಅಲರ್ಜಿ ಆಗಬಹುದು, ಕೂದಲು ಉದುರಬಹುದು. ಪದೇಪದೇ ಹೇರ್ ಸ್ಟ್ರೈಟ್‌ನಿಂಗ್, ಸ್ಮೂತ್‌ನಿಂಗ್ ಮಾಡುವುದರಿಂದ ಕೂದಲು ತುಂಡಾಗಿ, ಶಕ್ತಿ ಕಳೆದುಕೊಂಡು, ದಟ್ಟತೆ ಕಡಮೆಯಾಗುತ್ತದೆ.
- ಮೆಂತೆಕಾಳು, ಅಲ್ಯುವೆರಾ ಮುಂತಾದ ಮನೆಯಲ್ಲೇ ಸಿಗುವ ಪದಾರ್ಥಗಳನ್ನು ಬಳಸಿ ತಯಾರಿಸಿದ ಹೇರ್ ಪ್ಯಾಕ್ ಅನ್ನು ಹದಿನೈದು ದಿನಕ್ಕೊಮ್ಮೆಯಾದರೂ ಹಚ್ಚಿ. ಶಾಂಪು ಬಳಸದೆ, ಶೀಗೆಕಾಯಿ ಹಾಗೂ ಅಂಟವಾಳಕಾಯಿ ಪುಡಿ ಮಾಡಿ ಬಳಸಿ. ಹೇರ್ ಡ್ರೈಯರ್ ಬಳಸಿದರಿ. ಕೊಬ್ಬರಿ ಎಣ್ಣೆಯಲ್ಲಿ ಕರಿಬೇವು, ಕೆಂಪು ದಾಸವಾಳ, ಮೆಂತೆಕಾಳು, ಈರುಳ್ಳಿ, ನಿಂಬೆಯ ಒಣ ಸಿಪ್ಪೆಯನ್ನು ಕುದಿಸಿ ತಯಾರಿಸಿದ ಎಣ್ಣೆಯನ್ನು ನಿರಂತರವಾಗಿ ಕೂದಲಿಗೆ ಹಚ್ಚುತ್ತ ಬಂದರೆ ಕೂದಲು ನುಣುಪಾಗಿ, ಕಪ್ಪಾಗುತ್ತದೆ.











ಪುರುಷರಲ್ಲಿಯೂ ಸಮಸ್ಯೆ...

ಪುರುಷರಲ್ಲಿ ತಲೆಯ ಸುತ್ತಮುತ್ತ ಕೂದಲಿದ್ದು, ನೆತ್ತಿಯ ಮೇಲೆ ಮಾತ್ರ ಕೂದಲು ಉದುರಿದ್ದರೆ ಅದನ್ನು ಮೇಲ್ ಪಾಟರ್ನ್ ಹೇರ್‌ಲಾಸ್ ಎಂದು ಕರೆಯಲಾಗುತ್ತದೆ. ಇದಕ್ಕೆ ಅನುವಂಶಿಕತೆಯೂ ಕಾರಣವಾಗಿರುತ್ತದೆ. ಮಹಿಳೆಯರಲ್ಲಿ ಇಂಥ ಸಮಸ್ಯೆ ಕಡಿಮೆ. ಆದರೆ ವರ್ಷಗಳ ವರೆಗೂ ನಿಧಾನವಾಗಿ ಕೂದಲು ಉದುರುವುದನ್ನು, ಕೂದಲಿನ ದಟ್ಟತೆ ಕಡಿಮೆಯಾಗುವುದನ್ನು ಕಾಣಬಹುದು. ಇದನ್ನು ಫೀಮೇಲ್ ಪಾಟರ್ನ್ ಹೇರ್‌ಲಾಸ್ ಎನ್ನಲಾಗುತ್ತದೆ. ಬದಲಾದ ಜೀವನ ಶೈಲಿ, ಬೊಜ್ಜಿನ ಸಮಸ್ಯೆಯಿಂದ ಇಂಥ ಸಮಸ್ಯೆಗಳು ಇತ್ತೀಚೆಗೆ ಹೆಚ್ಚಾಗಿ ಕಂಡು ಬರುತ್ತಿವೆ ಎನ್ನುತ್ತಾರೆ ಹುಬ್ಬಳ್ಳಿಯ ಚರ್ಮರೋಗ ತಜ್ಞ ಡಾ. ರಂಜನ್ ಜೀವಣ್ಣವರ್. ಪುರುಷರಲ್ಲಿ ನಾಣ್ಯದ ರೂಪದಲ್ಲಿಯೂ ತಲೆ ಕೂದಲು ಉದುರುವುದನ್ನು ಕಾಣಬಹುದು. ಆರಂಭದಲ್ಲಿಯೇ ಇದಕ್ಕೆ ಚಿಕಿತ್ಸೆ ಪಡೆಯದಿದ್ದರೆ, ಮತ್ತೊಂದು ಕಡೆ ಅದೇ ಮಾದರಿಯಲ್ಲಿ ಕೂದಲು ಉದುರುವುದು ಹೆಚ್ಚಾಗಿ, ಮುಂದೆ ತಲೆ ಅಷ್ಟೇ ಅಲ್ಲದೆ ಮೈ ಮೇಲಿನ ಕೂದಲು ಸಹ ಉದುರುವ ಸಾಧ್ಯತೆ ಇದೆ ಎನ್ನುವ ಅಭಿಪ್ರಾಯ ವೈದ್ಯರದ್ದು.

ಚರ್ಮದ ಆರೈಕೆ ಹೀಗಿರಲಿ...

ಹಾರ್ಮೋನ್‌ಗಳ ಬದಲಾವಣೆಯಿಂದಾಗಿ ಬಾಣಂತಿಯರಲ್ಲಿ ಚರ್ಮದ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಮಗುವಿನ ಆರೈಕೆಯ ಜತೆಗೆ ಸ್ವ ಆರೈಕೆಗೆ ಕಡೆಗೂ ಗಮನ ವಹಿಸುವುದು ಅತ್ಯವಶ್ಯಕ.

ಒಣ ಚರ್ಮ: ಹೆರಿಗೆಯಾಗಿ ಎರಡು ಮೂರು ವಾರಗಳಲ್ಲಿ ಚರ್ಮ ಡಿಹೈಡ್ರೇಟ್ ಆದಂತೆ ಅನಿಸಬಹುದು. ಒಣಗಿದ ತುಟಿ ಹಾಗೂ ಬಾಯಿ ಜತೆಗೆ ಚರ್ಮವೂ ಒಣಗಿದಂತೆ ಅನಿಸಬಹುದು.

ಚರ್ಮ ಕಪ್ಪಾಗುವುದು: ಗರ್ಭಿಣಿಯರಲ್ಲಿ ಹಾರ್ಮೋನ್‌ಗಳ ಬದಲಾವಣೆಯಿಂದಾಗಿ ದೇಹದ ನಾನಾ ಭಾಗಗಳಲ್ಲಿ ಚರ್ಮ ಕಪ್ಪಾಗುತ್ತದೆ. ಇದು ಹೆರಿಗೆಯ ನಂತರವೂ ಉಳಿಯುವ ಸಾಧ್ಯತೆ ಇರುತ್ತದೆ. ಕುತ್ತಿಗೆ, ಕಂಕುಳ, ತೊಡೆ, ಸ್ತನದ ತೊಟ್ಟುಗಳು ಕಪ್ಪಗಾಗಬಹುದು. ಮಗು ಹುಟ್ಟಿ ಆರು ತಿಂಗಳವರೆಗೂ ಇದು ಹಾಗೆ ಉಳಿದು, ಮತ್ತೆ ನಿಧಾನಕ್ಕೆ ತಿಳಿ ಬಣ್ಣಕ್ಕೆ ಬರಬಹುದು.

ಸೂಕ್ಷ್ಮ ಚರ್ಮ: ಗರ್ಭಿಣಿಯರು ಹಾಗೂ ಬಾಣಂತಿಯರಲ್ಲಿ ಚರ್ಮ ಸೂಕ್ಷ್ಮಗೊಳ್ಳುತ್ತದೆ. ಅಲರ್ಜಿ, ಚರ್ಮ ಕೆಂಪಗಾಗುವುದು, ಸೂಕ್ಷ್ಮಗೊಳ್ಳುವುದೆಲ್ಲ ಸಾಮಾನ್ಯ.

ಹೈಪರ್ ಪಿಗ್ಮೆಂಟೇಷನ್: ಹಾರ್ಮೋನ್ ವ್ಯತ್ಯಾಸದಿಂದಾಗಿ ಹೈಪರ್ ಪಿಗ್ಮೆಂಟೇಷನ್ ಉಂಟಾಗಬಹುದು. ಮೊಡವೆಗಳು ಕಾಣಿಸಿಕೊಳ್ಳಬಹುದು. ಹೆರಿಗೆಯ ಸುಸ್ತು ಹಾಗೂ ಮಾನಸಿಕ ಒತ್ತಡದಿಂದ ಕಣ್ಣಿನ ಕೆಳಗೆ ಕಪ್ಪು ವರ್ತುಲ ಬರಬಹುದು. ಹೊಟ್ಟೆ ಹಾಗೂ ತೊಡೆ ಹಾಗೂ ನಿತಂಬಗಳ ಮೇಲೆ ಸ್ಟ್ರೆಚ್ ಮಾರ್ಕ್ ಕಾಣಿಸಿಕೊಳ್ಳಬಹುದು.

ಕಾಳಜಿ ಕ್ರಮ

- ಸೂರ್ಯನ ಕಿರಣಗಳಿಗೆ ನೇರವಾಗಿ ಮೈ ಒಡ್ಡಿಕೊಳ್ಳಬೇಡಿ. ಇದರಿಂದ ಚರ್ಮಕ್ಕೆ ಆಗುವ ಹಾನಿಯನ್ನು ತಪ್ಪಿಸಬಹುದು. ಹೊರಗೆ ಹೋಗುವಾಗ ಸನ್‌ಸ್ಕ್ರೀನ್ ಲೋಷನ್ ಹಚ್ಚುವುದನ್ನು ಮರೆಯಬೇಡಿ.
- ನಿತ್ಯ ಎರಡು ಲೀಟರ್ ನೀರು ಅಗತ್ಯವಾಗಿ ಕುಡಿಯಿರಿ. ನೀರು ನಿಮ್ಮ ಚರ್ಮದ ತೇವಾಂಶವನ್ನು ಹಿಡಿದಿಡಲು ಸಹಕರಿಸುತ್ತದೆ.
- ಮಗುವಿನ ಆರೈಕೆಯಲ್ಲಿ ಬಹುಪಾಲು ಕಳೆಯುವುದರಿಂದ ದೇಹಕ್ಕೆ ಅಗತ್ಯವಿರುವಷ್ಟು ನಿದ್ರೆ ಮಾಡಲು ಆಗದೇ ಇರಬಹುದು. ಮಗು ಮಲಗಿದಾಗೆಲ್ಲ ವಿಶ್ರಾಂತಿ ಪಡೆಯುವ ಅಭ್ಯಾಸವನ್ನು ರೂಢಿಸಿಕೊಳ್ಳಿ.
- ಎಲ್ಲ ಬಗೆಯ ಹಣ್ಣು, ಹಸಿರು ತರಕಾರಿಗಳು ನಿಮ್ಮ ಊಟದ ಮೆನುವಿನಲ್ಲಿರಲಿ. ಇದರಿಂದ ದೇಹಕ್ಕೆ ಅಗತ್ಯವಿರುವ ಪೋಷಕಾಂಶ, ವಿಟಮಿನ್, ಖನಿಜಾಂಶಗಳು ದೊರೆಯುತ್ತದೆ. ಎಣ್ಣೆ ಹಾಗೂ ಕರಿದ ಪದಾರ್ಥಗಳಿಂದ ದೂರವಿರಿ.
- ಎಂಥ ಕಠಿಣ ಸಮಯದಲ್ಲಿಯೂ ಶಾಂತವಾಗಿರುವ ಮನಸ್ಥಿತಿಯನ್ನು ರೂಢಿಸಿಕೊಳ್ಳಿ. ಮಾನಸಿಕ ಒತ್ತಡ ನಿಯಂತ್ರಣಕ್ಕೆ ಧ್ಯಾನದ ಮೊರೆ ಹೋಗಿ.

ಮಾಹಿತಿ: ಡಾ. ಎಸ್.ಶ್ರೀನಿವಾಸ್, ಶಿವಮೊಗ್ಗ



ಆಹಾ ರುಚಿ... ಶುಂಠಿ, ನೆಲ್ಲಿ ಚಟ್ನಿ

ಚಳಿಗಾಲದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಚಟ್ನಿ, ಉಪ್ಪಿನಕಾಯಿ ರೆಸಿಪಿಗಳನ್ನು ನೀಡಿದ್ದಾರೆ **ವೇದಾವತಿ ಎಚ್.ಎಸ್.** ಚಪಾತಿ, ಅನ್ನ, ರೊಟ್ಟಿ ಹೀಗೆ ನಿಮಗೆ ಇಷ್ಟವಾದ ಪದಾರ್ಥಗಳೊಂದಿಗೆ ಇವುಗಳನ್ನು ಸವಿಯಬಹುದು.

ರಸಸ್ವಾದ

ಟೊಮೆಟೊ ಚಟ್ನಿ



ಬೇಕಾಗುವ ಸಾಮಗ್ರಿಗಳು: ನಾಟಿ ಟೊಮೆಟೊ ಹಣ್ಣು 1 ಕೆಜಿ, ಹುಣಸೆಹಣ್ಣು 50 ಗ್ರಾಂ, ಸಾಸಿವೆ 1 ಟೇಬಲ್ ಚಮಚ ಮತ್ತು ಮೆಂತ್ಯ 1 ಟೇಬಲ್ ಚಮಚ ಹುರಿದು ಪುಡಿ ಮಾಡಿಕೊಳ್ಳಿ, ಎಣ್ಣೆ 1/4 ಕಪ್. ಸಾಸಿವೆ 1 ಟೀ ಚಮಚ, ಜೀರಿಗೆ 1 ಟೀ ಚಮಚ, ಕಡಲೆಬೇಳೆ 1 ಟೀ ಚಮಚ, ಉದ್ದಿನಬೇಳೆ 1 ಟೀ ಚಮಚ, ಇಂಗು 1/4 ಟೀ ಚಮಚ, ಕರಿಬೇವು 15 ರಿಂದ 20, ಬೆಳ್ಳುಳ್ಳಿ 20 ರಿಂದ 25, 50 ಗ್ರಾಂ ಅಚ್ಚ ಖಾರದಪುಡಿ, 50 ಗ್ರಾಂ ಉಪ್ಪು, 2 ಒಣಮೆಣಸು.

ತಯಾರಿಸುವ ವಿಧ: ಟೊಮೆಟೊ ತೊಳೆದು ನೀರು ಇರದಂತೆ ಚೆನ್ನಾಗಿ ಬಟ್ಟೆಯಿಂದ ಒರೆಸಿಕೊಳ್ಳಿ. ಬಳಿಕ ಚಿಕ್ಕದಾಗಿ ಕತ್ತರಿಸಿಕೊಳ್ಳಿ. ಬಾಣಲೆಗೆ 2 ಟೇಬಲ್ ಚಮಚ ಎಣ್ಣೆಯನ್ನು ಹಾಕಿ ಬಿಸಿ ಮಾಡಿಕೊಳ್ಳಿ. ಕತ್ತರಿಸಿದ ಟೊಮೆಟೊ ಹಾಕಿ ಮಿಶ್ರಣ ಮಾಡಿ. ಇದಕ್ಕೆ ಹುಣಸೆಹಣ್ಣನ್ನು ಸೇರಿಸಿ. ಬಳಿಕ ಮುಚ್ಚಳ ಮುಚ್ಚಿ ಮೆತ್ತಗಾಗುವವರೆಗೆ ಬೇಯಿಸಿ. ಬೆಂದ ನಂತರ ಆರಲು ಬಿಡಿ. ಮಿಕ್ಸಿಯಲ್ಲಿ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಬಾಣಲೆಗೆ ಉಳಿದ ಎಣ್ಣೆಯನ್ನು ಹಾಕಿ ಬಿಸಿ ಮಾಡಿಕೊಳ್ಳಿ. ಬಳಿಕ ಸಾಸಿವೆ, ಜೀರಿಗೆ, ಕಡಲೆಬೇಳೆ, ಉದ್ದಿನಬೇಳೆ, ಇಂಗು, ಕರಿಬೇವಿನ ಎಲೆ, ಬೆಳ್ಳುಳ್ಳಿ, ಒಣಮೆಣಸನ್ನು ತುಂಡು ಮಾಡಿ ಹಾಕಿ. ಇವುಗಳು ಕೆಂಬಣ್ಣ ಬರುವವರೆಗೆ ಹುರಿಯಿರಿ. ನಂತರ ರುಬ್ಬಿಕೊಂಡ ಮಿಶ್ರಣ, ಪುಡಿ ಮಾಡಿದ ಮಿಶ್ರಣ, ಅಚ್ಚಖಾರದಪುಡಿ, ಉಪ್ಪು ಸೇರಿಸಿ ಮಿಶ್ರಣ ಮಾಡಿ. ಈ ಮಿಶ್ರಣವನ್ನು ಮಧ್ಯಮ ಉರಿಯಲ್ಲಿ ಕುದಿಸಿ. ಮಿಶ್ರಣವು ಎಣ್ಣೆಯನ್ನು ಬಿಟ್ಟುಕೊಂಡು ಗಟ್ಟಿಯಾಗುತ್ತಾ ಬರುವಾಗ ಒಲೆಯನ್ನು ಆರಿಸಿ. ಈಗ ರುಚಿಕರವಾದ ಟೊಮೆಟೊ ಚಟ್ನಿ ಸಿದ್ಧಗೊಳ್ಳುತ್ತದೆ. ನಿಮಗೆ ಇಷ್ಟವಾದ ಪದಾರ್ಥಗಳೊಂದಿಗೆ ಸವಿಯಬಹುದು.

ಶುಂಠಿ ಸಿಹಿ ಚಟ್ನಿ



ಬೇಕಾಗುವ ಸಾಮಗ್ರಿಗಳು: ಶುಂಠಿ 100ಗ್ರಾಂ, ಸಾಸಿವೆ 1 ಟೇಬಲ್ ಚಮಚ, ಜೀರಿಗೆ 1 ಟೇಬಲ್ ಚಮಚ, ಉದ್ದಿನಬೇಳೆ 2 ಟೇಬಲ್ ಚಮಚ, ಮೆಂತ್ಯ 1 ಟೇಬಲ್ ಚಮಚ, ಧನಿಯಾ 2 ಟೇಬಲ್ ಚಮಚ, ಎಣ್ಣೆ 200 ಎಂ ಎಂ, ಕರಿಬೇವು 50 ಎಲೆಗಳು, ಬೆಲ್ಲ 350ಗ್ರಾಂ, ಹುಣಸೆರಸ 200ಗ್ರಾಂ, ಅಚ್ಚಖಾರದ ಪುಡಿ 2 ಟೇಬಲ್ ಚಮಚ, ಉಪ್ಪು 2 ಟೇಬಲ್ ಚಮಚ, ಇಂಗು 1/4 ಟೀ ಚಮಚ, ಅರಶಿನ ಪುಡಿ 1/2 ಟೀ ಚಮಚ, ನೀರು ಅರ್ಧ ಕಪ್.

ತಯಾರಿಸುವ ವಿಧಾನ: ಶುಂಠಿಯ ಮೇಲಿನ ಸಿಪ್ಪೆಯನ್ನು ತೆಗೆದುಕೊಂಡು ಮಿಕ್ಸಿಯಲ್ಲಿ ನುಣ್ಣಗೆ ಪುಡಿ ಮಾಡಿ ಪೇಸ್ಟ್ ತಯಾರಿಸಿಕೊಳ್ಳಿ. ಬಾಣಲೆಗೆ ಸಾಸಿವೆ, ಜೀರಿಗೆ, ಮೆಂತ್ಯ, ಉದ್ದಿನಬೇಳೆ, ಧನಿಯಾ, 20 ಎಸಳು ಕರಿಬೇವು, 1 ಟೀ ಚಮಚ ಎಣ್ಣೆಯನ್ನು ಹಾಕಿ ಕೆಂಬಣ್ಣ ಬರುವರೆಗೆ ಹುರಿಯಿರಿ. ಬಳಿಕ ಮಿಕ್ಸಿಯಲ್ಲಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ಬೆಲ್ಲಕ್ಕೆ ಅರ್ಧ ಕಪ್ ನೀರು ಹಾಕಿ ಒಂದೆಳೆ ಪಾಕ ಬರುವಂತೆ ಕುದಿಸಿ. ಬಳಿಕ ಹುಣಸೆರಸ ಸೇರಿಸಿ ಐದು ನಿಮಿಷ ಕುದಿಸಿ. ನಂತರ ಪುಡಿ ಮಾಡಿದ ಶುಂಠಿ ಪೇಸ್ಟ್, ತಯಾರಿಸಿದ ಮಸಾಲೆ ಪುಡಿ, ಅಚ್ಚಖಾರದ ಪುಡಿಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಸಣ್ಣ ಉರಿಯಲ್ಲಿ ಐದು ನಿಮಿಷ ಗಟ್ಟಿಯಾಗುವರೆಗೆ ಕುದಿಸಿ. ಬಾಣಲೆಗೆ ಎಣ್ಣೆಯನ್ನು ಹಾಕಿ ಬಿಸಿ ಮಾಡಿಕೊಂಡು ಸಾಸಿವೆ, ಇಂಗು, ಅರಶಿನ ಉಳಿದ ಕರಿಬೇವಿನ ಎಲೆಗಳನ್ನು ಹಾಕಿ ಒಗ್ಗರಣೆ ತಯಾರಿಸಿಕೊಳ್ಳಿ. ಒಗ್ಗರಣೆಯನ್ನು ಶುಂಠಿ ಚಟ್ನಿಗೆ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಹುಳಿ, ಖಾರ, ಸಿಹಿ ಮಿಶ್ರಿತ ಶುಂಠಿ ಚಟ್ನಿಯನ್ನು ಆರು ತಿಂಗಳವರೆಗೆ ಸವಿಯಬಹುದು. ಇದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.

ನೆಲ್ಲಿಕಾಯಿ ಸಿಹಿ ಉಪ್ಪಿನಕಾಯಿ

ಬೇಕಾಗುವ ಸಾಮಗ್ರಿಗಳು: ನೆಲ್ಲಿಕಾಯಿ 1/2 ಕೆ.ಜಿ., ಎಣ್ಣೆ 2 ಟೇಬಲ್ ಚಮಚ, ಜೀರಿಗೆ 1 ಟೀ ಚಮಚ, ಮೆಂತ್ಯ 1 ಟೀ ಚಮಚ, ಮೆಂತ್ಯ 1 ಟೀ ಚಮಚ, ಸೊಂಪು 1 ಟೀ ಚಮಚ, ಇಂಗು 1/4 ಟೀ ಚಮಚ, ತುರಿದ ಶುಂಠಿ 1 ಟೇಬಲ್ ಚಮಚ, ಬೆಲ್ಲ 400 ಗ್ರಾಂ, 1 ಟೀ ಚಮಚ ಧನಿಯಾಪುಡಿ, 1/2 ಟೀ ಚಮಚ ಜೀರಿಗೆಪುಡಿ, 1/2 ಟೀ ಚಮಚ ಕಾಳುಮೆಣಸಿನ ಪುಡಿ, 1/2 ಟೀ ಚಮಚ ಅರಶಿನಪುಡಿ, 1 ಟೀ ಚಮಚ ಬ್ಲಾಕ್ ಸಾಲ್ಟ್, 1/2 ಟೀ ಚಮಚ ಗರಂಮಸಾಲೆ, ರುಚಿಗೆ ತಕ್ಕಷ್ಟು ಉಪ್ಪು, ಅಚ್ಚಖಾರದಪುಡಿ 2 ಟೀ ಚಮಚ.

ತಯಾರಿಸುವ ವಿಧಾನ: ಬಾಣಲೆಗೆ ಒಂದು ಲೀಟರ್ ನೀರು ಮತ್ತು ನೆಲ್ಲಿಕಾಯಿಯನ್ನು ಹಾಕಿ ಮುಚ್ಚಳ ಮುಚ್ಚಿ ಹತ್ತು ನಿಮಿಷ ಬೇಯಿಸಿ. ಬಳಿಕ ನೆಲ್ಲಿಕಾಯಿಯನ್ನು ನೀರಿನಿಂದ ತೆಗೆದು ಆರಲು ಬಿಡಿ. ಆರಿದ ನಂತರ ಒಳಗಿನ ಬೀಜ ತೆಗೆದು ಬಿಡಿಬಿಡಿಯಾಗಿ ಹೋಳು ತಯಾರಿಸಿಕೊಳ್ಳಿ. ಬಾಣಲೆಗೆ ಎಣ್ಣೆಯನ್ನು ಹಾಕಿ ಜೀರಿಗೆ, ಮೆಂತ್ಯ, ಸೊಂಪು, ಇಂಗು, ತುರಿದ ಶುಂಠಿ ಹಾಕಿ ಮಿಶ್ರಣ ಮಾಡಿ. ಬಳಕ ನೆಲ್ಲಿಕಾಯಿ, ಬೆಲ್ಲವನ್ನು ಸೇರಿಸಿ. ಬೆಲ್ಲ ಕರಗುವರೆಗೆ ಮಿಶ್ರಣ ಮಾಡಿ. ನಂತರ ಧನಿಯಾಪುಡಿ, ಜೀರಿಗೆಪುಡಿ, ಕಾಳುಮೆಣಸಿನಪುಡಿ, ಅರಶಿನಪುಡಿ, ಬ್ಲಾಕ್ ಸಾಲ್ಟ್, ಗರಂಮಸಾಲೆ, ಉಪ್ಪು, ಅಚ್ಚಖಾರದಪುಡಿಯನ್ನು ಹಾಕಿ ಮಿಶ್ರಣ ಮಾಡಿ. ಹಾಕಿರುವ ಮಸಾಲೆ ನೆಲ್ಲಿಕಾಯಿಯೊಂದಿಗೆ ಸೇರಿ ಗಟ್ಟಿಯಾಗುತ್ತಾ ಬಂದಾಗ ಒಲೆಯನ್ನು ಆರಿಸಿ. ಇದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.



ಸ್ಪಂದನ



ಡಾ. ವೀಣಾ ಎಸ್. ಭಟ್

ಮುಟ್ಟಿನ ದಿನಗಳಲ್ಲಿ ಏನುಣ್ಣಬೇಕು?

- **ಮುಟ್ಟಿನ ದಿನಗಳಲ್ಲಿ ಆಗುವ ರಕ್ತಸ್ರಾವದ ನಷ್ಟವನ್ನು ನೀಗಿಸಲು ನೀಡಬಹುದಾದ ಪೌಷ್ಟಿಕ ಆಹಾರ, ಹಣ್ಣುಗಳ ಬಗ್ಗೆ ಮಾಹಿತಿ ನೀಡಿ.**

ಸತೀಶ್, ದಾವಣಗೆರೆ

ನಿಮ್ಮ ಸ್ತ್ರೀಪರ ಕಾಳಜಿಗೆ ಅಭಿನಂದನೆಗಳು. ಹದಿವಯಸ್ಸಿನಲ್ಲಿ ತೂಕ, ಗಾತ್ರ, ಎತ್ತರ ಎಲ್ಲದರ ಬೆಳವಣಿಗೆ ಏರುಗತಿಯಲ್ಲಿರುತ್ತದೆ. ಇದಕ್ಕಾಗಿ ಹೆಚ್ಚುವರಿ ಶಕ್ತಿಯನ್ನು ಆಹಾರದಿಂದಲೇ ಒದಗಿಸಬೇಕು. ಇಂದು ಶೇ 50ರಷ್ಟು ಹದಿವಯಸ್ಸಿನ ಹೆಣ್ಣುಮಕ್ಕಳು ರಕ್ತಹೀನತೆ ಮತ್ತು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ.

ಗ್ರಾಮೀಣ ಭಾಗದ ಹೆಣ್ಣುಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದರೆ, ನಗರ ಪ್ರದೇಶದ ಹೆಣ್ಣುಮಕ್ಕಳಲ್ಲಿ ಬೊಜ್ಜಿನ ಸಮಸ್ಯೆ ಇದೆ. ಮಾಸಿಕ ಋತುಸ್ರಾವದಲ್ಲಿ ಸುಮಾರು 60ರಿಂದ 80 ಮೀ.ಲಿ ತನಕ ರಕ್ತ ನಷ್ಟಗೊಳ್ಳಬಹುದು. ಶೇಕಡ 10ರಷ್ಟು ಹೆಣ್ಣುಮಕ್ಕಳಲ್ಲಿ ಅಧಿಕ ರಕ್ತಸ್ರಾವದಿಂದ ರಕ್ತಹೀನತೆಯೂ ಉಂಟಾಗಬಹುದು.

ಪ್ರತಿಹೆಣ್ಣುಮಕ್ಕಳಲ್ಲೂ 12ವರ್ಷ ತುಂಬುವುದರೊಳಗೆ ರಕ್ತದಲ್ಲಿನ ಹಿಮೋಗ್ಲೋಬಿನ್ ಮಟ್ಟ ಪ್ರತಿಶತ 12 ಮಿ.ಗ್ರಾಂ ಇರಬೇಕು. ಆದರೆ, ನಮ್ಮ ದೇಶದಲ್ಲಿ ಶೇ 60ಕ್ಕೂ ಹೆಚ್ಚು ಹೆಣ್ಣುಮಕ್ಕಳಲ್ಲಿ ಹಿಮೋಗ್ಲೋಬಿನ್ ಮಟ್ಟ 10ಕ್ಕಿಂತ ಕಡಿಮೆ ಇರುತ್ತದೆ. ಈ ಸ್ಥಿತಿಯನ್ನು ರಕ್ತಹೀನತೆ ಎನ್ನುತ್ತಾರೆ. ಇದನ್ನು ಸರಿಪಡಿಸಲು ಕಬ್ಬಿಣಾಂಶ ಹೆಚ್ಚುಳ್ಳ ಹಸಿರು ಸೊಪ್ಪು, ತರಕಾರಿಗಳು, ಬೆಲ್ಲ, ಖರ್ಜೂರ, ಅಂಜೂರದಹಣ್ಣು ಸೇವಿಸಬೇಕು. ಹಿಮೋಗ್ಲೋಬಿನ್‌ಮಟ್ಟ ಕಾಯ್ದುಕೊಳ್ಳಲು ಫೋಲಿಕ್‌ಆಮ್ಲದ ಅವಶ್ಯಕತೆಯು ಇದೆ. ಇದು ತಾಜಾಹಣ್ಣುಗಳಲ್ಲಿ (ಬಾಳೆಹಣ್ಣು, ಸೀತಾಫಲ, ಚಿಕ್ಕೂ ಇತ್ಯಾದಿ) ಬಸಳೆ, ಪಾಲಕ್ ಸೊಪ್ಪು ಇತ್ಯಾದಿಗಳಿಂದ ಅಧಿಕವಾಗಿ ಸಿಗುತ್ತದೆ. ಜಂಕ್‌ಫುಡ್, ಕೃತಕ ಪೇಯಗಳು, ಪಿಜ್ಜಾ, ಬರ್ಗರ್, ಸಿಹಿತಿಂಡಿ ಕುರಕಲು ತಿಂಡಿಗಳಿಂದ ದೂರವಿರಿಸಿ. ಇವುಗಳ ಸೇವನೆಯಿಂದ ಶರೀರಕ್ಕೆ ಬೇಕಾದ ಸತು(ಜಿಂಕ್) ಕ್ಯಾಲ್ಸಿಯಂನ ವಿಸರ್ಜನೆಯನ್ನ ಹೆಚ್ಚಿಸಿ ಪೌಷ್ಠಿಕಾಂಶ ಕೊರತೆಯನ್ನ ಉಂಟುಮಾಡುತ್ತದೆ.

ರಕ್ತಹೀನತೆ ಮತ್ತು ಅಪೌಷ್ಟಿಕತೆಯನ್ನು ಹೊಂದಿರುವ ಹುಡುಗಿಯರು ಗರ್ಭ ಧರಿಸಿದರೆ, ಹುಟ್ಟುವ ಮಕ್ಕಳಿಗೂ ರಕ್ತಹೀನತೆ ಸಮಸ್ಯೆ ಕಾಡಬಹುದು. ಕಬ್ಬಿಣದ ಪಾತ್ರೆಗಳಲ್ಲಿ ಆಹಾರ ತಯಾರಿಸುವುದು ಉತ್ತಮ. ಕ್ಯಾಲ್ಸಿಯಂಯುಕ್ತ ಅಯೋಡಿನ್‌ಅಂಶ ಹಾಗೂ ವಿಟಮಿನ್ 'ಡಿ'ಯುಕ್ತ ಸಮುದ್ರ ಉತ್ಪನ್ನಗಳ ಬಳಕೆ, ಬಾದಾಮಿ, ವಾಲ್‌ನಟ್ ಇತ್ಯಾದಿ ಒಣಹಣ್ಣುಗಳ, ಬೀಜಗಳ ಬಳಕೆ ಒಳ್ಳೆಯದು. ಪಿರಿಡಾಕ್ಸಿನ್ ಎನ್ನುವ 'ಡಿ' ವಿಟಮಿನ್ ಕೊರತೆಯಿಂದ ಹರೆಯದ ಹೆಣ್ಣುಮಕ್ಕಳಲ್ಲಿ ಮುಟ್ಟಿನ ಮುನ್ನಾದಿನಗಳಲ್ಲಿ ಖಿನ್ನತೆ, ಭಾವನೆಗಳ ಏರಿಳಿತ, ಸ್ತನಗಳಲ್ಲಿ ನೋವು ಇತ್ಯಾದಿ ಕಂಡುಬರಬಹುದು. ಮುಟ್ಟಿನ ಮುನ್ನಾದಿನಗಳಲ್ಲಿ ಅಥವಾ ಎಲ್ಲಾ ದಿನಗಳಲ್ಲೂ ಅಧಿಕ ಉಪ್ಪಿನಾಂಶ ಹಾಗೂ ಅತಿಯಾಗಿ ಕರಿದ, ಹುರಿದ ಆಹಾರಗಳನ್ನು ತ್ಯಜಿಸಬೇಕು. ಹೆಚ್ಚು ನಾರಿನಾಂಶವುಳ್ಳ ಆಹಾರ, ಹಣ್ಣು ತರಕಾರಿಗಳ ಸೇವನೆ ಮಾಡುವುದು ಸೂಕ್ತ. ಮುಟ್ಟಿನ ಸಮಯದಲ್ಲಿ ಕೆಲವರಲ್ಲಿ ಕಿಬ್ಬೊಟ್ಟೆನೋವು, ಬೆನ್ನುನೋವು ಇತ್ಯಾದಿ ಉಂಟಾಗಬಹುದು. ಆ ಸಮಯದಲ್ಲಿ ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಮತ್ತು ಹೆಚ್ಚು ದ್ರವ ಆಹಾರ ಸೇವಿಸುವುದು ಸೂಕ್ತವಾದದ್ದು.

- **ಬಿಳಿ ಮುಟ್ಟಿನ ಸಮಸ್ಯೆ ಇದೆ. ನನ್ನ ಗಂಡ ಜತೆ ಸೆಕ್ಸ್ ಮಾಡಿಲ್ಲ. ಗೆಳೆಯನ ಬಳಿ ಎರಡು ದಿನಕ್ಕೆ 4 ಬಾರಿ ಸೆಕ್ಸ್ ಮಾಡುತ್ತೇನೆ. ಇದರಿಂದ ಏನಾದರೂ ಸಮಸ್ಯೆಗಳಾಗುತ್ತದೆಯೇ?**

ಹೆಸರು, ಊರು ಇಲ್ಲ

ನೀವು ವಿವಾಹದ ಚೌಕಟ್ಟಿನೊಳಗಿದ್ದು, ಪತಿ ಬಿಟ್ಟು ಗೆಳೆಯರೊಡನೆ ಲೈಂಗಿಕಸಂಪರ್ಕ ಮಾಡುತ್ತಿರುವುದು ಸಾಮಾಜಿಕವಾಗಿಯೂ, ನೈತಿಕವಾಗಿಯೂ ಸಮಂಜಸವಲ್ಲ. ವಿವಾಹೇತರ ಲೈಂಗಿಕಸಂಪರ್ಕದಿಂದ ಲೈಂಗಿಕ ರೋಗಗಳು ತಗಲುವ ಅಪಾಯವಿದೆ. ಹಾಗಾಗಿ ನೀವು ನಿಮ್ಮ ಪತಿಯೊಡನೆ ಲೈಂಗಿಕ ಸಂಪರ್ಕ ಮಾಡಲು ತೊಂದರೆ ಇದ್ದಲ್ಲಿ ತಜ್ಞರನ್ನ ಸಂಪರ್ಕಿಸಿ ಸಲಹೆ ಪಡೆದುಕೊಳ್ಳಿ. ಲೈಂಗಿಕ ಕಾಯಿಲೆಯಿಂದಲೂ ಬಿಳಿಮುಟ್ಟು ಉಂಟಾಗುವುದರಿಂದ ಸ್ತ್ರೀರೋಗತಜ್ಞರನ್ನು ಭೇಟಿ ಮಾಡಿ ಸೂಕ್ತಚಿಕಿತ್ಸೆ ಪಡೆದುಕೊಳ್ಳಿ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

‘ಒಕ್ಕಲಿಗರು ಕೃಷಿಗೆ ಸೀಮಿತವಾಗದಿರಿ’

‘ಉದ್ಯಮಿ ಒಕ್ಕಲಿಗ– ಫಸ್ಟ್ ಸರ್ಕಲ್ ಎಕ್ಸ್‌ಪೊ–2024’ ಉದ್ಘಾಟನಾ ಸಮಾರಂಭದಲ್ಲಿ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೃತಕ ಬುದ್ಧಿಮತ್ತೆ, ರೊಬೊಟಿಕ್ ತಂತ್ರಜ್ಞಾನದ ಕಾಲಘಟ್ಟದಲ್ಲಿ ಒಕ್ಕಲಿಗರು ಕೃಷಿಗೆ ಸೀಮಿತವಾಗದೆ, ಇಂದಿನ ವೇಗಕ್ಕೆ ಬದುಕನ್ನು ಬದಲಾಯಿಸಿಕೊಳ್ಳಬೇಕು’ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಬೆಂಗಳೂರಿನ ಫಸ್ಟ್ ಸರ್ಕಲ್ ಸೊಸೈಟಿ ಆಯೋಜಿಸಿರುವ ‘ಉದ್ಯಮಿ ಒಕ್ಕಲಿಗ– ಫಸ್ಟ್ ಸರ್ಕಲ್ ಎಕ್ಸ್‌ಪೊ–2024’ ಉದ್ಘಾಟನಾ ಕಾರ್ಯಕ್ರಮದಲ್ಲಿ ಶುಕ್ರವಾರ ಅವರು ಮಾತನಾಡಿದರು.

‘ಯಂತ್ರ ಮಾನವನ ಜೊತೆ ಸ್ಪರ್ಧೆ ಮಾಡುವ ಕಾಲ ಹತ್ತಿರವಾಗುತ್ತಿದೆ. ಅದಕ್ಕೆ ತಕ್ಕಂತೆ ಬದಲಾಗಿ ಸ್ಪರ್ಧೆ ಎದುರಿಸಲು ಸನ್ನದ್ಧರಾಗಬೇಕು. ಒಕ್ಕಲಿಗ ಉದ್ಯಮಿಯಾದರೆ ಹಲವು ಮಂದಿಗೆ ಉದ್ಯೋಗ ನೀಡಬಹುದು. ಶಿಕ್ಷಣ, ಆರೋಗ್ಯ, ಕೈಗಾರಿಕೆ ಕ್ಷೇತ್ರದಲ್ಲಿ ನಾಲ್ಕಾರು ಜನರಿಗೆ ಉದ್ಯೋಗ ನೀಡುವಂತಾಗಬೇಕು. ಇಲ್ಲದಿದ್ದರೆ ಡೈನೋಸರ್ ರೀತಿ ಅವನತಿ ಹೊಂದಬೇಕಾಗುತ್ತದೆ’ ಎಂದರು.



‘ಉದ್ಯಮಿ ಒಕ್ಕಲಿಗ– ಫಸ್ಟ್ ಸರ್ಕಲ್ ಎಕ್ಸ್‌ಪೊ–2024’ ಅನ್ನು ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಶಾಸಕ ಕೆ. ಗೋಪಾಲಯ್ಯ, ಫಸ್ಟ್ ಸರ್ಕಲ್ ಸೊಸೈಟಿ ಮುಖ್ಯಸ್ಥ ಜಯರಾಮ ರಾಯಪುರ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಂಸದ ಬಿ.ಎನ್. ಬಚ್ಚೇಗೌಡ, ಶಾಸಕ ಜಿ. ಟಿ. ದೇವೇಗೌಡ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

‘ಗಂಗ ಅರಸರ ಕಾಲದಲ್ಲಿ ಉಪಪಂಗಡಗಳು ಇರಲಿಲ್ಲ. ‘ಉದ್ಯಮಿ ಒಕ್ಕಲಿಗ ಸಮಾವೇಶ’ದಲ್ಲಿ ಎಲ್ಲರೂ ಒಂದಾಗಿದ್ದಾರೆ. ಬೇರೊಬ್ಬರ ಮರ್ಜಿಯಲ್ಲಿದ್ದಾಗ ಜಾತಿ ಅಥವಾ ಗೌಡ ಎಂಬ ಹೆಸರನ್ನು ಹೇಳಿಕೊಳ್ಳಲು ಹಿಂಜರಿಕೆಯಾಗುತ್ತದೆ. ನಾವು ನಾಯಕನ ಸ್ಥಾನದಲ್ಲಿದ್ದಾಗ, ಇನ್ನೊಬ್ಬರಿಗೆ ಉದ್ಯೋಗ ನೀಡುವಂತಾದರೆ ‘ಗೌಡ’ ಎಂಬ ಹೆಗ್ಗಳಿಕೆ ಉಳಿಯುತ್ತದೆ’ ಎಂದರು.

‘ಒಕ್ಕಲಿಗ ಸಮಾಜದ ಉದ್ಯಮಿಗಳೆಲ್ಲರೂ ಇಲ್ಲಿ ಸೇರಿರುವುದು ಉತ್ತಮ ಬೆಳವಣಿಗೆ. ಜತೆಗೂಡುವುದು ಆರಂಭ, ಜತೆಗೂಡಿ ಚರ್ಚಿಸುವುದು ಪ್ರಗತಿ, ಜತೆಗೂಡಿ ಕೆಲಸ ಮಾಡುವುದು ಯಶಸ್ಸು. ಅದರಂತೆ ನೀವೆಲ್ಲರೂ ಒಟ್ಟಾಗಿ ಚರ್ಚೆ, ಕೆಲಸ ಮಾಡಿದರೆ ಯಶಸ್ಸು ಕಾಣುತ್ತೀರಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ನಿಮ್ಮದು ಗಟ್ಟಿ ಧ್ವನಿಯಾಗಿರಲಿ. ಇಡೀ ಸಮಾಜವನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಕೆಲಸ ಮಾಡಬೇಕು. ನಮ್ಮಂತಹವರು ತಪ್ಪು ಮಾಡಿದರೂ ನೇರವಾಗಿ ತಪ್ಪು ಎಂದು ಹೇಳುವ ಶಕ್ತಿ ನಿಮಗಿದೆ. ಒಕ್ಕಲಿಗರ ಸಂಘದವರು ಜೇನು ತಿನ್ನುತ್ತಾ ಕೂರುವುದು ಕಡಿಮೆಯಾಗಿದೆ. ಮತ್ತೆ ಕಿತ್ತಾಡಿದರೆ ಆಡಳಿತಾಧಿಕಾರಿ ಬಂದು ಕೂರುತ್ತಾರೆ’ ಎಂದು ಹೇಳಿದರು.

‘ವಿಶ್ವದಲ್ಲಿ ಬೆಂಗಳೂರಿನ ಮೂಲಕ ಭಾರತವನ್ನು ನೋಡಲಾಗುತ್ತಿದೆ. ಇಲ್ಲಿರುವ ಮಾನವ ಸಂಪನ್ಮೂಲ, ನವೋದ್ಯಮ, ಶಿಕ್ಷಣ, ಆರೋಗ್ಯ, ಪರಿಸರ ಎಲ್ಲರಿಗೂ ಆಕರ್ಷಣೆಯಾಗಿದೆ. ನಮ್ಮ ಸಮಾಜದವರಾದ ನಾಡಪ್ರಭು ಕೆಂಪೇಗೌಡ, ಕೆಂಗಲ್ ಹನುಮಂತಯ್ಯ ಹಾಗೂ ಎಸ್.ಎಂ ಕೃಷ್ಣ ಅವರನ್ನು ಬೆಂಗಳೂರಿಗರು ಸದಾ ಸ್ಮರಿಸಿಕೊಳ್ಳಬೇಕು. ಬಾಲಗಂಗಾಧರನಾಥ ಸ್ವಾಮೀಜಿ ಸಮಾಜಕ್ಕೆ ರಾಜಕೀಯವಾಗಿ ಶಕ್ತಿ ತುಂಬಿದ್ದಾರೆ. ನಿರ್ಮಲಾನಂದನಾಥ ಸ್ವಾಮೀಜಿ ಅವರು ಆ ಸ್ಥಾನ ತುಂಬಿದ್ದು, ಸಮಾಜವನ್ನು ಉತ್ತಮವಾಗಿ ರೂಪಿಸುವ ವಿಶ್ವಾಸ ನನಗಿದೆ’ ಎಂದರು.

ರಾಜ್ಯ ಸರ್ಕಾರದ ನಿಲುವಿಗೆ ಅಸಮಾಧಾನ

ಹರಿಪ್ರಸಾದ್ ವಿಚಾರಣೆಗೆ ಬಂದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೋಧ್ರಾ ಮಾದರಿ ದುಷ್ಕೃತ್ಯಕ್ಕೆ ಸಂಚು ನಡೆದಿದೆ’ ಎಂಬ ಹೇಳಿಕೆ ಕುರಿತು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರನ್ನು ವಿಚಾರಣೆ ನಡೆಸಲು ಸಿಸಿಬಿ ಪೊಲೀಸರು ಶುಕ್ರವಾರ ಪ್ರಯತ್ನ ಮಾಡಿದರು.



ಬಿ.ಕೆ. ಹರಿಪ್ರಸಾದ್

ಕುಮಾರಕೃಪಾ ಅತಿಥಿ ಗೃಹದಲ್ಲಿದ್ದ ಹರಿಪ್ರಸಾದ್ ಅವರನ್ನು ಭೇಟಿಮಾಡಿದ ಎಸಿಪಿ ಧರ್ಮೇಂದ್ರ ನೇತೃತ್ವದ ಸಿಸಿಬಿ ಅಧಿಕಾರಿಗಳ ತಂಡವು, ಹಿಂದಿನ ಹೇಳಿಕೆ ಕುರಿತು ವಿವರಣೆ ದಾಖಲಿಸಿಕೊಳ್ಳಲು ಮುಂದಾಯಿತು. ‘ನನ್ನ ಹೇಳಿಕೆ ಅಪರಾಧ ಕೃತ್ಯವಾಗಿದ್ದರೆ ಎಫ್‌ಐಆರ್ ದಾಖಲಿಸಿ, ಬಂಧಿಸಿ ಠಾಣೆಗೆ ಕರೆದೊಯ್ಯಬೇಕು. ಅಲ್ಲಿಯೇ ಹೇಳಿಕೆ ನೀಡುತ್ತೇನೆ’ ಎಂದು ಹರಿಪ್ರಸಾದ್ ಪಟ್ಟು ಹಿಡಿದರು.

ಮಾಹಿತಿ ಪಡೆಯಲು ಕೆಲಕಾಲ ಪ್ರಯತ್ನ ನಡೆಸಿದ ಪೊಲೀಸರು, ಬಳಿಕ ಸ್ಥಳದಿಂದ ನಿರ್ಗಮಿಸಿದರು.

ತೀವ್ರ ಅಸಮಾಧಾನ: ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಹರಿಪ್ರಸಾದ್, ‘ಅಯೋಧ್ಯೆಗೆ ಹೋಗುವವರಿಗೆ ರಕ್ಷಣೆ ನೀಡುವಂತೆ ನಾನು ಮನವಿ ಮಾಡಿದ್ದೆ. ಆ ಬಗ್ಗೆ ಪೊಲೀಸರು ವಿಚಾರಣೆಗೆ ಬಂದಿದ್ದರು. ನನ್ನ ಹೇಳಿಕೆ ಅಪರಾಧವಾಗಿದ್ದರೆ ಬಂಧಿಸಿ ಕರೆದೊಯ್ದು ವಿಚಾರಣೆ ನಡೆಸಲಿ. ಮಂಪರು ಪರೀಕ್ಷೆಗೂ ಸಿದ್ಧ, ಜತೆಗೆ ಬಿಜೆಪಿ ಅಧ್ಯಕ್ಷರ ಮಂಪರು ಪರೀಕ್ಷೆಯನ್ನೂ ನಡೆಸಲಿ. ಇದನ್ನೇ ಪೊಲೀಸ್ ಅಧಿಕಾರಿಗಳಿಗೆ ತಿಳಿಸಿದ್ದೇನೆ’ ಎಂದರು.

‘ಕಲ್ಲಡ್ಕ ಪ್ರಭಾಕರ ಭಟ್, ಅನಂತ ಕುಮಾರ ಹೆಗಡೆ ಅವರಿಗೆ ರತ್ನಗಂಬಳಿ ಹಾಸಿ, ಆತಿಥ್ಯ ನೀಡಲಾಗುತ್ತಿದೆ. ನನಗೆ ಅಂತಹ ಆತಿಥ್ಯ ಬೇಡ. ಯಾವುದೇ ಸಂದರ್ಭದಲ್ಲೂ ವಿಚಾರಣೆ ಎದುರಿಸಲು ಸಿದ್ಧ’ ಎಂದು ಹೇಳಿದರು. ‘ಏಕೆ ಈ ರೀತಿ ಆಗಿದೆ ಎನ್ನುವುದನ್ನು ಸರ್ಕಾರದಲ್ಲಿ ಇರುವವರು, ಮುಖ್ಯಮಂತ್ರಿಯವರನ್ನು ನೀವು ಕೇಳಬೇಕು. ಇಡೀ ದೇಶದಲ್ಲಿ ಓಡಾಡಿರುವವನು ನಾನು. ಪೊಲೀಸರಿಗೆ ಭಯ ಬೀಳುವ ವ್ಯಕ್ತಿಯಲ್ಲ. ಪೊಲೀಸರ ಮೂಲಕ ನನ್ನನ್ನು ಬೆದರಿಸಬಹುದು ಎಂದು ಯಾರಾದರೂ ಭಾವಿಸಿದ್ದರೆ ಅದು ಅವರ ಭ್ರಮೆಯಷ್ಟೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಇದು ಕಾಂಗ್ರೆಸ್ ಪಕ್ಷದ ಸರ್ಕಾರ ಅಂದುಕೊಂಡಿದ್ದೆ. ಇದು ಕಾಂಗ್ರೆಸ್ ಪಕ್ಷದ ಸರ್ಕಾರವೋ ಬೇರೆಯವರ ಸರ್ಕಾರವೋ ಎಂಬುದನ್ನು ಯೋಚಿಸಬೇಕಿದೆ. ನನ್ನ ಪರಿಸ್ಥಿತಿಯೇ ಹೀಗಾಗಿದೆ ಎಂದರೆ ಕಾಂಗ್ರೆಸ್ ಪಕ್ಷದ ಸಾಮಾನ್ಯ ಕಾರ್ಯಕರ್ತರ ಸ್ಥಿತಿ ಏನಾಗಬೇಕು? ಅದ್ಭುತವಾದ ಸರ್ಕಾರ ನಮ್ಮದು, ಅದಕ್ಕಾಗಿ ಹೀಗೆ ಮಾಡುವುದು. ನಾನು ಅಪರಾಧಿಯಲ್ಲ. ಹೀಗಾಗಿ ಯಾರ ಗಮನಕ್ಕೂ ತರುವುದಿಲ್ಲ. ಪರೋಕ್ಷವಾಗಿ ಮಾತನಾಡುವ ಅಭ್ಯಾಸವಿಲ್ಲ. ಪಕ್ಷದ ಹೈಕಮಾಂಡ್ ಇದೆ ನೋಡೋಣ’ ಎಂದರು.

ಅಪಘಾತ: 6 ಮಂದಿ ಸಾವು

ಪ್ರಜಾವಾಣಿ ವಾರ್ತೆ



ಚಿತ್ರದುರ್ಗ: ಜಿಲ್ಲೆಯಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಶುಕ್ರವಾರ ಆರು ಜನ ಮೃತಪಟ್ಟಿದ್ದಾರೆ. ಶವ ಸಾಗಿಸುತ್ತಿದ್ದವರು ಹಾಗೂ ವೈಕುಂಠ ಸಮಾರಾಧನೆಗೆ ತೆರಳುತ್ತಿದ್ದವರು ಅಪಘಾತದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ.

ಬೆಂಗಳೂರಿನ ಬಾಲಾಜಿ ಬಡಾವಣೆಯ ಫಣಿರಾಜ್ ಕುಟುಂಬದವರು, ಸಂಬಂಧಿಕರೊಬ್ಬರ ತಿಥಿ ಕಾರ್ಯಕ್ಕೆಂದು ಹೊಸಪೇಟೆಗೆ ತೆರಳುತ್ತಿದ್ದರು. ಚಿತ್ರದುರ್ಗ ಹೊರವಲಯದ ಮದಕರಿಪುರ ಸಮೀಪದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ಮುಂದೆ ಸಾಗುತ್ತಿದ್ದ ಗ್ಯಾಸ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿದೆ.

ಫಣಿರಾಜ್ ಅವರ ಅತ್ತೆ ನಿರ್ಮಲಾ (50), ಸಹೋದರಿ ವಿನುತಾ (40) ಹಾಗೂ ಪುತ್ರ ಯಶಸ್ (2) ಮೃತಪಟ್ಟಿದ್ದಾರೆ. ಪತ್ನಿ ರಶ್ಮಿ (32) ಸ್ಥಿತಿ ಗಂಭೀರವಾಗಿದ್ದು, ದಾವಣಗೆರೆಯ ಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಗ್ರಾಮಾಂತರ ಠಾಣೆಯ ಪೊಲೀಸರು ಮಾಹಿತಿ ನೀಡಿದ್ದಾರೆ.

ಶವ ಸಾಗಿಸುತ್ತಿದ್ದ ಕಾರು ಪಲ್ಟಿ: ಮೊಳಕಾಲ್ಮುರು ತಾಲ್ಲೂಕಿನ ರಾಂಪುರ ಸಮೀಪದ ರಾಷ್ಟ್ರೀಯ ಹೆದ್ದಾರಿ 150 ‘ಎ’ನಲ್ಲಿ ಅಜ್ಜಿಯ ಶವ ಸಾಗಿಸುತ್ತಿದ್ದ ಕಾರೊಂದರ ಟೈರು ಸ್ಫೋಟಗೊಂಡು ಅದು ಪಲ್ಟಿಯಾದ್ದರಿಂದ ಮೂವರು ಮೃತಪಟ್ಟಿದ್ದಾರೆ.

ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕು ದೇಶನೂರು ಗ್ರಾಮದ ಸುರೇಶ್ (40), ಪುತ್ರಿ ಭೂಮಿಕಾ (9), ಕುರುವಾಹಳ್ಳಿಯ ಸಂಬಂಧಿ ಮಲ್ಲ (25) ಅಸುನೀಗಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ನಾಲ್ವರನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸುರೇಶ್ ಅವರ ಅಜ್ಜಿ ಹುಲಿಗೆಮ್ಮ (66) ಬೆಂಗಳೂರಿನಲ್ಲಿ ಶುಕ್ರವಾರ ಮೃತಪಟ್ಟಿದ್ದರು. ಶವವನ್ನು ಕಾರಿನ ಡಿಕ್ಕಿಯಲ್ಲಿಟ್ಟುಕೊಂಡು ದೇಶನೂರಿಗೆ ಹೋಗುತ್ತಿದ್ದಾಗ ಅವಘಡ ಸಂಭವಿಸಿದೆ ಎಂದು ರಾಂಪುರ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಮತೀಯ ಗೂಂಡಾಗಿರಿ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಕದ್ರಿ ಉದ್ಯಾನಕ್ಕೆ ಬಂದಿದ್ದ ಕಾಲೇಜು ವಿದ್ಯಾರ್ಥಿನಿ– ವಿದ್ಯಾರ್ಥಿಯ ಮೇಲೆ ಮತೀಯ ಗೂಂಡಾಗಿರಿ ನಡೆಸಿದ ಆರೋಪದ ಮೇಲೆ ಇಬ್ಬರನ್ನು ಕದ್ರಿ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ನಿತಿನ್ (18), ಹರ್ಷ (18) ಬಂಧಿತ ಆರೋಪಿಗಳು. ಇನ್ನೊಬ್ಬ ಆರೋಪಿಯಾಗಿರುವ 17 ವರ್ಷದ ಬಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ದೇರಳಕಟ್ಟೆಯಲ್ಲಿ ಬಿ.ಎಸ್‌ಸಿ ನರ್ಸಿಂಗ್ ಓದುತ್ತಿರುವ ಹಿಂದೂ ಯುವತಿ, ಶುಕ್ರವಾರ ತನ್ನ ಸ್ನೇಹಿತ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಯ ಜೊತೆ ಕದ್ರಿ ಉದ್ಯಾನಕ್ಕೆ ಬಂದಿದ್ದಾರೆ. ಈ ವೇಳೆ ಅವರಿಬ್ಬರನ್ನು ಹಿಂಬಾಲಿಸಿಕೊಂಡು ಬಂದ ಮೂವರು, ಉದ್ಯಾನಕ್ಕೆ ಭೇಟಿ ನೀಡಿರುವ ಉದ್ದೇಶದ ಬಗ್ಗೆ ಪ್ರಶ್ನಿಸಿದ್ದಾರೆ. ನಂತರ ವಿದ್ಯಾರ್ಥಿ ಮೇಲೆ ಹಲ್ಲೆ ನಡೆಸಿ, ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ. ಅಲ್ಲದೆ, ಅವರಿಬ್ಬರ ಫೋಟೊ ತೆಗೆದು, ವಿಡಿಯೊ ಚಿತ್ರೀಕರಣ ಮಾಡಿಕೊಂಡಿದ್ದಾರೆ. ಈ ವೇಳೆ ಅಲ್ಲಿ ಜನರು ಸೇರಿದ್ದು, ವಿಷಯ ತಿಳಿದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ’ ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

ಆರೋಪಿಗಳ ಮೇಲೆ ಐಪಿಸಿ ಸೆಕ್ಷನ್ 341 (ನಿರ್ಬಂಧಿಸುವುದು), 504 (ಶಾಂತಿ ಭಂಗಕ್ಕೆ ಪ್ರಚೋದನೆ), 509, 354(ಬಿ), 354(ಡಿ) ಮಹಿಳೆಯನ್ನು ಹಿಂಬಾಲಿಸಿದ) ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ನಾಲ್ವರು ಸಾಧಕರಿಗೆ ಅಮ್ಮೆಂಬಳ ಸಾಹಿತ್ಯ ಪ್ರಶಸ್ತಿ

ಮಂಗಳೂರು: ಇಲ್ಲಿಯ ಅಮ್ಮೆಂಬಳ ಶಂಕರನಾರಾಯಣ ನಾವಡ ಸಾಹಿತ್ಯ ಪ್ರತಿಷ್ಠಾನ ನೀಡುವ ‘ಅಮ್ಮೆಂಬಳ ಸಾಹಿತ್ಯ ಪ್ರಶಸ್ತಿ’ಗೆ ಹಿ.ಚ. ಬೋರಲಿಂಗಯ್ಯ, ಬಸವರಾಜ ಕಲ್ಗುಡಿ, ಪಾದೇಕಲ್ಲು ವಿಷ್ಣು ಭಟ್ಟ, ಬಿ.ಜನಾರ್ದನ ಭಟ್ ಅವರನ್ನು ಆಯ್ಕೆ ಮಾಡಲಾಗಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಬೋರಲಿಂಗಯ್ಯ ಅವರಿಗೆ 2020ನೇ ಸಾಲು, ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಬಸವರಾಜ ಕಲ್ಗುಡಿ ಅವರಿಗೆ 2021ನೇ ಸಾಲು, ನಿವೃತ್ತ ಪ್ರಾಚಾರ್ಯ ಪಾದೇಕಲ್ಲು ವಿಷ್ಣು ಭಟ್ಟ ಅವರಿಗೆ 2022ರ ಹಾಗೂ ಪಿಯು ಕಾಲೇಜಿನ ನಿವೃತ್ತ ಪ್ರಾಚಾರ್ಯ ಬಿ.ಜನಾರ್ದನ ಭಟ್ ಅವರಿಗೆ 2023ನೇ ಸಾಲಿನ ಪ್ರಶಸ್ತಿ ನೀಡಲಾಗುತ್ತಿದೆ.

ಈ ನಾಲ್ವರು ಕನ್ನಡ ನಾಡು ನುಡಿ ಸಂಸ್ಕೃತಿಗೆ ಸಲ್ಲಿಸಿದ ಸೇವೆಯನ್ನು ಗುರುತಿಸಿ, ಜೀವಮಾನದ ಸಾಧನೆಗಾಗಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ತಲಾ ₹10 ಸಾವಿರ ನಗದು ಬಹುಮಾನ ಒಳಗೊಂಡಿದೆ.

ಇದೇ 24ರಂದು ಬೆಳಿಗ್ಗೆ 10.30ಕ್ಕೆ ಮಂಗಳೂರು ವಿಶ್ವವಿದ್ಯಾಲಯದ ಪ್ರೊ. ಎಸ್‌ವಿಪಿ ಕನ್ನಡ ಅಧ್ಯಯನ ಕೇಂದ್ರದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು ಸಮಾರಂಭಕ್ಕೆ ಚಾಲನೆ ನೀಡಲಿದ್ದು, ಕರ್ಣಾಟಕ ಬ್ಯಾಂಕ್ ಮಾಜಿ ಕಾರ್ಯನಿರ್ವಹಣಾಧಿಕಾರಿ ಮಹಾಬಲೇಶ್ವರ ಎಂ.ಎಸ್. ಪ್ರಶಸ್ತಿ ಪ್ರದಾನ ಮಾಡುವರು. ಡಾ.ಅಜಕ್ಕಳ ಗಿರೀಶ ಭಟ್ ಅಭಿನಂದನಾ ಭಾಷಣ ಮಾಡುವರು. ಕೆ.ಜಯರಾಮ ಶೆಟ್ಟಿ, ಪ್ರೊ.ಸೋಮಣ್ಣ ಹೊಂಗಳ್ಳಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಮಂಗಳೂರು ವಿವಿ ಕುಲಪತಿ ಜಯರಾಜ್ ಅಮೀನ್ ಅಧ್ಯಕ್ಷತೆ ವಹಿಸುವರು ಎಂದು ಪ್ರತಿಷ್ಠಾನದ ಪ್ರೊ.ಎ.ವಿ. ನಾವಡ, ಗಾಯತ್ರಿ ನಾವಡ ತಿಳಿಸಿದ್ದಾರೆ.

‘ಒಕ್ಕಲಿಗರ ಮೀಸಲಾತಿ ಕಡಿಮೆ ಮಾಡಿ, ಮುಸ್ಲಿಮರಿಗೆ ಕೊಟ್ಟಿದ್ದೇ ನಾನು’

ಹಾಸನ: ‘ಅಂದು ಒಕ್ಕಲಿಗರಿಗೆ ಕೊಡಲಾಗಿದ್ದ ಮೀಸಲಾತಿ ಪ್ರಮಾಣವನ್ನು ಕಡಿಮೆ ಮಾಡಿ, ಅದನ್ನು ಮುಸ್ಲಿಮರಿಗೆ ನೀಡಿದ್ದೇ ನಾನು’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಪ್ರತಿಪಾದಿಸಿದರು.



ಎಚ್.ಡಿ. ದೇವೇಗೌಡ

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ರಾಜ್ಯ ಸರ್ಕಾರವು ಒಳ ಮೀಸಲಾತಿ ಬಗ್ಗೆ ಸಚಿವ ಸಂಪುಟದಲ್ಲಿ ನಿರ್ಣಯ ಮಾಡಿ, ಕೇಂದ್ರಕ್ಕೆ ಕಳಿಸಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ತಿಪ್ಪೇಸ್ವಾಮಿ ಅವರು ಒಳ ಮೀಸಲಾತಿ ಬಗ್ಗೆ ಖಾಸಗಿ ನಿರ್ಣಯ ಮಂಡಿಸಿದ್ದರು. ಆಗ ಪ್ರತಿಪಕ್ಷದ ನಾಯಕರಾಗಿದ್ದ ಮಲ್ಲಿಕಾರ್ಜುನ ಖರ್ಗೆ, ತಮ್ಮ ಸ್ಥಾನದಿಂದ ನೆಗೆದು ಬಂದು ಆ ನಿರ್ಣಯದ ಪ್ರತಿಯನ್ನು ಹರಿದು ತಿಪ್ಪೇಸ್ವಾಮಿ ಅವರ ಮುಖಕ್ಕೆ ಎಸೆದಿದ್ದರು. ಆದರೆ ಇವತ್ತು ಒಳ ಮೀಸಲಾತಿ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ’ ಎಂದು ತಿರುಗೇಟು ನೀಡಿದರು.

‘ಪರಿಶಿಷ್ಟ ಜಾತಿಗೆ ಶೇ 15, ಪರಿಶಿಷ್ಟ ಪಂಗಡಗಳಿಗೆ ಶೇ 3 ಮೀಸಲಾತಿ ಇತ್ತು. ಆದರೆ ಉದ್ಯೋಗದಲ್ಲಿ ಈ ಮೀಸಲಾತಿ ಪ್ರಮಾಣ ತಲುಪದೇ ಹೋದಾಗ, ನಾನು ಪರಿಶಿಷ್ಟ ಜಾತಿಗೆ ಶೇ 15 ರಿಂದ ಶೇ 18, ಪರಿಶಿಷ್ಟ ಪಂಗಡಕ್ಕೆ ಶೇ 3ರಿಂದ ಶೇ 5ಕ್ಕೆ ಹೆಚ್ಚಿಸಿದೆ. ಅಂದು ನಾನು ಮಾಡಿದ್ದ ಶೇ 23 ಮೀಸಲಾತಿ ಈಗಲೂ ಜಾರಿಯಲ್ಲಿದೆ. ಆದರೆ, ಅದನ್ನು ಇಷ್ಟು ದಿನ ಮರೆಮಾಚುತ್ತಲೇ ಬಂದಿದ್ದಾರೆ’ ಎಂದು ಕಾಂಗ್ರೆಸ್ ಮುಖಂಡರನ್ನು ಟೀಕಿಸಿದರು.

‘ಒಳ ಮೀಸಲಾತಿ ವಿಚಾರವನ್ನು ಕೇಂದ್ರಕ್ಕೆ ಹೊತ್ತು ಹಾಕುವ ಕೆಲಸ ಮಾಡಿದ್ದಾರೆ. ಅದನ್ನೇ ಮುಂದಿಟ್ಟುಕೊಂಡು ಈ ಚುನಾವಣೆಯಲ್ಲಿ ಹೋರಾಟ ಮಾಡುತ್ತೇವೆ. ಮೀಸಲಾತಿ ಬಗ್ಗೆ ಏನಾಗಿದೆ ಎಂಬ ಚರ್ಚೆಯಾಗಲಿ, ಅದನ್ನು ನಾನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇನೆ’ ಎಂದರು.

ಚಾರ್ಮಾಡಿ ಘಾಟ್ ವಿಸ್ತರಣೆಗೆ ₹343 ಕೋಟಿ

ನವದೆಹಲಿ: ಮಂಗಳೂರು–ಮೂಡಿಗೆರೆ–ತುಮಕೂರು ನಡುವಿನ ರಾಷ್ಟ್ರೀಯ ಹೆದ್ದಾರಿ 73ರ ವಿಸ್ತರಣೆಗೆ ₹343.73 ಕೋಟಿ ಬಿಡುಗಡೆ ಮಾಡಲು ಅನುಮೋದನೆ ನೀಡಲಾಗಿದೆ ಎಂದು ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.



ನಿತಿನ್ ಗಡ್ಕರಿ

ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಇಪಿಸಿ ಮಾದರಿಯಲ್ಲಿ 10.8 ಕಿ.ಮೀ ರಸ್ತೆಯ ವಿಸ್ತರಣೆ ಮಾಡಲಾಗುತ್ತದೆ. ಈ ರಸ್ತೆಯು ದ್ವಿಪಥದ ರಸ್ತೆಯಾಗಿ ಪರಿವರ್ತನೆ ಹೊಂದಲಿದೆ. ಚಾರ್ಮಾಡಿ ಘಾಟ್‌ನ ಗುಡ್ಡಗಾಡು ಪ್ರದೇಶದಲ್ಲಿ ಕೈಗೆತ್ತಿಕೊಳ್ಳುವ ಉಪಕ್ರಮ ಸವಾಲಿನದ್ದು. ಜತೆಗೆ ಸಂಚಾರ ವ್ಯವಸ್ಥೆ ಗಣನೀಯವಾಗಿ ಸುಧಾರಣೆ ಆಗಲಿದೆ’ ಎಂದು ತಿಳಿಸಿದ್ದಾರೆ.

1 ಲೋಕಸಭಾ ಚುನಾವಣಾ ತಯಾರಿಗೆ ಕಾಂಗ್ರೆಸ್ ಪ್ರದೇಶ ಚುನಾವಣಾ ಸಮಿತಿ ಸಭೆ

2 ಸಿ.ಎಂ, ಡಿಸಿಎಂ ಸೇರಿ 58 ಸದಸ್ಯರು ಭಾಗಿ

3 ಶಿಫಾರಸುಗಳ ಕುರಿತು ಇಂದು ಸಂಜೆಯೊಳಗೆ ವಿವರಣೆ ನೀಡುವಂತೆ ಸುರ್ಜೇವಾಲಾ ಸೂಚನೆ

ಅಭ್ಯರ್ಥಿ ಆಯ್ಕೆ: ಸಚಿವರ ಶಿಫಾರಸಿಗೆ ಅಪಸ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯ ಸಂಭವನೀಯ ಅಭ್ಯರ್ಥಿಗಳ ಕುರಿತು ಸಚಿವರು ನೀಡಿರುವ ಶಿಫಾರಸುಗಳ ಕುರಿತು ಕಾಂಗ್ರೆಸ್ ಪ್ರದೇಶ ಚುನಾವಣಾ ಸಮಿತಿ ಸಭೆಯಲ್ಲಿ ಆಕ್ಷೇಪ ವ್ಯಕ್ತವಾಗಿದ್ದು, ಮತ್ತೊಂದು ಸುತ್ತಿನ ಅಭಿಪ್ರಾಯ ಸಂಗ್ರಹಕ್ಕೆ ಒಲವು ವ್ಯಕ್ತವಾಗಿದೆ.

ಲೋಕಸಭಾ ಕ್ಷೇತ್ರವಾರು ಉಸ್ತುವಾರಿ ವಹಿಸಿರುವ ಸಚಿವರು ಅಭ್ಯರ್ಥಿಗಳ ಆಯ್ಕೆಗೆ ಸಲ್ಲಿಸಿರುವ ಶಿಫಾರಸು ವರದಿಗಳ ಕುರಿತು ಚರ್ಚಿಸಲು ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಚುನಾವಣಾ ಸಮಿತಿ ಸಭೆ ನಡೆಯಿತು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಮಿತಿಯ 58 ಸದಸ್ಯರು ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿಯಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಸಭೆಯಲ್ಲಿದ್ದರು.

'ಸಚಿವರು ನೀಡಿರುವ ಶಿಫಾರಸುಗಳ ಪಟ್ಟಿಯನ್ನು ಚುನಾವಣಾ ಸಮಿತಿ ಸದಸ್ಯರೊಂದಿಗೆ ಹಂಚಿಕೊಳ್ಳಲಾಯಿತು. ಶಿಫಾರಸುಗಳ ಕುರಿತು ಎಲ್ಲ ಸದಸ್ಯರ ಅಭಿಪ್ರಾಯ ಕೋರಲಾಗಿದೆ. ಹಲವು ಕ್ಷೇತ್ರಗಳಲ್ಲಿ ಸಂಭವನೀಯ ಅಭ್ಯರ್ಥಿಗಳ ಪಟ್ಟಿಗೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಕೆಲವೆಡೆ ಪ್ರಬಲ ಆಕಾಂಕ್ಷಿಗಳಿದ್ದರೂ ಕಡೆಗಣಿಸಿ ಬೇರೆ ಹೆಸರುಗಳನ್ನು ಸೂಚಿಸಿರುವುದಕ್ಕೆ ಅಪಸ್ವರ ಬಂತು' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ವಿವರಣೆಗೆ ಸೂಚನೆ: ಎಲ್ಲ ಸಚಿವರಿಗೂ ತಮ್ಮ ಶಿಫಾರಸುಗಳ ಕುರಿತು ಶನಿವಾರ ಸಂಜೆಯೊಳಗೆ ವಿವರಣೆ ನೀಡುವಂತೆ ಸುರ್ಜೇವಾಲಾ ಸೂಚಿಸಿದರು. ಆಕ್ಷೇಪ ವ್ಯಕ್ತವಾಗಿರುವ ಕ್ಷೇತ್ರಗಳ ಉಸ್ತುವಾರಿಗಳಿಗೆ ತಮ್ಮ ಶಿಫಾರಸಿನ ಹಿಂದಿರುವ ಕಾರಣಗಳನ್ನು ವಿವರಿಸುವಂತೆಯೂ ಸೂಚಿಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಸಚಿವರಿಂದ ಸಲ್ಲಿಕೆಯಾಗಿರುವ ವರದಿಗಳಲ್ಲಿರುವ ಸಂಭವನೀಯರ ಹೆಸರುಗಳ ಕುರಿತು ಚುನಾವಣಾ ಸಮಿತಿ ಸದಸ್ಯರು ಆದ್ಯತೆಯನ್ನು ಸೂಚಿಸಲು ಅವಕಾಶ ನೀಡಲಾಗಿದೆ. ಆಕ್ಷೇಪಣೆ ಅಥವಾ ಇತರ ಅಂಶಗಳಿದ್ದಲ್ಲಿ ಅವುಗಳನ್ನು ದಾಖಲಿಸಿ, ಸಲ್ಲಿಸುವಂತೆಯೂ ಸೂಚಿಸಲಾಗಿದೆ.

'ಆಕ್ಷೇಪ ವ್ಯಕ್ತವಾಗಿರುವ ಕ್ಷೇತ್ರಗಳಲ್ಲಿ ಸಂಭವನೀಯರ ಹೆಸರುಗಳ ಕುರಿತು ಸಮರ್ಥನೆ ನೀಡಲು ಸಚಿವರು ವಿಫಲರಾದರೆ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಶಾಸಕರು ಮತ್ತು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಅಭಿಪ್ರಾಯ ಸಂಗ್ರಹಿಸಲಾಗುವುದು. ನಂತರ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು ಎಂಬು ದಾಗಿ ಸುರ್ಜೇವಾಲಾ ತಿಳಿಸಿದ್ದಾರೆ' ಎಂದು ಪಕ್ಷದ ಮೂಲಗಳು ಹೇಳಿವೆ.

ಸಭೆಯ ಆರಂಭದಲ್ಲಿ ಮಾತನಾಡಿದ ಸುರ್ಜೇವಾಲಾ, 'ದಕ್ಷಿಣ ಭಾರತದಲ್ಲಿ ಹೆಚ್ಚು ಸ್ಥಾನ ಗಳಿಸಲು ಕಾಂಗ್ರೆಸ್ ಪಕ್ಷಕ್ಕೆ ಅವಕಾಶವಿದೆ. ಕರ್ನಾಟಕದ ಮೇಲೆ ಪಕ್ಷದ ನಿರೀಕ್ಷೆಯೂ ಜಾಸ್ತಿ ಇದೆ. ಲೋಕಸಭಾ ಚುನಾವಣೆಯನ್ನು ಎಲ್ಲರೂ ಗಂಭೀರವಾಗಿ ಪರಿಗಣಿಸಿ ಕೆಲಸ ಮಾಡಬೇಕು ಎಂಬ ಸೂಚನೆಯನ್ನೂ ನೀಡಿದರು' ಎಂದು ಪಕ್ಷದ ಮುಖಂಡರೊಬ್ಬರು ತಿಳಿಸಿದರು.

'ಯಾವುದೇ ಕ್ಷೇತ್ರದಲ್ಲೂ ಹೊಂದಾಣಿಕೆ ರಾಜಕಾರಣಕ್ಕೆ ಅವಕಾಶ ನೀಡಬಾರದು. ಪಕ್ಷದ ವರಿಷ್ಠರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಬೇಕು' ಎಂದು ಡಿ.ಕೆ. ಶಿವಕುಮಾರ್ ಹೇಳಿದರು. 'ಜೆಡಿಎಸ್–ಬಿಜೆಪಿ ಮೈತ್ರಿಯಿಂದ ಕಾಂಗ್ರೆಸ್‌ಗೆ ಅನುಕೂಲಕರ ವಾತಾವರಣ ಇದೆ. ಅದರ ಲಾಭ ಪಡೆಯಲು ಸರಿಯಾದ ಕಾರ್ಯತಂತ್ರ ರೂಪಿಸಬೇಕು' ಎಂದು ಸಿದ್ದರಾಮಯ್ಯ ಹೇಳಿದರು ಎಂದು ಗೊತ್ತಾಗಿದೆ.

ಸಭೆಯ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸುರ್ಜೇವಾಲಾ, 'ಸಂಭವನೀಯ ಅಭ್ಯರ್ಥಿಗಳ ಕುರಿತು ಸಚಿವರು ನೀಡಿರುವ ಶಿಫಾರಸುಗಳ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ. ಸಚಿವರು, ಶಾಸಕರ ಸ್ಪರ್ಧೆ ಕುರಿತು ಯಾವುದೇ ಚರ್ಚೆಯಾಗಿಲ್ಲ. ಪ್ರದೇಶ ಚುನಾವಣಾ ಸಮಿತಿ ಶಿಫಾರಸಿನ ಬಳಿಕ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಚರ್ಚೆಗೆ ಬರಲಿದೆ' ಎಂದರು.

ಪ್ರಬಲ ಅಭ್ಯರ್ಥಿಗಳಿಲ್ಲದ್ದಕ್ಕೆ ಆಕ್ಷೇಪ

'ಹತ್ತಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಪ್ರಬಲರ ಹೆಸರುಗಳೇ ಇಲ್ಲದಿರುವುದಕ್ಕೆ ಸುರ್ಜೇವಾಲಾ ತೀವ್ರವಾಗಿ ಅಸಮಾಧಾನ ವ್ಯಕ್ತಪಡಿಸಿದರು. ಈ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಎಲ್ಲಿಂದ ತರುತ್ತೀರಿ? ಪಕ್ಷದೊಳಗೆ ಇರುವವರನ್ನು ಗುರುತಿಸುತ್ತೀರೊ? ಅಥವಾ ಹೊರಗಿನಿಂದ ಕರೆತರುತ್ತೀರೊ ಆದಷ್ಟು ಬೇಗ ನಿರ್ಧರಿಸಿ ಎಂಬುದಾಗಿ ಹೇಳಿದರು' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಒಳಮೀಸಲು: ಬದ್ಧತೆ ಇಲ್ಲದ ಕಾಂಗ್ರೆಸ್– ಬೊಮ್ಮಾಯಿ

ಬೆಂಗಳೂರು: ಕಾಂಗ್ರೆಸ್‌ಗೆ ಬದ್ಧತೆ ಇದ್ದರೆ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಜಾರಿ ಮಾಡಬೇಕು. ಒಳ ಮೀಸಲಾತಿ ಆಧಾರದಲ್ಲೇ ನೇಮಕಾತಿ, ಬಡ್ತಿ ನೀಡಬೇಕು ಎಂದು ಶಾಸಕ ಬಸವರಾಜ ಬೊಮ್ಮಾಯಿ ಒತ್ತಾಯಿಸಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಆಯೋಗದ ವರದಿಯನ್ನು ಜಾರಿ ಮಾಡುವುದಾಗಿ 2013ರಿಂದಲೂ ಕಾಂಗ್ರೆಸ್ ಹೇಳುತ್ತಾ ಬಂದಿದೆ. ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಸಮಯದಲ್ಲಿ ಸಂವಿಧಾನ ತಿದ್ದುಪಡಿ ಮಾಡಲು ಕೇಂದ್ರಕ್ಕೆ ಶಿಫಾರಸ್ಸು ಮಾಡುವ ಮೂಲಕ ಹೊಸ ನಾಟಕವಾಡುತ್ತಿದೆ ಎಂದು ದೂರಿದರು.

ಕೇಂದ್ರದಿಂದ ಅನುದಾನ ಬರುತ್ತಿಲ್ಲ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪ ಸರಿಯಲ್ಲ. ಕೇಂದ್ರದ ಯೋಜನೆಗಳಿಗೆ ರಾಜ್ಯದ ಪಾಲು ಬಿಡುಗಡೆ ಮಾಡದೇ ಕೇಂದ್ರದ ಅನುದಾನ ಕುರಿತು ಸುಳ್ಳು ಹೇಳುತ್ತಿದ್ದಾರೆ. ಕೇಂದ್ರದ ಕೆಲವು ಯೋಜನೆಗಳು ನೇರವಾಗಿ ಫಲಾನುಭವಿಗಳಿಗೆ ತಲುಪುತ್ತಿದೆ. ಹಾಗಾಗಿ, ಇವರು ರಾಜ್ಯಕ್ಕೆ ಕಡಿಮೆ ಅನುದಾನ ಬರುತ್ತಿದೆ ಎಂದು ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. 14ನೇ ಹಣಕಾಸಿಗಿಂತ 15ನೇ ಹಣಕಾಸು ಆಯೋಗದ ಅವಧಿಯಲ್ಲಿ ರಾಜ್ಯಕ್ಕೆ ₹1 ಲಕ್ಷ ಕೋಟಿ ಹೆಚ್ಚಿಗೆ ಬಂದಿದೆ. ಆಯುಷ್ಮಾನ್ ಭಾರತ ಯೋಜನೆಯಲ್ಲೇ 62 ಲಕ್ಷ ಜನರಿಗೆ ಪ್ರಯೋಜನವಾಗಿದೆ ಎಂದರು.

ಉಡುಪಿ: ಅಖಂಡ ಗೀತಾ ಪಾರಾಯಣಕ್ಕೆ ಚಾಲನೆ




ಉಡುಪಿ: ಇಲ್ಲಿಯ ಕೃಷ್ಣಮಠದ ರಾಜಾಂಗಣ ಎದು ರಿಗಿರುವ ಗೀತಾ ಮಂದಿರದಲ್ಲಿ ಅಖಂಡ ಉದಯಾಸ್ತಮಾನ ಗೀತಾ ಪಾರಾಯಣ ಕಾರ್ಯಕ್ರಮಕ್ಕೆ ಶುಕ್ರವಾರ ಅದಮಾರು ಮಠದ ವಿಶ್ವಪ್ರಿಯ ತೀರ್ಥ ಸ್ವಾಮೀಜಿ ಚಾಲನೆ ನೀಡಿದರು.

ಗೀತಾ ಮಂದಿರದಲ್ಲಿ ಪ್ರತಿದಿನ ಗೀತೆಯ ಪಾರಾಯಣ ನಡೆಯಲಿದ್ದು ದೇಶದ ಯಾವುದೇ ಮೂಲೆಯಲ್ಲಿರುವ ಭಕ್ತರು ಹೆಸರು ನೋಂದಾಯಿಸಿಕೊಂಡು ಭಾಗವಹಿಸಬಹುದು. ಜಾತಿ, ಮತ ಬೇಧವಿಲ್ಲದೆ ಪ್ರತಿಯೊಬ್ಬರೂ ಗೀತಾ ಪಾರಾಯಣದಲ್ಲಿ ಭಾಗವಹಿಸಿ ಗೀತೆಯ ಸಾರವನ್ನು ಪಠಿಸಬೇಕು ಎಂದರು. ಪರ್ಯಾಯದ ಅವಧಿಯಲ್ಲಿ ಅಖಂಡ ಗೀತಾ ಪಾರಾಯಣ ನಡೆಸುವುದಾಗಿ ಘೋಷಿಸಲಾಗಿತ್ತು. ಅದರಂತೆ ಇದಕ್ಕೆ ಚಾಲನೆ ನೀಡಲಾಗಿದೆ ಎಂದು ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ ತಿಳಿಸಿದರು.

ಬೆಳಗಾವಿಯಲ್ಲಿ ಮತ್ತೊಬ್ಬ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ



ಸಮಿವುಲ್ಲಾ ಲಾಲನವರ

ಹಾವೇರಿ: ಹಾನಗಲ್ ತಾಲ್ಲೂಕಿನ ನಾಲ್ಕರ ಕ್ರಾಸ್ ಬಳಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಶುಕ್ರವಾರ ಮತ್ತೊಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಈವರೆಗೆ ಒಟ್ಟು 11 ಆರೋಪಿಗಳ ಬಂಧನವಾಗಿದೆ.

'ಅಕ್ಕಿಆಲೂರಿನ ಟೆಂಪೊ ಚಾಲಕ ಸಮಿವುಲ್ಲಾ ಲಾಲನವರ (24) ಬಂಧಿತ ಆರೋಪಿ. ಬಾಂಬೆಯಲ್ಲಿ ಇರುವುದಾಗಿ ಕುಟುಂಬಸ್ಥರಿಗೆ ಹೇಳಿ ಆತ ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದ. ತೀವ್ರ ಹುಡುಕಾಟದ ಬಳಿಕ ಆತನನ್ನು ಬೆಳಗಾವಿಯಲ್ಲಿ ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

ಪುತ್ರನಿಗೆ ಟಿಕೆಟ್: ಮಹದೇವಪ್ಪ ಪ್ರಯತ್ನ

ಚಾಮರಾಜನಗರ ಪ.ಜಾತಿ ಮೀಸಲು ಕ್ಷೇತ್ರದಿಂದ ಸುನೀಲ್ ಬೋಸ್ ಕಣಕ್ಕಿಳಿಸುವ ಬಯಕೆ

• ಎಂ. ಮಹೇಶ

ಮೈಸೂರು: ಸಮಾಜಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರು ತಮ್ಮ ಮಗ ಸುನೀಲ್ ಬೋಸ್ ಅವರನ್ನು ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸಲು ಕಾಂಗ್ರೆಸ್ ಟಿಕೆಟ್‌ಗಾಗಿ ಇನ್ನಿಲ್ಲದ ಪ್ರಯತ್ನ ನಡೆಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರೊಂದಿಗೂ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಇದರಿಂದ ಅನುಕೂಲವಾಗಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಅವರು ಪ್ರತಿನಿಧಿಸುವ ತಿ.ನರಸೀಪುರ ವಿಧಾನಸಭಾ ಕ್ಷೇತ್ರವು ಚಾಮರಾಜನಗರ ಲೋಕಸಭಾ ಕ್ಷೇತ್ರದ ಭಾಗವಾಗಿದೆ. ಅವರ ಮಗ ಸದ್ಯ ಆ ಕ್ಷೇತ್ರದ ಕೆಡಿಪಿ ಸದಸ್ಯರಾಗಿದ್ದು, ಲೋಕಸಭೆ ಚುನಾವಣೆ ಮೇಲೆ ಕಣ್ಣಿಟ್ಟು, ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಕೈ ತಪ್ಪಿದ ಅವಕಾಶ: ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮಗನಿಗೆ ತಿ.ನರಸೀಪುರದಿಂದ ಟಿಕೆಟ್ ಕೊಡಿಸಿ, ತಾವು ನಂಜನಗೂಡಿನಿಂದ ಸ್ಪರ್ಧಿಸಬೇಕೆಂದು ಮಹದೇವಪ್ಪ ಬಯಸಿದ್ದರು. ಅದಕ್ಕಾಗಿ ಭೂಮಿಕೆಯನ್ನೂ ಸಿದ್ಧಪಡಿಸಿದ್ದರು. ನಂಜನಗೂಡಿನಲ್ಲಿ ವ್ಯಾಪಕವಾಗಿ ಸಂಚರಿಸಿ, ಹಲವು ಬಾರಿ ಪಕ್ಷದ ಮುಖಂಡರು–ಕಾರ್ಯಕರ್ತರ ಸಭೆ ನಡೆಸಿದ್ದರು.


ಆದರೆ, ಮತ್ತೊಬ್ಬ ಆಕಾಂಕ್ಷಿಯಾಗಿದ್ದ, ಮಾಜಿ ಸಂಸದ ಆರ್. ಧ್ರುವನಾರಾಯಣ ಅವರ ಅಕಾಲಿಕ ನಿಧನದಿಂದಾಗಿ ನಂಜನಗೂಡು ಕ್ಷೇತ್ರವನ್ನು ಅವರ ಪುತ್ರ ದರ್ಶನ್ ಅವರಿಗೆ ಬಿಟ್ಟು ಕೊಟ್ಟು ತಿ.ನರಸೀಪುರದಿಂದ ತಾವೇ ಸ್ಪರ್ಧಿಸಿದ್ದರು. ಮಗನಿಗೆ ಟಿಕೆಟ್ ಕೊಡಿಸುವ ಬಯಕೆ ಈಡೇರಿರಲಿಲ್ಲ.

'ಇದೀಗ, ಲೋಕಸಭೆಗೆ ಕಣಕ್ಕಿಳಿಸಲು ತಂತ್ರ ರೂಪಿಸಿದ್ದು, ಅದರ ಭಾಗವಾಗಿಯೇ, ಕೆಲವು ತಿಂಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮೈಸೂರಿನ ಮನೆಗೆ ಕರೆಸಿಕೊಂಡು ಮಗನ ರಾಜಕೀಯ ಜೀವನದ ಬಗ್ಗೆ ಚರ್ಚೆ ನಡೆಸಿದ್ದಾರೆ' ಎಂದು ತಿಳಿದುಬಂದಿದೆ.

ಪ್ರತಿಕ್ರಿಯೆಗೆ ಸುನೀಲ್ ಬೋಸ್ ಕರೆ ಸ್ವೀಕರಿಸಲಿಲ್ಲ.

ಮುಖ್ಯಾಂಶಗಳು

- ವಿಧಾನಸಭೆ ಪ್ರವೇಶಕ್ಕೆ ಸತತ ಪ್ರಯತ್ನ
- ಸದ್ಯ ತಿ.ನರಸೀಪುರ ಕ್ಷೇತ್ರದ ಕೆಡಿಪಿ ಸದಸ್ಯ
- ಚಾಮರಾಜನಗರ ಕ್ಷೇತ್ರದಲ್ಲಿ ಓಡಾಟ



ಮಹದೇವಪ್ಪ



ಸುನೀಲ್

'ಹೈಕಮಾಂಡ್ ತೀರ್ಮಾನವೇ ಅಂತಿಮ'

'ಪಕ್ಷಕ್ಕಾಗಿ ದುಡಿದವರಿಗೆ ಅವಕಾಶ ಸಿಗಬೇಕು. ಮಗ ಸುನೀಲ್ ಕೂಡ ಕೆಲಸ ಮಾಡಿದ್ದಾನೆ, ಆಕಾಂಕ್ಷಿಯೂ ಆಗಿದ್ದಾನೆ. ವೀಕ್ಷಕರು ಅಭಿಪ್ರಾಯ ಸಂಗ್ರಹಿಸಿದ್ದು, ಹಲವು ಆಕಾಂಕ್ಷಿಗಳಿದ್ದಾರೆ. ಹೈಕಮಾಂಡ್ ಅಂತಿಮ ತೀರ್ಮಾನ ಕೈಗೊಳ್ಳಲಿದೆ' ಎಂದು ಮಹದೇವಪ್ಪ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ನಂಜನಗೂಡು ಉಪ ಚುನಾವಣೆ ಸೇರಿದಂತೆ ಮೂರು ವಿಧಾನಸಭೆ ಚುನಾವಣೆಯಲ್ಲೂ ಆತ ಟಿಕೆಟ್ ಬಯಸಿದ್ದ. ಆದರೆ, ಸಿಕ್ಕಿಲ್ಲ. ಹಾಗೆಂದು ಸಂಘಟನೆ ಬಿಟ್ಟಿಲ್ಲ. ಮುನಿಸಿಕೊಳ್ಳದೆ ಪಕ್ಷದ ಕೆಲಸ ಮಾಡುತ್ತಿದ್ದಾನೆ' ಎಂದರು.



ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ 'ಡೆಕ್ಕನ್ ಹೆರಾಲ್ಡ್ ಚೇಂಜ್‌ಮೇಕರ್ಸ್ 2024' ಪ್ರಶಸ್ತಿ ಪ್ರದಾನ ಮಾಡಲಾಯಿತು. ಕುಳಿತವರು: ಪ್ರಶಸ್ತಿ ಪಡೆದ ಗಿರೀಶ್ ಜನ್ನೆ, ಅಲಿನಾ ಆಲಂ, ಜಿ.ಕೆ. ಪ್ರೇಮಾ, ತೀರ್ಪುಗಾರರಾದ ಉದ್ಯಮಿ ಕ್ಯಾಪ್ಟನ್ ಗೋಪಿನಾಥ್, ವಿಜ್ಞಾನಿ ನೇಮಿಚಂದ್ರ, ಲೇಖಕ ರಹಮತ್ ತರೀಕೆರೆ, ಗಾಯಕಿ ಎಂ.ಡಿ.ಪಲ್ಲವಿ, ಪ್ರಶಸ್ತಿ ಪಡೆದ ಎಂ. ಶೋಭಾ ರಾಣಿ, ಕಾವೇರಿ ಮೇರಿ ಡಿಸೋಜಾ, ದಿಯಾ ನಾಯ್ಡು. ನಿಂತವರು: ಪ್ರಶಸ್ತಿ ಪಡೆದ ಸಂತೋಷ್‌ಕುಮಾರ್, ಅರವಿಂದ, ಲಕ್ಷ್ಮಣ್ ಕೆ.ಪಿ, ವಿಕಾಸ್ ಆರ್ ಮೌರ್ಯ, ಶೈಲೇಂದ್ರ ಕುಮಾರ್, ಶಶಾಂಕ್ ಸೊಘಲ್

–ಪ್ರಜಾವಾಣಿ ಚಿತ್ರ

'ಡಿಎಚ್ ಚೇಂಜ್‌ಮೇಕರ್ಸ್ 2024' ಪ್ರಶಸ್ತಿ ಪ್ರದಾನ

ಬದಲಾವಣೆ ಹರಿಕಾರರಿಗೆ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಿಎಚ್ ಚೇಂಜ್‌ಮೇಕರ್‌ನ ಸಾಧಕರನ್ನು ನೋಡಿ, ಅವರ ಜೀವನವನ್ನು ಅರಿತುಕೊಂಡ ಮೇಲೆ ಬದಲಾವಣೆ ತರುವುದು ಹೇಗೆ ಎಂಬುದರ ಅರ್ಥ ನನಗೆ ತಿಳಿಯಿತು' ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಹೇಳಿದರು.

'ಡೆಕ್ಕನ್ ಹೆರಾಲ್ಡ್ ಚೇಂಜ್‌ಮೇಕರ್ಸ್ 2024' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ನಮ್ಮ ಸಂವಿಧಾನದ ತತ್ವಗಳಾದ ಸಮಾನತೆ, ಸಬಲೀಕರಣ, ಸಾಮಾಜಿಕ ಪರಿವರ್ತನೆ, ಮಕ್ಕಳ ಆರೈಕೆ, ಅಸಮಾನತೆ ನಿವಾರಣೆ, ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ಕಡಿತಗೊಳಿಸುವ ಕ್ರಿಯಾಶೀಲನೆ ಈ 15 ಚೇಂಜ್‌ಮೇಕರ್ಸ್ ಅವರ ಸಾಧನೆಯಲ್ಲಿದೆ' ಎಂದು ಶ್ಲಾಘಿಸಿದರು.

ಕಾನೂನು ವಿದ್ಯಾರ್ಥಿಯಾಗಿದ್ದಾಗಿನ ತಮ್ಮ ಅನುಭವವನ್ನು ಸ್ಮರಿಸಿಕೊಂಡ ಬಿ.ಎಸ್. ಪಾಟೀಲ್, 'ಪ್ರತಿಯೊಬ್ಬ ಪ್ರಜೆಯೂ ಉತ್ಕೃಷ್ಟತೆಯನ್ನು ಸಾಧಿಸಲು ನಿರಂತರವಾಗಿ ಶ್ರಮಿಸಬೇಕು ಎಂದು ನಮ್ಮ ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ. ವೈಯಕ್ತಿಕ ಸಾಧನೆಯ ಶ್ರೇಷ್ಠತೆಯು ಸಾಮೂಹಿಕ ಶ್ರೇಷ್ಠತೆಯತ್ತ ಸಾಗಿ ದೇಶದ ಪ್ರಗತಿಯನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ' ಎಂದು ಹೇಳಿದರು.

'40ಕ್ಕಿಂತ ಕಡಿಮೆ ವಯಸ್ಸಿನವರು ಸಮಾಜದಲ್ಲಿ ಬದಲಾವಣೆ ತರಲು ಪ್ರಯತ್ನಿಸಿರುವುದು ಮತ್ತು ಅವರನ್ನು ಗುರುತಿಸಿರುವುದು ಹೆಮ್ಮೆಯ ಸಂಗತಿ' ಎಂದು ಬೆಂಗಳೂರು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ಅವರು ಹರ್ಷ ವ್ಯಕ್ತಪಡಿಸಿದರು.

'ಸಮಾಜದ ಕಟ್ಟುಪಾಡುಗಳನ್ನು ಮೀರಿ ಸಾಧನೆ ಮಾಡಿದ ಜನರನ್ನು ಗುರುತಿಸಿ, ಸನ್ಮಾನಿಸಿರುವುದು ಉತ್ತಮವಾದ ಕಾರ್ಯ' ಎಂದು ಬೆಂಗಳೂರು ಪೊಲೀಸ್ ಕಮಿಷನರ್ ಬಿ. ದಯಾನಂದ ಅವರು ಹೇಳಿದರು.

'ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತಂದ ಜನರನ್ನು ಗುರುತಿಸಿ ಪ್ರಶಂಸಿಸುವುದು ಅತ್ಯಂತ ದೊಡ್ಡ ಕಾರ್ಯವಾಗಿದೆ' ಎಂದು ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್ ಶ್ಲಾಘಿಸಿದರು.

'ಲೋಕಸಭಾ ಚುನಾವಣೆಯಲ್ಲಿ ತಟಸ್ಥ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಸ್ಥಳೀಯ ಕಾಂಗ್ರೆಸ್ ನಾಯಕರ ಕೆಲವು ನಿರ್ಧಾರಗಳಿಂದ ಗೊಂದಲ ಉಂಟಾಗಿರುವುದರಿಂದ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಟಸ್ಥವಾಗಿ ಉಳಿಯಲು ನಿರ್ಧರಿಸಿದ್ದೇನೆ' ಎಂದು ವಿಧಾನ ಪರಿಷತ್ ಸದಸ್ಯ ಮಧು ಜಿ ಮಾದೇಗೌಡ ಶುಕ್ರವಾರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಈಚೆಗೆ ನಡೆಸಿದ ಸಭೆಯಲ್ಲಿ, ಮುಖಂಡರ ನಡುವಿನ ಗೊಂದಲಗಳನ್ನು ಶೀಘ್ರ ಪರಿಹರಿಸಬೇ ಕೆಂದು ಗಮನ ಸೆಳೆದಿರುವೆ. ಪಕ್ಷದ ವರಿಷ್ಠರ ಗಮನಕ್ಕೂ ತಂದಿದ್ದೇನೆ. ತಟಸ್ಥವಾಗಿ ಉಳಿಯಲು ಕಾರಣವೇನು ಎಂಬುದನ್ನು ಮುಂದಿನ ದಿನಗಳಲ್ಲಿ ತಿಳಿಸುತ್ತೇನೆ' ಎಂದರು.

'ಸಂಸದೆ ಸುಮಲತಾ ಕಾಂಗ್ರೆಸ್ ಸೇರುತ್ತಾರೆಂಬ ವಿಷಯ ಗೊತ್ತಿಲ್ಲ. ನಾನು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲ. ಸ್ಥಳೀಯ ನಾಯಕರಲ್ಲಿರುವ ಗೊಂದಲಗಳು ಬಗೆಹರಿದರೆ ಚುನಾವಣೆಯಲ್ಲಿ ಗೆಲುವು ಸಾಧಿಸಲು ಅನುಕೂಲವಾಗುತ್ತದೆ' ಎಂದರು.

'ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಸಿದ್ದರಾಮಯ್ಯ ಅವರಷ್ಟೇ ಡಿ.ಕೆ.ಶಿವಕುಮಾರ್ ಅವರೂ ಕಷ್ಟಪಟ್ಟಿದ್ದಾರೆ. ಎಲ್ಲ ಸಂಕಷ್ಟಗಳನ್ನು ಸಮರ್ಥವಾಗಿ ಎದುರಿಸಿ ಪಕ್ಷ ಕಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಅವರು ಮುಖ್ಯಮಂತ್ರಿಯಾಗಬೇಕೆಂಬುದು ನನ್ನ ಒತ್ತಾಯ' ಎಂದರು.

'ಬಿಜೆಪಿಯವರು ಪ್ರತಿಯೊಂದು ಚುನಾವಣೆಯಲ್ಲೂ ಒಂದಲ್ಲಾ ಒಂದು ಭಾವನಾತ್ಮಕ ವಿಷಯ ತಂದು ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ಕಳೆದ ಚುನಾವಣೆ ವೇಳೆ ಪುಲ್ವಾಮಾ ದಾಳಿಯನ್ನು ರಾಜಕೀಯಕ್ಕೆ ಬಳಸಿಕೊಂಡಿದ್ದರು. ಈ ಬಾರಿ ಶ್ರೀರಾಮನ ದೇವಾಲಯ ನಿರ್ಮಾಣ ವಿಚಾರವನ್ನು ಬಳಸಿಕೊಳ್ಳುತ್ತಿದ್ದಾರೆ. ನಮ್ಮೂರಲ್ಲೂ ಶ್ರೀರಾಮ ಮಂದಿರವಿದೆ, ನಾನೂ ಪೂಜಿಸುತ್ತೇನೆ. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಇನ್ನೂ ಪೂರ್ಣಗೊಳ್ಳದಿದ್ದರೂ ಉದ್ಘಾಟನೆ ಮಾಡಿ ಜನರ ದಿಕ್ಕು ತಪ್ಪಿಸುತ್ತಿದ್ದಾರೆ' ಎಂದರು.

ಶಿವಕುಮಾರ ಸ್ವಾಮೀಜಿ ಸ್ಮರಣೋತ್ಸವ ನಾಳೆ

ಪ್ರಜಾವಾಣಿ ವಾರ್ತೆ

ತುಮಕೂರು: ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ 5ನೇ ವರ್ಷದ ಸ್ಮರಣೋತ್ಸವ ಭಾನುವಾರ (ಜ. 21) ಕ್ಯಾತ್ಸಂದ್ರದ ಮಠದ ಆವರಣದಲ್ಲಿ ನಡೆಯಲಿದೆ. ಒಂದು ಲಕ್ಷಕ್ಕೂ ಹೆಚ್ಚು ಭಕ್ತರು ಭಾಗವಹಿಸುವ ನಿರೀಕ್ಷೆ ಇದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಹಲವು ಪ್ರಮುಖ ನಾಯಕರು, ಮಠಾಧೀಶರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ತಿಳಿಸಿದರು.

ಶಿವಕುಮಾರ ಸ್ವಾಮೀಜಿ ಲಿಂಗೈಕ್ಯರಾದ ದಿನವನ್ನು (ಜ.21) ದಾಸೋಹ ದಿನವನ್ನಾಗಿ ಸರ್ಕಾರ ಆಚರಣೆ ಮಾಡುತ್ತಿದೆ. ಮಠದಲ್ಲೂ ಪುಣ್ಯ ಸ್ಮರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಭಾನುವಾರ ಮುಂಜಾನೆಯಿಂದಲೇ ಮಠದಲ್ಲಿ ಪೂಜಾ ಕೈಂಕರ್ಯ, ಧಾರ್ಮಿಕ ಕಾರ್ಯ ನೆರವೇರಲಿದೆ. ಶಿವ ಕುಮಾರ ಸ್ವಾಮೀಜಿ ಪುತ್ಥಳಿ ಮೆರವಣಿಗೆ ನಡೆಯಲಿದೆ. ನಂತರ ವೇದಿಕೆ ಕಾರ್ಯಕ್ರಮ ಇರಲಿದೆ.

ಬಸವಣ್ಣ ರಾಜ್ಯದ 'ಸಾಂಸ್ಕೃತಿಕ ನಾಯಕ' ಎಂದು ಸರ್ಕಾರ ಘೋಷಣೆ ಮಾಡಿರುವುದನ್ನು ಸ್ವಾಮೀಜಿ ಸ್ವಾಗತಿಸಿದರು. ಬಸವಣ್ಣ ಕೇವಲ ಸಾಂಸ್ಕೃತಿಕ ಕ್ಷೇತ್ರಕ್ಕಷ್ಟೇ ಅಲ್ಲ; ಅಧ್ಯಾತ್ಮ, ಧಾರ್ಮಿಕ, ಆರ್ಥಿಕ ವಿಚಾರದಲ್ಲಿ ಸಮಗ್ರ ವ್ಯಕ್ತಿತ್ವ ಹೊಂದಿದವರು. ಯಾವುದೇ ಗೌರವ, ಸ್ಥಾನ ಕೊಟ್ಟರೂ ಅದು ಕಡಿಮೆ. ಕರ್ನಾಟಕಕ್ಕೆ ಅಷ್ಟೇ ಅಲ್ಲ, ಇಡೀ ಜಗತ್ತಿಗೆ ಬೇಕಾದಂತಹ ಸಮಾನತೆ, ಸ್ವಾತಂತ್ರ್ಯ ಹಾಗೂ ಮಾನವೀಯ ಮೌಲ್ಯಗಳನ್ನು ರೂಪಿಸಿ ಕೊಟ್ಟಿದ್ದಾರೆ. ದೇಶದಲ್ಲಿ ಮೊದಲಿಗೆ ಪ್ರಜಾಪ್ರಭುತ್ವದ ಬೀಜ ಬಿತ್ತಿದವರು ಎಂದು ಸ್ಮರಿಸಿದರು.

ಸಹಕಾರ ಬ್ಯಾಂಕ್‌ಗೆ ವಂಚನೆ ಸಿಐಡಿಗೆ ಪ್ರಕರಣ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ಬ್ಯಾಂಕ್‌ಗಳಲ್ಲಿ ಸಾಲ ಪಡೆದು ಮರು ಪಾವತಿಸದೆ ವಂಚಿಸಿದ್ದ ಬೆಳಗಾವಿ ಜಿಲ್ಲೆಯ ಗೋಕಾಕ್‌ನ ಸೌಭಾಗ್ಯ ಲಕ್ಷ್ಮಿ ಶುಗರ್ಸ್ ಕಂಪನಿ ವಿರುದ್ಧದ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಿ, ರಾಜ್ಯ ಸರ್ಕಾರ ಶುಕ್ರವಾರ ಆದೇಶಿಸಿದೆ.

'ಹಂತ ಹಂತವಾಗಿ ₹232.88 ಕೋಟಿ ಸಾಲ ಪಡೆದು ವಂಚಿಸಲಾಗಿದೆ' ಎಂಬ ಆರೋಪದ ಅಡಿ ಗೋಕಾಕ್ ಶಾಸಕ ರಮೇಶ ಎಲ್. ಜಾರಕಿಹೊಳಿ ಹಾಗೂ ಇಬ್ಬರು ಸಕ್ಕರೆ ಕಾರ್ಖಾನೆ ಕಂಪನಿ ನಿರ್ದೇಶಕರ ವಿರುದ್ಧ ನಗರದ ವಿ.ವಿ.ಪುರಂ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಇದುವರೆಗೂ ವಿ.ವಿ. ಪುರಂ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದರು. ಈಗ ತನಿಖೆ ಜವಾಬ್ದಾರಿಯನ್ನು ಸಿಐಡಿಗೆ ವಹಿಸಲಾಗಿದೆ.

ಕಂಪನಿ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕರೂ ಆಗಿರುವ ರಮೇಶ ಜಾರಕಿಹೊಳಿ, ಕಂಪನಿ ನಿರ್ದೇಶಕರಾದ ವಸಂತ್ ವಿ. ಪಾಟೀಲ, ಶಂಕರ್ ವಿ. ಪಾವಡೆ ಅವರಿಗೆ ಸದ್ಯದಲ್ಲೇ ನೋಟಿಸ್ ನೀಡಿ ವಿಚಾರಣೆಗೆ ಕರೆಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಸಕ್ಕರೆ ಕಾರ್ಖಾನೆ ಸ್ಥಾಪನೆ, ವಿಸ್ತರಣೆ, ನಿರ್ವಹಣೆಗಾಗಿ ಕರ್ನಾಟಕ ಸಹಕಾರಿ ಅಪೆಕ್ಸ್ ಬ್ಯಾಂಕ್ ಹಾಗೂ ಅದರ ಸಮೂಹ ಬ್ಯಾಂಕ್‌ಗಳಾದ ವಿಜಯಪುರ, ತುಮಕೂರು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಿಂದ ಅವಧಿ ಹಾಗೂ ದುಡಿಯುವ ಬಂಡವಾಳ ಸಾಲ ಪಡೆದುಕೊಂಡಿದ್ದರು. ಅಸಲು ಮತ್ತು ಬಡ್ಡಿ ಮರು ಪಾವತಿಸದ ಕಾರಣ, 2023ರ ಆ.31ಕ್ಕೆ ಬಾಕಿ ಮೊತ್ತ ₹439.7 ಕೋಟಿಗೆ ಏರಿಕೆಯಾಗಿತ್ತು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿತ್ತು. 'ಸಾಲ ಪಡೆಯುವಾಗ ವಿಧಿಸಲಾಗಿದ್ದ ಷರತ್ತುಗಳನ್ನು ಉಲ್ಲಂಘಿಸಿ, ಬ್ಯಾಂಕ್‌ಗೆ ಮಾಹಿತಿ ನೀಡದೆ ಕಂಪನಿಯ ಆಡಳಿತ ಮಂಡಳಿಯಲ್ಲಿ ಕೆಲವು ಬದಲಾವಣೆ ಮಾಡಲಾಗಿತ್ತು' ಎಂದು ದೂರು ನೀಡಲಾಗಿತ್ತು.

ಸರ್ಕಾರಕ್ಕೆ ನೋಟಿಸ್

ಬೆಂಗಳೂರು: 'ಸಕ್ಕರೆ ಕಾರ್ಖಾನೆ ಅಭಿವೃದ್ಧಿಗಾಗಿ ಪಡೆದಿರುವ ಸಾಲ ಮತ್ತು ಬಡ್ಡಿ ಹಣ ಸೇರಿ ಒಟ್ಟು ₹439 ಕೋಟಿ ಮೊತ್ತವನ್ನು ಪಾವತಿ ಮಾಡದೆ ವಂಚಿಸಲಾಗಿದೆ ಎಂಬ ಆರೋಪದಡಿ ನನ್ನ ವಿರುದ್ಧ ದಾಖಲಿಸಿರುವ ದೂರು ಮತ್ತು ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಕೆಎಸ್‌ಒಯುಗೆ ಅವಕಾಶ ನೀಡಲು ಉನ್ನತ ಶಿಕ್ಷಣ ಇಲಾಖೆ ಚಿಂತನೆ

ಪದವಿ ಕಾಲೇಜುಗಳಲ್ಲೇ ದೂರ ಶಿಕ್ಷಣ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯದ 423 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದೂರ ಶಿಕ್ಷಣ ವಿಭಾಗಗಳನ್ನು ತೆರೆಯಲು ಉನ್ನತ ಶಿಕ್ಷಣ ಇಲಾಖೆ ಚಿಂತನೆ ನಡೆಸಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಒಯು) ಸಹಯೋಗದಲ್ಲಿ ರಾಜ್ಯದ ಪದವಿ ಕಾಲೇಜುಗಳಲ್ಲೇ ದೂರ ಶಿಕ್ಷಣ ವಿಭಾಗಗಳನ್ನು ತೆರೆಯಲು ಚರ್ಚೆಗಳು ಆರಂಭವಾಗಿವೆ. ಅರ್ಧಕ್ಕೆ ಪದವಿ ತೊರೆದವರು, ಎಸ್‌ಎಸ್‌ಎಲ್‌ಸಿ, ಪಿಯುಸಿ ಉತ್ತೀರ್ಣರಾದ ನಂತರ ಕೆಲಸಕ್ಕೆ ಸೇರಿದವರು ಹಾಗೂ ಗ್ರಾಮೀಣ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪೂರೈಸಲು ಇದರಿಂದ ಸಾಧ್ಯವಾಗಲಿದೆ ಎಂದು ಉನ್ನತ ಶಿಕ್ಷಣ ಇಲಾಖೆ ಸಿದ್ಧಪಡಿಸಿದ ಟಿಪ್ಪಣಿ ಉಲ್ಲೇಖಿಸಿದೆ.

ಮೈಸೂರಿನಲ್ಲಿ ಕೇಂದ್ರ ಸ್ಥಾನವನ್ನು ಹೊಂದಿರುವ ಕೆಎಸ್‌ಒಯು ರಾಜ್ಯದಲ್ಲಿನ 34 ಪ್ರಾದೇಶಿಕ ಕೇಂದ್ರಗಳ ಮೂಲಕ ವಿದ್ಯಾರ್ಥಿಗಳಿಗೆ ದೂರ ಶಿಕ್ಷಣ ನೀಡುತ್ತಿದೆ. ಮೊದಲು ಬೆಂಗಳೂರಿನ ಐದು ಸೇರಿ ಕೆಲವೇ ಜಿಲ್ಲೆಗಳಿಗೆ ಸೀಮಿತವಾಗಿದ್ದ ಪ್ರಾದೇಶಿಕ ಕಚೇರಿಗಳನ್ನು ಈಚೆಗೆ ಉತ್ತರ ಕರ್ನಾಟಕದ ಜಿಲ್ಲೆಗಳಿಗೂ ವಿಸ್ತರಿಸಲಾಗಿತ್ತು. ಪ್ರಸ್ತುತ 54 ಸಾವಿರ ವಿದ್ಯಾರ್ಥಿಗಳು 64 ವಿಷಯಗಳಲ್ಲಿ ದೂರ ಶಿಕ್ಷಣ ಪಡೆಯುತ್ತಿದ್ದಾರೆ.

ಪ್ರತಿ ಪದವಿ ಕಾಲೇಜಿನಲ್ಲೂ ಎರಡು ಕೊಠಡಿ ಮೀಸಲು: ಪದವಿ ಕಾಲೇಜುಗಳಲ್ಲೇ ದೂರ ಶಿಕ್ಷಣ ವಿಭಾಗಗಳನ್ನು ತೆರೆಯಲು ಪ್ರತಿ ಕಾಲೇಜಿನಲ್ಲೂ ಕನಿಷ್ಠ ಎರಡು ಕೊಠಡಿಗಳನ್ನು ಮೀಸಲಿಡಬೇಕು. ಸಂಪರ್ಕ ತರಗತಿಗಳನ್ನು ನಡೆಸಲು ರಜಾ ದಿನಗಳಲ್ಲಿ ಇತರೆ ಕೊಠಡಿಗಳನ್ನು ಬಳಸಿಕೊಳ್ಳಲು ಅವಕಾಶ ನೀಡಬೇಕು ಎಂದು ಕೆಎಸ್‌ಒಯು ಉನ್ನತ ಶಿಕ್ಷಣ ಇಲಾಖೆಗೆ ಬರೆದ ಪತ್ರದಲ್ಲಿ ಕೋರಿಕೆ ಸಲ್ಲಿಸಿದೆ. ಇದಕ್ಕೆ ಉನ್ನತ ಶಿಕ್ಷಣ ಸಚಿವರು ಸಮ್ಮತಿ ಸೂಚಿಸಿದ್ದಾರೆ.

ಏಕಕಾಲಕ್ಕೆ ಎರಡು ಪದವಿಗೆ ಅವಕಾಶ: ಪದವಿ ಕಾಲೇಜುಗಳಲ್ಲಿ ಈಗಾಗಲೇ ಕಲಿಯುತ್ತಿರುವ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮದಂತೆ ದೂರ ಶಿಕ್ಷಣದಲ್ಲಿ ಏಕಕಾಲಕ್ಕೆ ಮತ್ತೊಂದು ಪದವಿ ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳಬಹುದು. ಪ್ರಸ್ತುತ, ರಾಜ್ಯದಲ್ಲಿ 3.5 ಲಕ್ಷ ವಿದ್ಯಾರ್ಥಿಗಳು ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಏಕಕಾಲಕ್ಕೆ ಬಿ.ಇಡಿ ಶಿಕ್ಷಣ ಪಡೆಯಲು ಅವಕಾಶ ನೀಡುವ ಕುರಿತು ಚಿಂತನೆ ನಡೆದಿದೆ ಎನ್ನುತ್ತಾರೆ ಕೆಎಸ್‌ಒಯು ಕುಲಪತಿ ಶರಣಪ್ಪ ವಿ. ಹಲಸೆ.

ಸಂಶೋಧನೆಗೂ ಅವಕಾಶ: ಕೆಎಸ್‌ಒಯುನಲ್ಲಿ ಪ್ರಸ್ತುತ 92 ಅಭ್ಯರ್ಥಿಗಳು ಸಂಶೋಧನೆಗೆ (ಪಿ.ಎಚ್‌ಡಿ) ಪ್ರವೇಶ ಪಡೆದಿದ್ದಾರೆ. ಪದವಿ ಕಾಲೇಜುಗಳಲ್ಲಿ ದೂರ ಶಿಕ್ಷಣ ಆರಂಭವಾದ ನಂತರ ಮತ್ತೆ 100 ಅಭ್ಯರ್ಥಿಗಳಿಗೆ ಪಿ.ಎಚ್‌ಡಿ ಪ್ರವೇಶಕ್ಕೆ ಅವಕಾಶ ನೀಡಲಾಗುವುದು ಎಂದು ಶರಣಪ್ಪ ಹಲಸೆ ಹೇಳಿದರು.

ಪದವಿ ಕಾಲೇಜುಗಳಲ್ಲೇ ದೂರ ಶಿಕ್ಷಣ ವಿಭಾಗ ತೆರೆಯುವುದರಿಂದ ಕೆಎಸ್‌ಒಯು, ತನ್ನ ಪ್ರಾದೇಶಿಕ ಕಚೇರಿಗಳಿಗೆ ಮಾಡುವ ಅನಗತ್ಯ ವೆಚ್ಚ ತಗ್ಗಲಿದೆ
ಡಾ.ಎಂ.ಸಿ.ಸುಧಾಕರ್
ಉನ್ನತ ಶಿಕ್ಷಣ ಸಚಿವ

ಅಂಕಿ ಅಂಶಗಳು

430 ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳು

423 ದೂರ ಶಿಕ್ಷಣ ವಿಭಾಗಕ್ಕೆ ಗುರುತಿಸಿದ ಕಾಲೇಜುಗಳು

34 ಪ್ರಸ್ತುತ ಇರುವ ದೂರ ಶಿಕ್ಷಣ ಪ್ರಾದೇಶಿಕ ಕಚೇರಿಗಳು

ಇತರೆ ವಿ.ವಿಗಳಿಂದಲೂ ಕೋರಿಕೆ

ತಮ್ಮ ವಿಶ್ವವಿದ್ಯಾಲಯಗಳಿಗೆ ಸಂಯೋಜಿತವಾಗಿರುವ ಪದವಿ ಕಾಲೇಜುಗಳಲ್ಲೇ ದೂರ ಶಿಕ್ಷಣ ವಿಭಾಗ ತೆರೆಯಲು ಅನುಮತಿ ನೀಡುವಂತೆ ಕೋರಿ ರಾಜ್ಯದ ಹಲವು ಸರ್ಕಾರಿ ವಿಶ್ವವಿದ್ಯಾಲಯಗಳು ಸರ್ಕಾರಕ್ಕೆ ಮನವಿ ಸಲ್ಲಿಸಿವೆ.

ವಿಶ್ವವಿದ್ಯಾಲಯಗಳ ಅವೈಜ್ಞಾನಿಕ ವಿಭಜನೆಯಿಂದಾಗಿ ಸಂಪನ್ಮೂಲಗಳ ಕೊರತೆ ಎದುರಾಗಿದ್ದು, ಆರ್ಥಿಕ ಸಂಕಷ್ಟ ಅನುಭವಿಸುವಂತಾಗಿದೆ. ವಿಶ್ವವಿದ್ಯಾಲಯದ ವ್ಯಾಪ್ತಿಯನ್ನು ಮೀರದಂತೆ ದೂರ ಶಿಕ್ಷಣ ನಡೆಸಲು ಅವಕಾಶ ನೀಡಬೇಕು. ಪದವಿ ಕಾಲೇಜುಗಳಲ್ಲೇ ವಿಭಾಗ ತೆರೆಯಲು ಅವಕಾಶ ನೀಡುವುದರಿಂದ ಹಿಂದೆ ಇದ್ದಂತೆ ಖಾಸಗಿ ಕೇಂದ್ರಗಳ ಮೇಲಿನ ಅವಲಂಬನೆಯೂ ಇರುವುದಿಲ್ಲ ಎಂದು ಮನವಿಯಲ್ಲಿ ವಿವರಿಸಲಾಗಿದೆ.

ಅಂಬಿಕಾತನಯದತ್ತ ಪ್ರಶಸ್ತಿಗೆ ಬಸವರಾಜ ಕಲ್ಗುಡಿ ಆಯ್ಕೆ



ಧಾರವಾಡ: ನಗರದ ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನೀಡುವ 'ಅಂಬಿಕಾತನಯದತ್ತ' ರಾಷ್ಟ್ರಿಯ ಪ್ರಶಸ್ತಿಗೆ ಬೆಂಗಳೂರಿನ ಸಾಹಿತಿ ಬಸವರಾಜ ಕಲ್ಗುಡಿ ಆಯ್ಕೆಯಾಗಿದ್ದಾರೆ.

ಪುರಸ್ಕಾರ ₹1 ಲಕ್ಷ ನಗದು, ಫಲಕ ಒಳಗೊಂಡಿದೆ. ಬೇಂದ್ರೆ ಅವರ ಜನ್ಮ ದಿನಾಚರಣೆ ಪ್ರಯುಕ್ತ ಜನವರಿ 31ರಂದು ನಡೆ ಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಡಿ.ಎಂ.ಹಿರೇಮಠ ಹೇಳಿದ್ದಾರೆ.

ಎಫ್‌ಐಆರ್ ದಾಖಲಿಸುವ, ಜೈಲಿಗೆ ಕಳುಹಿಸುವ ಬೆದರಿಕೆ: ಜೈರಾಮ್ ರಮೇಶ್

ಅಸ್ಸಾಂನಲ್ಲಿ ಯಾತ್ರೆಗೆ ತೊಡಕು

ಮಾಜುಲಿ, ಅಸ್ಸಾಂ (ಪಿಟಿಐ): ದಕ್ಷಿಣದಿಂದ ಉತ್ತರದ ವರೆಗೆ ಸಾಗಿದ ಪಕ್ಷದ ಮೊದಲ ಭಾರತ ಜೋಡೊ ಯಾತ್ರೆಯು ಬಿಜೆಪಿ ಆಡಳಿತದ ರಾಜ್ಯಗಳನ್ನು ಹಾದು ಹೋಗುವಾಗ ಸಮಸ್ಯೆಗಳನ್ನು ಎದುರಿಸಿರಲಿಲ್ಲ. ಅಸ್ಸಾಂನಲ್ಲಿ ಎರಡು ದಿನಗಳಲ್ಲಿ ಎದುರಿಸಿದಷ್ಟು ಸಂಕಷ್ಟಗಳನ್ನು ಎಲ್ಲಿಯೂ ಎದುರಿಸಿರಲಿಲ್ಲ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಶುಕ್ರವಾರ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮ ಯಾಕೆ ಅಷ್ಟು ಹೆದರಿದ್ದಾರೆ ಎಂದು ಅಚ್ಚರಿ ವ್ಯಕ್ತಪಡಿಸಿದರು.

'ಮೊದಲ ಯಾತ್ರೆಯಲ್ಲಿ ಬಿಜೆಪಿ ಆಡಳಿತವಿರುವ ಕರ್ನಾಟಕ, ಮಧ್ಯ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಸಂಚರಿಸಲಾಗಿತ್ತು. ಕಾಂಗ್ರೆಸ್ ಈ ವೇಳೆ ಅಲ್ಲಿನ ಮುಖ್ಯಮಂತ್ರಿಗಳು ಮತ್ತು ಸರ್ಕಾರವನ್ನೂ ಟೀಕಿಸಿತ್ತು. ಆದರೂ ಯಾವುದೇ ಅಡ್ಡಿ ಎದುರಾಗಿರಲಿಲ್ಲ. ಇಲ್ಲಿನ ಮುಖ್ಯಮಂತ್ರಿ ಟೀಕೆಗೆ ದಿಗಿಲುಗೊಂಡಿದ್ದಾರೆ. ಎಫ್‌ಐಆರ್ ದಾಖಲಿಸುವ ಮತ್ತು ಜೈಲಿನ ಶಿಕ್ಷೆಯ ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿದರು.

ಅನುಮತಿ ಪಡೆಯದೆ ಯಾತ್ರೆಯು ಗುವಾಹಟಿ ತಲುಪಿದರೆ ಯಾತ್ರೆಯಲ್ಲಿ ಭಾಗವಹಿಸಿರುವ ಇಬ್ಬರು 'ದುಷ್ಟ ಶಕ್ತಿ'ಗಳ ವಿರುದ್ಧ ಲೋಕಸಭೆ ಚುನಾವಣೆ ಬಳಿಕ ಬಂಧನದಂತಹ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಬೆದರಿಕೆ ಹಾಕಿದ್ದಾರೆ. ಆದರೆ ಈ ಇಬ್ಬರು ಯಾರು ಎಂಬುದನ್ನು ಬಹಿರಂಗಪಡಿಸಿಲ್ಲ.

ಬೋರಾ ಆಕ್ರೋಶ: ಅಸ್ಸಾಂನಲ್ಲಿ ಯಾತ್ರೆ ಮಾರ್ಗ ಬದಲಿಸಿದ ಆರೋಪದ ಮೇಲೆ ಮುಖ್ಯ ಸಂಘಟಕ ಕೆ.ಬಿ ಬೈಜು ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಯಾತ್ರೆಯ ಮಾರ್ಗವನ್ನು ಅವರು ನಿರ್ಧರಿಸಿಲ್ಲ. ಆದರೂ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಜೋರ್‌ಹಾಟ್‌ನಲ್ಲಿ ಅನುಮತಿ ನೀಡಿದ ಮಾರ್ಗಗಳನ್ನು ಬಿಟ್ಟು ಬೇರೆ ಮಾರ್ಗಗಳಲ್ಲಿ ಯಾತ್ರೆ ತೆರಳಿದೆ ಎಂದು ಆರೋಪಿಸಲಾಗಿದೆ ಎಂದು ಅಸ್ಸಾಂ ಕಾಂಗ್ರೆಸ್ ಘಟಕದ ಅಧ್ಯಕ್ಷ ಭೂಪೇನ್ ಕುಮಾರ್ ಬೋರಾ ಹೇಳಿದರು.



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶುಕ್ರವಾರ ಅಸ್ಸಾಂನ ಮಾಜುಲಿಯಲ್ಲಿ ಭಾರತ ಜೋಡೊ ನ್ಯಾಯ ಯಾತ್ರೆ ಕೈಗೊಂಡ ವೇಳೆ ಅವರೊಂದಿಗೆ ಜಾನಪದ ಕಲಾವಿದರು ಫೋಟೊ ತೆಗೆಸಿಕೊಂಡರು ಪಿಟಿಐ ಚಿತ್ರ

'ಬುಡಕಟ್ಟು ಜನರಿಗೆ ಬಿಜೆಪಿ ವಂಚನೆ'

ಬುಡಕಟ್ಟು ಜನರು ಅರಣ್ಯಕ್ಕೆ ಸೀಮಿತರಾಗುವುದನ್ನು ಮತ್ತು ಅವರು ಶಿಕ್ಷಣ ಹಾಗೂ ಇತರ ಅವಕಾಶಗಳಿಂದ ವಂಚಿತರಾಗುವುದನ್ನು ಮಾತ್ರ ಬಿಜೆಪಿ ಬಯಸುತ್ತದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಆರೋಪಿಸಿದರು. ಅಸ್ಸಾಂನಲ್ಲಿ ಭಾರತ್ ಜೋಡೊ ನ್ಯಾಯ ಯಾತ್ರೆಯ ಎರಡನೇ ದಿನದಂದು ಬುಡಕಟ್ಟು ಜನರೇ ಹೆಚ್ಚಾಗಿರುವ ಇಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಬುಡಕಟ್ಟು ಜನರ ಮಕ್ಕಳು ಶಾಲೆಗೆ, ವಿಶ್ವವಿದ್ಯಾಲಯಕ್ಕೆ ಹೋಗುವ, ಇಂಗ್ಲಿಷ್ ಕಲಿಯುವ ಅವಕಾಶದಿಂದ ವಂಚಿತರನ್ನಾಗಿ ಮಾಡಲು ಬಿಜೆಪಿ ಬಯಸುತ್ತದೆ ಎಂದು ದೂರಿದರು.

'ನಿಮ್ಮದನ್ನು ನಿಮಗೆ ಮರಳಿಸಬೇಕೆಂದು ನಾವು ಹೇಳುತ್ತೇವೆ. ನಿಮ್ಮ ನೀರು, ಭೂಮಿ ಮತ್ತು ಅರಣ್ಯ ನಿಮ್ಮದು' ಎಂದು ಹೇಳಿದರು.

- ಯಾತ್ರೆ ಮಾರ್ಗ ಬದಲು ಆರೋಪ: ಮುಖ್ಯ ಸಂಘಟಕರ ವಿರುದ್ಧ ಪ್ರಕರಣ ದಾಖಲು
- ರಸ್ತೆಯನ್ನು ಯಾರೂ ಖಾಸಗಿ ಆಸ್ತಿಯಾಗಿ ಬಳಸಲು ಸಾಧ್ಯವಿಲ್ಲ: ಕಾಂಗ್ರೆಸ್

ಯಾತ್ರೆಯಲ್ಲಿ ಜನರು ಪಾಲ್ಗೊಳ್ಳುವುದನ್ನು ತಡೆಯಲಾಗುತ್ತಿದೆ. ರಾಜ್ಯದಲ್ಲಿ ಯಾತ್ರೆ ಪೂರ್ಣಗೊಳಿಸುವುದನ್ನು ತಡೆಯಲು ಯಾವುದೇ ಶಕ್ತಿಗೆ ಸಾಧ್ಯವಿಲ್ಲ

ಜೈ ರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಬಿಲ್ಕಿಸ್ ಪ್ರಕರಣ: ಅಪರಾಧಿಗಳ ಅರ್ಜಿ ವಜಾ

ಒಂದನೇ ಪುಟದಿಂದ...

ಅಲ್ಲದೆ, ಕ್ಷಮಾದಾನ ನೀಡುವಾಗ ಗುಜರಾತ್ ಸರ್ಕಾರವು ತನ್ನಲ್ಲಿ ಇಲ್ಲದ ಅಧಿಕಾರವನ್ನು ಬಳಕೆ ಮಾಡಿಕೊಂಡಿತ್ತು, ಅಪರಾಧಿಯೊಬ್ಬನ ಜೊತೆ ಶಾಮೀಲಾಗಿತ್ತು ಎಂದು ಕೂಡ ಕೋರ್ಟ್ ಹೇಳಿದೆ. ಅವಧಿಗೆ ಮೊದಲೇ ಬಿಡುಗಡೆ ಆಗಿದ್ದ ಅಪರಾಧಿಗಳು ಎರಡು ವಾರಗಳಲ್ಲಿ ಜೈಲಿಗೆ ವಾಪಸ್ಸಾಗಬೇಕು ಎಂದೂ ಸೂಚಿಸಿತ್ತು.

ಅರ್ಜಿದಾರರು ವಿವರಿಸಿರುವ ಕಾರಣಗಳು ಅವರಿಗೆ ಕೋರ್ಟ್‌ನ ಸೂಚನೆ ಪಾಲಿಸಲು ಅಡ್ಡಿಯಾಗುವುದಿಲ್ಲ ಎಂದು ಪೀಠವು ಹೇಳಿದೆ. ಅನಾರೋಗ್ಯ, ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಿರುವುದು, ಮಗನ ಮದುವೆ, ಬೆಳೆ ಕಟಾವು ಮುಂತಾದ ಕಾರಣಗಳನ್ನು ನೀಡಿದ್ದ ಅರ್ಜಿದಾರರು ಶರಣಾಗಲು ಹೆಚ್ಚು ಸಮಯ ಬೇಕು ಎಂದಿದ್ದರು.

ಗೋವಿಂದ ನಾಯ್, ಪ್ರದೀಪ್ ಮೊಧಿಯಾ, ಬಿಪಿನ್‌ಚಂದ್ರ ಜೋಷಿ, ರಮೇಶ್ ಚಂದನ ಮತ್ತು ಮಿತೇಶ್ ಭಟ್ ಅವರು ಹೆಚ್ಚಿನ ಸಮಯ ಕೇಳಿ ಅರ್ಜಿ ಸಲ್ಲಿಸಿದ್ದರು. ನಂತರ ಇತರ ಅಪರಾಧಿಗಳು ಕೂಡ ಇದೇ ಕೋರಿಕೆಯೊಂದಿಗೆ ಕೋರ್ಟ್ ಮೆಟ್ಟಿಲೇರಿದ್ದರು.

'ಸುಪ್ರೀಂ' ನ್ಯಾಯಮೂರ್ತಿಯಾಗಿ ವರಾಳೆ: ಕೊಲಿಜಿಯಂ ಶಿಫಾರಸು

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಾಲಚಂದ್ರ (ಪಿ.ಬಿ) ವರಾಳೆ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯನ್ನಾಗಿ ನೇಮಕ ಮಾಡಲು ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಶುಕ್ರವಾರ ಶಿಫಾರಸು ಮಾಡಿದೆ.



ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಅವರನ್ನು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲು ಕೊಲಿಜಿಯಂ ಶಿಫಾರಸು ಮಾಡಿದೆ. ನ್ಯಾಯಮೂರ್ತಿ ಕುಮಾರ್ ಅವರು ಫೆಬ್ರುವರಿ 24ರಂದು ನಿವೃತ್ತರಾಗಲಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಕೊಲಿಜಿಯಂ, 'ನ್ಯಾಯಮೂರ್ತಿ ವರಾಳೆ ಅವರು ಪರಿಶಿಷ್ಟ ಜಾತಿಗೆ ಸೇರಿದ ಅತ್ಯಂತ ಹಿರಿಯ ನ್ಯಾಯಮೂರ್ತಿ. ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ಪೈಕಿ ಪರಿಶಿಷ್ಟ ಜಾತಿಗೆ ಸೇರಿದ ಏಕೈಕ ನ್ಯಾಯಮೂರ್ತಿ' ಎಂಬ ಅಂಶವನ್ನು ಗಮನಿಸಿತು.

ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಅವರು 2023ರ ಡಿಸೆಂಬರ್ 25ರಂದು ನಿವೃತ್ತರಾದ ನಂತರ ಸುಪ್ರೀಂಕೋರ್ಟ್‌ನಲ್ಲಿ ನ್ಯಾಯಮೂರ್ತಿ ಹುದ್ದೆಯೊಂದು ಖಾಲಿ ಇದೆ.

ಬೆಳಗಾವಿ ಜಿಲ್ಲೆಯ ನಿಪ್ಪಾಣಿಯವರಾದ ನ್ಯಾಯಮೂರ್ತಿ ವರಾಳೆ 1985ರ ಆಗಸ್ಟ್‌ನಲ್ಲಿ ವಕೀಲಿಕೆ ಸನ್ನದು ಪಡೆದು, ಎಸ್. ಎನ್. ಲೋಯಾ ಅವರ ಕಚೇರಿಯಲ್ಲಿ ವೃತ್ತಿ ಆರಂಭಿಸಿದ್ದರು. 1992ರವರೆಗೆ ಔರಂಗಾಬಾದ್ ಅಂಬೇಡ್ಕರ್ ಕಾನೂನು ಕಾಲೇಜಿನಲ್ಲಿ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದ್ದರು. ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿಯಾಗಿ 2008ರ ಜುಲೈ 18ರಂದು ನೇಮಕಗೊಂಡಿದ್ದರು. ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ 2022ರ ಅಕ್ಟೋಬರ್ 12ರಂದು ನೇಮಿಸಲಾಗಿತ್ತು.

ಬೋಯಿಂಗ್ ಕೇಂದ್ರಕ್ಕೆ ಚಾಲನೆ

ಒಂದನೇ ಪುಟದಿಂದ...

ಮುಂಬರುವ ದಿನಗಳಲ್ಲಿ ಮಹಿಳೆಯರು ನಾಗರಿಕ ಮತ್ತು ಯುದ್ಧ ವಿಮಾನಗಳ ಕ್ಷೇತ್ರವನ್ನು ಮುನ್ನಡೆಸಲಿದ್ದು, ಹೆಚ್ಚಿನ ಸಂಖ್ಯೆಯ ಪೈಲಟ್‌ಗಳು ಮಹಿಳೆಯರೇ ಆಗಲಿದ್ದಾರೆ. ಈಗ ದೇಶದ ಒಟ್ಟು ಪೈಲಟ್‌ಗಳಲ್ಲಿ ಶೇ 15ರಷ್ಟು ಮಹಿಳೆಯರಿದ್ದಾರೆ. ಜಾಗತಿಕ ಸರಾಸರಿ ನೋಡಿದರೆ ಭಾರತದಲ್ಲಿ ಮೂರು ಪಟ್ಟು ಹೆಚ್ಚು ಮಹಿಳಾ ಪೈಲಟ್‌ಗಳಿದ್ದಾರೆ. ಮಹಿಳೆಯರ ನೇತೃತ್ವದಲ್ಲಿ ಅಭಿವೃದ್ಧಿ ಸಾಧಿಸುವ ಸಮಯ ಬಂದಿದೆ ಎಂದು ಮೋದಿ ಹೇಳಿದರು.

ದೇಶಿ ವೈಮಾನಿಕ ಮಾರುಕಟ್ಟೆ ಕ್ಷೇತ್ರದಲ್ಲಿ ಭಾರತ ವಿಶ್ವದಲ್ಲೇ ಮೂರನೇ ಅತಿ ದೊಡ್ಡ ಮಾರುಕಟ್ಟೆ. ಕಳೆದ ಒಂದು ದಶಕದಲ್ಲಿ ವಿಮಾನದಲ್ಲಿ ಪ್ರಯಾಣಿಸುವವರ ಸಂಖ್ಯೆ ದುಪ್ಪಟ್ಟಾಗಿದೆ. ದೇಶದಲ್ಲಿ 2014ರಲ್ಲಿ 70 ವಿಮಾನ ನಿಲ್ದಾಣಗಳು ಕಾರ್ಯ ನಿರ್ವಹಿಸುತ್ತಿದ್ದವು. ಈಗ 150 ವಿಮಾನ ನಿಲ್ದಾಣಗಳು ಕಾರ್ಯ ನಿರ್ವಹಿಸುತ್ತಿವೆ. ವಿಮಾನ ನಿಲ್ದಾಣಗಳ ಸಂಖ್ಯೆ ಹೆಚ್ಚಾಗಿರುವುದು ಮಾತ್ರವಲ್ಲ, ಅವುಗಳ ಕಾರ್ಯಕ್ಷಮತೆಯೂ ಹೆಚ್ಚಾಗಿದೆ ಎಂದೂ ವಿವರಿಸಿದರು.

ಬೆಂಗಳೂರು ಆಕಾಂಕ್ಷೆ, ಆವಿಷ್ಕಾರಗಳ ನಗರ: ಬೆಂಗಳೂರು ಆಕಾಂಕ್ಷೆ, ಆವಿಷ್ಕಾರ ಮತ್ತು ಸಾಧನೆಯ ಜತೆಗೆ ನಿಕಟ ಸಂಬಂಧ ಹೊಂದಿರುವ ನಗರವಾಗಿದ್ದು, ಜಾಗತಿಕ ಬೇಡಿಕೆಗೆ ಅನುಗುಣವಾಗಿ ಭಾರತದ ತಂತ್ರಜ್ಞಾನ ಸಾಮರ್ಥ್ಯವನ್ನು ಪೂರೈಸುವ ನಗರವೂ ಆಗಿದೆ. ಬೋಯಿಂಗ್‌ನ ಹೊಸ ತಂತ್ರಜ್ಞಾನ ಕ್ಯಾಂಪಸ್ ಈ ನಂಬಿಕೆಯನ್ನು ಬಲಪಡಿಸಲಿದೆ. ಈ ಕ್ಯಾಂಪಸ್, ಅಮೆರಿಕದಲ್ಲಿರುವುದು ಬಿಟ್ಟರೆ ಅತಿ ದೊಡ್ಡ ಕ್ಯಾಂಪಸ್ ಆಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಾಗತಿಕ ತಂತ್ರಜ್ಞಾನ, ಸಂಶೋಧನೆ ಮತ್ತು ಆವಿಷ್ಕಾರಗಳ ಭಾರತದ ಬದ್ಧತೆಗೆ ಇಲ್ಲಿನ ಬೋಯಿಂಗ್ ಕೇಂದ್ರವೇ ನಿದರ್ಶನ. ಇದರಿಂದಾಗಿ 'ಮೇಕ್ ಇನ್ ಇಂಡಿಯಾ– ಮೇಕ್ ಫಾರ್ ವರ್ಲ್ಡ್' ಎನ್ನುವ ನಮ್ಮ ಸಂಕಲ್ಪವನ್ನು ಬಲಪಡಿಸಿದೆ. ಕೆಂಪುಕೋಟೆಯ ಮೇಲಿನಿಂದ ಭಾಷಣ ಮಾಡುವ ಸಂದರ್ಭದಲ್ಲಿ 'ಯಹೀ ಸಮಯ್ ಹೈ ಸಹೀ ಸಮಯ್ ಹೈ' ಎಂದು ಹೇಳಿದ್ದೆ. ಬೋಯಿಂಗ್ ಮತ್ತು ಇತರ ಅಂತರರಾಷ್ಟ್ರೀಯ ಕಂಪನಿಗಳೂ ಭಾರತದ ತ್ವರಿತಗತಿಯ ಅಭಿವೃದ್ಧಿಯ ಜತೆಗೆ ಬೆಳವಣಿಗೆ ಹೊಂದಬಹುದು ಎಂದು ಸಲಹೆ ನೀಡಿದರು.

ಈ ಹಂತದಲ್ಲಿ ಸಭಿಕರು 'ಮೋದಿ.. ಮೋದಿ' ಎಂದು ಘೋಷಣೆ ಕೂಗಿದಾಗ ಮೋದಿ ಅವರು ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ, 'ಇವೆಲ್ಲ ಇರುತ್ತದೆ' ಎಂದು ನಕ್ಕು ನುಡಿದರು.

ಕಳೆದ 9 ವರ್ಷಗಳಲ್ಲಿ 25 ಕೋಟಿ ಭಾರತೀಯರನ್ನು ಬಡತನದಿಂದ ಹೊರತಂದಿದ್ದೇವೆ. ಈ ಕೋಟ್ಯಂತರ ಸಮುದಾಯ ನವಮಧ್ಯಮ ವರ್ಗವಾಗಿ ರೂಪುಗೊಂಡಿದೆ. ದೇಶದ ಎಲ್ಲ ಆದಾಯಗಳ ಗುಂಪಿನಲ್ಲೂ ಮೇಲ್ಮುಖ ಚಲನಶೀಲತೆಯ ತುಡಿತವಿದೆ. ದೇಶದ ಪ್ರವಾಸೋದ್ಯಮದಲ್ಲೂ ಸಾಕಷ್ಟು ಸಾಮರ್ಥ್ಯವಿದ್ದು, ಅದನ್ನೂ ದೊಡ್ಡ ಮಟ್ಟದಲ್ಲಿ ಬೆಳೆಸಲು ಶ್ರಮಿಸಲಾಗುವುದು ಎಂದು ಮೋದಿ ಹೇಳಿದರು.

ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ ಆರ್.ಅಶೋಕ ಇದ್ದರು.

ಮಹಿಳಾ ಪೈಲಟ್ ತರಬೇತಿಗೆ 'ಸುಕನ್ಯಾ'

ಮಹಿಳೆಯರಿಗೆ ಪೈಲಟ್ ಸೇರಿ ವೈಮಾನಿಕ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ರೀತಿಯ ತರಬೇತಿ ನೀಡುವ 'ಬೋಯಿಂಗ್ ಸುಕನ್ಯಾ' ಕಾರ್ಯಕ್ರಮಕ್ಕೂ ಪ್ರಧಾನಿ ಮೋದಿ ಇದೇ ವೇಳೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬೋಯಿಂಗ್ ಕಂಪನಿಯ ಸಿಒಒ ಸ್ಟೆಫೇನ್ ಪೋಪ್, 'ಪ್ರಧಾನಿ ನರೇಂದ್ರ ಮೋದಿಯವರ ಸಲಹೆಯ ಮೇರೆಗೆ ಬೋಯಿಂಗ್ ಸುಕನ್ಯಾ ಕಾರ್ಯಕ್ರಮವನ್ನೂ ಆರಂಭಿಸಿದ್ದೇವೆ. ಮಹಿಳೆಯರಿಗೆ ಪೈಲಟ್ ಸೇರಿ ವೈಮಾನಿಕ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ರೀತಿಯ ತರಬೇತಿಗಳನ್ನೂ ನೀಡುತ್ತೇವೆ' ಎಂದರು.

'ದೇಶದ 150 ಶಾಲೆಗಳಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತದ ಪ್ರಯೋಗಾಲಯಗಳನ್ನು(ಎಸ್‌ಟಿಇಎಂ) ಆರಂಭಿಸಲಿದ್ದೇವೆ. ಈ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ವೈಮಾನಿಕ ಕ್ಷೇತ್ರದಲ್ಲಿ ಭವಿಷ್ಯ ಕಂಡುಕೊಳ್ಳಲು ವ್ಯವಸ್ಥೆ ಮಾಡಿದ್ದೇವೆ' ಎಂದು ಸ್ಟೆಫೇನ್ ಪೋಪ್ ಹೇಳಿದರು.

ಪ್ರತಿಭಾವಂತರಿಗೆ ಅವಕಾಶ: ಸಿ.ಎಂ

ಕರ್ನಾಟಕ ರಾಜ್ಯವು ದೇಶದ ವೈಮಾನಿಕ ವಲಯದಲ್ಲಿ ಪ್ರಾಬಲ್ಯ ಸಾಧಿಸಿದ್ದು, ವೈಮಾನಿಕ ಮತ್ತು ರಕ್ಷಣಾ ಕ್ಷೇತ್ರದ ರಫ್ತಿನಲ್ಲಿ ಶೇ 65ರಷ್ಟು ಪಾಲನ್ನು ಹೊಂದಿದೆ. ಬೋಯಿಂಗ್‌ನ ಹೊಸ ಉಪಕ್ರಮದಿಂದ ಸ್ಥಳೀಯ ಪ್ರತಿಭಾವಂತರಿಗೆ ಜಾಗತಿಕ ಮಟ್ಟದ ಯೋಜನೆಗಳಲ್ಲಿ ಕಾರ್ಯನಿರ್ವಹಿಸಲು ಅವಕಾಶ ದೊರೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಎಲ್ಲರ ಒಳಗೊಳ್ಳುವಿಕೆ ಮತ್ತು ಎಲ್ಲರಿಗೂ ತಂತ್ರಜ್ಞಾನದ ಲಾಭ ದೊರಕುವಂತಾಗಬೇಕು ಎನ್ನುವುದು ನಮ್ಮ ಆಶಯವಾಗಿದೆ. ಈ ನಿಟ್ಟಿನಲ್ಲಿ ನಮ್ಮ ರಾಜ್ಯದ ಹೆಣ್ಣುಮಕ್ಕಳು ಹಾಗೂ ಮಹಿಳೆಯರ ಸಬಲೀಕರಣಕ್ಕೆ ನಮ್ಮ ಸರ್ಕಾರ ಆದ್ಯತೆ ನೀಡಿದೆ' ಎಂದರು. 'ಮಹಿಳೆಯರಿಗೆ ಆದ್ಯತೆ ನೀಡುವ ಬೋಯಿಂಗ್ ಸುಕನ್ಯಾ ಕಾರ್ಯಕ್ರಮ ಸಂತೋಷ ನೀಡಿದೆ. ಇದು ಬೋಯಿಂಗ್ ಸಂಸ್ಥೆಗೆ ಮಾತ್ರವಲ್ಲ, ನಮ್ಮ ನಾಡಿಗೂ ಹೆಮ್ಮೆಯ ವಿಷಯವಾಗಿದೆ' ಎಂದರು.

6,097 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಸಾಧ್ಯತೆ

ಒಂದನೇ ಪುಟದಿಂದ...

ಈಗ ಒಟ್ಟು 165 ಗ್ರಾಮಗಳಲ್ಲಿ ನೀರಿನ ಕೊರತೆ ಇದೆ. 36 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ. 139 ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆದು ನೀರು ಪೂರೈಸಲಾಗುತ್ತಿದೆ. 6,052 ಗ್ರಾಮಗಳಲ್ಲಿ ಬಾಡಿಗೆಗೆ ಪಡೆಯುವುದಕ್ಕೆ ಖಾಸಗಿ ಕೊಳವೆ ಬಾವಿಗಳನ್ನು ಗುರುತಿಸಲಾಗಿದೆ. 2,404 ಕೊಳವೆ ಬಾವಿಗಳ ಮಾಲೀಕರ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ವಿವರ ನೀಡಿದರು.

ತುಂಗ ಭದ್ರಾ ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆ ಇದೆ. ನೀರು ಹರಿಸುವ ವೇಳೆ ಹೆಚ್ಚು ಎಚ್ಚರಿಕೆ ವಹಿಸುವಂತೆ ಜಲ ಸಂಪನ್ಮೂಲ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಪರಿಹಾರ ವಿತರಣೆಗೆ ಚಾಲನೆ: ರೈತರ ಜಮೀನುಗಳ ವಿಸ್ತೀರ್ಣದ ಮಾಹಿತಿಯನ್ನು 'ರೈತರ ನೋಂದಣಿ ಮತ್ತು ಏಕೀಕೃತ ಫಲಾನುಭವಿಗಳ ಮಾಹಿತಿ ವ್ಯವಸ್ಥೆ'ಯಲ್ಲಿ (ಫ್ರೂಟ್ಸ್) ದಾಖಲಿಸುವ ಪ್ರಕ್ರಿಯೆ ಶೇಕಡ 75ರಷ್ಟು ಪೂರ್ಣಗೊಂಡಿದೆ. 30 ಲಕ್ಷ ರೈತರಿಗೆ ಮೊದಲ ಹಂತದ ಬರ ಪರಿಹಾರ ವಿತರಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ವಾರದೊಳಗೆ ಅವರ ಖಾತೆಗೆ ಹಣ ತಲುಪಲಿದೆ ಎಂದು ಕೃಷ್ಣ ಬೈರೇಗೌಡ ಹೇಳಿದರು.

ಅಭಿಯಾನದ ಅವಧಿಯಲ್ಲಿ 7.7 ಲಕ್ಷ ರೈತರ 30 ಲಕ್ಷ ಜಮೀನುಗಳ ವಿಸ್ತೀರ್ಣದ ವಿವರವನ್ನು ಫ್ರೂಟ್ಸ್‌ನಲ್ಲಿ ದಾಖಲಿಸಲಾಗಿದೆ. ಅರ್ಹ ರೈತರ ವಿವರ ಮತ್ತು ಜಮೀನುಗಳ ವಿಸ್ತೀರ್ಣದ ಮಾಹಿತಿ ದಾಖಲಿಸಲು ಇನ್ನೂ ಅವಕಾಶವಿದೆ ಎಂದರು.

'ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ಅತಿವೃಷ್ಟಿಯಿಂದ ಸಂಭವಿಸಿದ್ದ ಬೆಳೆ ಹಾನಿಗೆ ಪರಿಹಾರ ನೀಡುವಾಗ ಭಾರಿ ಅಕ್ರಮ ನಡೆದಿತ್ತು. ಕಡೂರು ತಾಲ್ಲೂಕಿನಲ್ಲಿ ₹6 ಕೋಟಿ ಅಕ್ರಮವಾಗಿ ಪಾವತಿಯಾಗಿದೆ. ಹಾನಗಲ್, ಶಿಗ್ಗಾಂವಿ ತಾಲ್ಲೂಕಿನಲ್ಲೂ ಅವ್ಯವಹಾರ ನಡೆದಿದೆ. ಈ ಕುರಿತ ಪ್ರಾಥಮಿಕ ತನಿಖಾ ವರದಿಗಳು ಇಲಾಖೆಯ ಬಳಿ ಇದ್ದು, ಸೂಕ್ತ ಕ್ರಮ ಜರುಗಿಸಲಾಗುವುದು' ಎಂದು ತಿಳಿಸಿದರು.

ಬಾಕಿ ಪ್ರಕರಣಗಳ ಸಂಖ್ಯೆ ಇಳಿಕೆ

ತಹಶೀಲ್ದಾರ್ ಮತ್ತು ಉಪ ವಿಭಾಗಾಧಿಕಾರಿಗಳ ಕಂದಾಯ ನ್ಯಾಯಾಲಯಗಳಲ್ಲಿ ಬಾಕಿ ಪ್ರಕರಣಗಳ ತ್ವರಿತ ವಿಲೇವಾರಿ ಅಭಿಯಾನ ಯಶಸ್ವಿಯಾಗಿದೆ. ಈಗ ಬಾಕಿ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಇಳಿಕೆಯಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಮೂರು ತಿಂಗಳ ಹಿಂದೆ ಅಭಿಯಾನ ಆರಂಭಿಸಲಾಗಿತ್ತು. ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಬಾಕಿ ಪ್ರಕರಣಗಳ ಸಂಖ್ಯೆ 2,215ರಿಂದ 170ಕ್ಕೆ ಇಳಿಕೆಯಾಗಿದೆ. ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಅಂತಹ ಪ್ರಕರಣಗಳ ಸಂಖ್ಯೆ 59,800ರಿಂದ 26,800ಕ್ಕೆ ತಗ್ಗಿದೆ ಎಂದರು.

ದಲ್ಜೀತ್ ಸಿಂಗ್ ಎಸ್‌ಎಸ್‌ಬಿ ಮುಖ್ಯಸ್ಥ

ನವದೆಹಲಿ (ಪಿಟಿಐ): ಹಿರಿಯ ಐಪಿಎಸ್ ಅಧಿಕಾರಿ ದಲ್ಜೀತ್ ಸಿಂಗ್ ಚೌಧರಿ ಅವರನ್ನು ಸಶಸ್ತ್ರ ಸೀಮಾ ಬಲದ (ಎಸ್‌ಎಸ್‌ಬಿ) ಮಹಾನಿರ್ದೇಶಕರನ್ನಾಗಿ ಶುಕ್ರವಾರ ನೇಮಕ ಮಾಡಲಾಗಿದೆ. ದಲ್ಜೀತ್ ಅವರು ಉತ್ತರ ಪ್ರದೇಶ ಕೇಡರ್‌ನ 1990 ಬ್ಯಾಚ್‌ನ ಅಧಿಕಾರಿಯಾಗಿದ್ದಾರೆ.

ಫೆ.1ರಿಂದ ಇ–ಆಫೀಸ್ ಬಳಕೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಇಲಾಖೆಯ ಎಲ್ಲ ಹಂತದ ಕಚೇರಿಗಳಲ್ಲಿ ಫೆಬ್ರುವರಿ 1ರಿಂದ ಇ–ಆಫೀಸ್ ತಂತ್ರಾಂಶದ ಮೂಲಕವೇ ಕಡತ ವಿಲೇವಾರಿ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭೌತಿಕ ಕಡತಗಳ ನಿರ್ವಹಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗುವುದು. ಟಪಾಲುಗಳ ಸ್ವೀಕಾರ ಮತ್ತು ಮುಂದಿನ ಪ್ರಕ್ರಿಯೆಯೂ ಇ–ಆಫೀಸ್ ಮೂಲಕವೇ ನಡೆಯಲಿದೆ' ಎಂದರು.

ಇ–ಆಫೀಸ್ ತಂತ್ರಾಂಶ ಬಳಕೆ ಮಾಡದೇ, ಭೌತಿಕ ಕಡತಗಳನ್ನು ತೆರೆಯುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಇ–ಆಫೀಸ್ ತಂತ್ರಾಂಶ ಬಳಕೆ ಕುರಿತು ನಿಯಮಿತವಾಗಿ ವರದಿ ಸಲ್ಲಿಸುವಂತೆ ಹಿರಿಯ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಭೌತಿಕ ಕಡತ ನಿರ್ವಹಣೆ ಮಾಡಿದವರಿಗೆ ನೋಟಿಸ್ ಜಾರಿಗೊಳಿಸಲಾಗುವುದು ಎಂದು ತಿಳಿಸಿದರು.

ತಾಲ್ಲೂಕು ಕಚೇರಿಗಳ ಆಧುನೀಕರಣ ಯೋಜನೆಯನ್ನೂ ಕೈಗೆತ್ತಿಕೊಳ್ಳಲಾಗುವುದು. ಮೊದಲ ಹಂತದಲ್ಲಿ ಎಲ್ಲ ಹಳೆಯ ಕಡತಗಳ ಸ್ಕ್ಯಾನಿಂಗ್ ಮತ್ತು ಡಿಜಿಟಲೀಕರಣ ಮಾಡಲಾಗುವುದು. ಇಲಾಖೆಯ ಪೋರ್ಟಲ್‌ನಿಂದ ಆ ದಾಖಲೆಗಳನ್ನು ಸಾರ್ವಜನಿಕರು ನೇರವಾಗಿ ಪಡೆಯಲು ಅವಕಾಶ ಕಲ್ಪಿಸಲಾಗುವುದು ಎಂದರು.

ಮೊದಲ ಹಂತದಲ್ಲಿ 31 ತಾಲ್ಲೂಕು ಕಚೇರಿಗಳ ಆಧುನೀಕರಣ ಆರಂಭವಾಗಲಿದೆ. ಮಾರ್ಚ್ ತಿಂಗಳ ಅಂತ್ಯದೊಳಗೆ ನಾಲ್ಕು ತಾಲ್ಲೂಕು ಕಚೇರಿಗಳಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಬರಲಿದೆ ಎಂದು ಹೇಳಿದರು.

114 ವಿಧಾನಸಭಾ ಕ್ಷೇತ್ರಗಳಲ್ಲಿ ಬಗರ್ ಹುಕುಂ ಯೋಜನೆಯಡಿ ಭೂ ಮಂಜೂರಾತಿ ಸಮಿತಿಗಳನ್ನು ನೇಮಿಸಲಾಗಿದೆ. ಬಾಕಿ ಇರುವ ಅರ್ಜಿಗಳ ವಿಲೇವಾರಿಗೆ ಎಂಟು ತಿಂಗಳ ಗಡುವು ವಿಧಿಸಲಾಗಿದೆ ಎಂದರು.

ಆಂಧ್ರ: ಜಾತಿಗಣತಿಗೆ ಚಾಲನೆ

ಅಮರಾವತಿ (ಪಿಟಿಐ): ಆಂಧ್ರ ಪ್ರದೇಶ ಸರ್ಕಾರವು ರಾಜ್ಯದಲ್ಲಿ ಸಮಗ್ರ ಜಾತಿ ಗಣತಿ ಕಾರ್ಯಕ್ಕೆ ಶುಕ್ರವಾರ ಚಾಲನೆ ನೀಡಿದೆ. 10 ದಿನಗಳ ಕಾಲ ಈ ಗಣತಿ ಕಾರ್ಯ ನಡೆಯಲಿದೆ ಎಂದು ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಸಿ. ಶ್ರೀನಿವಾಸ ವೇಣುಗೋಪಾಲ ಕೃಷ್ಣ ತಿಳಿಸಿದ್ದಾರೆ.

ದೇಶದಲ್ಲಿ ಬಿಹಾರದ ಬಳಿಕ ಜಾತಿ ಗಣತಿ ನಡೆಸುತ್ತಿರುವ ಎರಡನೇ ರಾಜ್ಯವಾಗಿ ಆಂಧ್ರ ಪ್ರದೇಶ ಆಗಿದೆ. ಅಗತ್ಯವಿದ್ದರೆ ಗಣತಿ ಕಾರ್ಯವನ್ನು ಇನ್ನೂ ನಾಲ್ಕರಿಂದ ಐದು ದಿನಗಳವರೆಗೆ ವಿಸ್ತರಿಸಲಾಗುವುದು ಎಂದು ಸಚಿವ ಕೃಷ್ಣ ಹೇಳಿದ್ದಾರೆ.

ಪ್ರತಿ ಮನೆಗಳಿಗೆ ಸ್ವಯಂ ಸೇವಕರು ಭೇಟಿ ನೀಡಿ ಜನರಿಂದ ಜಾತಿ ವಿವರಗಳನ್ನು ಸಂಗ್ರಹಿಸಿ, ಕ್ರೋಡೀಕರಣ ಮಾಡುವರು. ಸ್ವಯಂ ಸೇವಕರು ಸಂಗ್ರಹಿಸಿದ ಮಾಹಿತಿಯ ನಿಖರತೆಯನ್ನು ಸಚಿವಾಲಯದ ಅಧಿಕಾರಿಗಳು ಪರಿಶೀಲಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಪ್ರತಿ ಸ್ವಯಂ ಸೇವಕರಿಗೆ 50 ಮನೆಗಳಿಗೆ ಭೇಟಿ ನೀಡಿ, ನಿವಾಸಿಗಳ ಜಾತಿ ವಿವರಗಳನ್ನು ಸಂಗ್ರಹಿಸುವ ಜವಾಬ್ದಾರಿ ನೀಡಲಾಗಿದೆ. ಫೆಬ್ರುವರಿ 15 ಅಥವಾ ಲೋಕಸಭಾ ಚುನಾವಣೆಯ ಅಧಿಸೂಚನೆ ಪ್ರಕಟಣೆಗೂ ಮುನ್ನ ಜಾತಿಗಣತಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನೀವು ಹೆಚ್ಚು ತಿಳಿದುಕೊಳ್ಳುತ್ತಾ ಹೋದಂತೆ, ಗೊತ್ತಿಲ್ಲದಿರುವುದು ಬಹಳಷ್ಟಿದೆ ಎಂಬುದು ನಿಮ್ಮ ಅರಿವಿಗೆ ಬರುತ್ತದೆ.

–ಅರಿಸ್ಟಾಟಲ್

ಸಾಂಸ್ಕೃತಿಕ ನಾಯಕನಾಗಿ ಬಸವೇಶ್ವರ ಘೋಷಣೆಯ ಆಶಯ ಕೃತಿರೂಪಕ್ಕೂ ಬರಲಿ

ಹನ್ನೆರಡನೇ ಶತಮಾನದ ಬಸವೇಶ್ವರರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ರಾಜ್ಯ ಸರ್ಕಾರ ಘೋಷಿಸಿರುವುದು, ಭಾರತದ ಇತಿಹಾಸದಲ್ಲಿ ಅನ್ಯಾದೃಶವಾದ ವಚನ ಪರಂಪರೆಯ ಶ್ರೇಷ್ಠ ಪ್ರತಿನಿಧಿಗೆ ನೀಡಿರುವ ಅಪೂರ್ವ ಗೌರವ. ಬಸವಣ್ಣನವರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ಘೋಷಿಸುವಂತೆ ನಾಡಿನ ವಿವಿಧ ಮಠಾಧೀಶರು ಹಾಗೂ ಚಿಂತಕರು ಮಾಡಿದ್ದ ಒತ್ತಾಯಗಳಿಗೆ ಸ್ಪಂದಿಸಿ ಸರ್ಕಾರ ಈ ತೀರ್ಮಾನ ಕೈಗೊಂಡಿದೆ. ಬಸವಣ್ಣನವರ ನೇತೃತ್ವದಲ್ಲಿ ನಡೆದ ಜಾತಿಭೇದ ಹಾಗೂ ಲಿಂಗ ಭೇದಗಳಿಲ್ಲದ ಸಮಾಜವನ್ನು ರೂಪಿಸುವ ಕೆಲಸ ಹನ್ನೆರಡನೇ ಶತಮಾನಕ್ಕೆ ಮಾತ್ರವಲ್ಲದೆ ಇಂದಿಗೂ ಪ್ರಸ್ತುತ. ಭಾರತದ ಸಂವಿಧಾನ ಪ್ರತಿಪಾದಿಸುವ ಆಶಯಗಳು 'ಬಸವ ಪಥ'ದಲ್ಲೂ ಇದ್ದು, ಅವುಗಳ ಅನುಸರಣೆ ಇಂದಿನ ಬಹುತೇಕ ಸಾಮಾಜಿಕ ಸಮಸ್ಯೆಗಳಿಗೆ ಉತ್ತರವಾಗಿದೆ. ಕನ್ನಡದ ಮಣ್ಣಿಗೆ ಅಥವಾ ಒಂದು ವರ್ಗಕ್ಕೆ ಸೀಮಿತವಾದ ವ್ಯಕ್ತಿತ್ವ ಬಸವೇಶ್ವರರದಲ್ಲ. ಕನ್ನಡದ ಮಣ್ಣಿನಿಂದ ರೂಪುಗೊಂಡು ತನ್ನ ನಡೆ–ನುಡಿಯಿಂದ ವಿಶ್ವಕ್ಕೇ ಮಾದರಿಯಾದ ಚೇತನವನ್ನು ನಾಡಿನ ಸಾಂಸ್ಕೃತಿಕ ವ್ಯಕ್ತಿಯನ್ನಾಗಿ ಘೋಷಿಸಿರುವುದು ನಾಡಿನ ಸಾಕ್ಷಿಪ್ರಜ್ಞೆಯ ರೂಪಕವಾಗಿಸುವ ನಿಟ್ಟಿನಿಂದಲೂ ಮಹತ್ವದ ನಡೆಯಾಗಿದೆ. ಲೋಕಸಭಾ ಚುನಾವಣೆ ಸನ್ನಿಹಿತವಾಗುತ್ತಿರುವ ಸಂದರ್ಭದಲ್ಲಿ ಸಮುದಾಯ ಓಲೈಕೆಯ ರೂಪದಲ್ಲಿಯೂ ಬಸವಣ್ಣನವರಿಗೆ ಸಂದಿರುವ ಗೌರವವನ್ನು ನೋಡಲಿಕ್ಕೆ ಸಾಧ್ಯವಿದೆ. ಘೋಷಣೆಯ ಹಿಂದಿನ ಉದ್ದೇಶ ಯಾವುದೇ ಇದ್ದರೂ, ಪರಿಣಾಮದ ದೃಷ್ಟಿಯಿಂದ ಅದು ಮಹತ್ವದ್ದಾಗಿದೆ. ಬಸವಣ್ಣನವರ ಹೆಸರನ್ನು ವ್ಯಕ್ತಿಸೂಚಕವಾಗಿ ಅಥವಾ ಜಾತಿಸೂಚಕವಾಗಿ ನೋಡದೆ, ಕನ್ನಡ ಸಂಸ್ಕೃತಿ ಪ್ರತಿಪಾದಿಸಿದ ಮೌಲ್ಯಗಳ ರೂಪಕವಾಗಿ ನೋಡುವುದರಿಂದ ನಾಡಿಗೆ ಹೆಚ್ಚಿನ ಅನುಕೂಲವಿದೆ. 'ಅನ್ನಭಾಗ್ಯ' ಸೇರಿದಂತೆ ಐದು ಗ್ಯಾರಂಟಿಗಳ ಮೂಲಕ ಸರ್ವೋದಯದ ಪರಿಕಲ್ಪನೆಯನ್ನು ಕಾರ್ಯರೂಪಕ್ಕೆ ತರಲು ಹೊರಟಿರುವ ರಾಜ್ಯ ಸರ್ಕಾರದ ಪ್ರಯತ್ನಕ್ಕೆ ಬಸವಣ್ಣನವರ ದಾಸೋಹದ ಪರಿಕಲ್ಪನೆ ಪೂರಕವಾಗಿದೆ. ಬಸವಣ್ಣನವರ ಕರ್ತೃತ್ವ ಶಕ್ತಿಯಿಂದ ರೂಪುಗೊಂಡ ವಚನಕಾರರ 'ಅನುಭವ ಮಂಟಪ' ಇಂದಿನ ಪ್ರಜಾಪ್ರಭುತ್ವದ ಅಡಿಗಲ್ಲೇ ಆಗಿದೆ. ನಾಡಿನ ಸಾಂಸ್ಕೃತಿಕ–ಸಾಹಿತ್ಯಕ ಪರಂಪರೆ ವಿಶ್ವಕ್ಕೆ ಕೊಡುಗೆ ನೀಡಿರುವ 'ವಿಶ್ವಮಾನವ ಪರಂಪರೆ'ಯ ಬಹು ಮುಖ್ಯವಾದ ಕೊಂಡಿ ಎನ್ನುವ ಕಾರಣದಿಂದಾಗಿಯೂ ಕರ್ನಾಟಕದ ಸಾಂಸ್ಕೃತಿಕ ನಾಯಕನ ರೂಪದಲ್ಲಿ ಬಸವೇಶ್ವರರನ್ನು ಗುರುತಿಸಿರುವ ಕ್ರಮ ಸರಿಯಾದುದಾಗಿದೆ. ಬಸವಣ್ಣನವರಿಗೆ ಸಂದಿರುವ ಈ ಗೌರವವನ್ನು ಕವಿರಾಜಮಾರ್ಗಕಾರ, ಪಂಪ, ಕುಮಾರವ್ಯಾಸ, ಕುವೆಂಪು, ರಾಜ್‌ಕುಮಾರ್ ಅವರಂತಹ ಸಾಧಕರ ಸಾಂಸ್ಕೃತಿಕ ಪರಂಪರೆಗೆ ಸಂದಿರುವ ಮನ್ನಣೆಯೆಂದು ಭಾವಿಸಬೇಕಾಗಿದೆ.



ಬಸವತತ್ವದ ಬೀಜಗಳು ಜನಸಾಮಾನ್ಯರಿಗಿಂತಲೂ ಮೊದಲು ಪ್ರಜಾಪ್ರತಿನಿಧಿಗಳ ಎದೆಗೆ ಬೀಳಬೇಕಾಗಿದೆ

ಬಸವೇಶ್ವರರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸುವ ಮೂಲಕ ಜನಹಿತದ ಕುರಿತ ರಾಜ್ಯ ಸರ್ಕಾರದ ಉತ್ತರದಾಯಿತ್ವ ಮತ್ತಷ್ಟು ಹೆಚ್ಚಾಗಿದೆ. ಹಲವು ಬಗೆಯ ವಿಷಮ ಸನ್ನಿವೇಶಗಳನ್ನು ನಾಡು ಎದುರಿಸುತ್ತಿರುವ ಸಂದರ್ಭ ಇಂದಿನದು. ಧರ್ಮ ಮತ್ತು ರಾಜಕಾರಣದ ನಡುವಣ ಗೆರೆ ತೆಳುವಾಗುತ್ತಾ ಹೋದಂತೆ, ನಾಡಿನ ಬಹುತ್ವ ಪರಂಪರೆಯ ವರ್ಚಸ್ಸು ಮಸುಕಾಗುತ್ತಿದೆ. ಸಂವಿಧಾನವನ್ನು ನಿರ್ಲಕ್ಷಿಸಿ ಧರ್ಮಕ್ಕೆ ತಮ್ಮ ಬದ್ಧತೆ ಮತ್ತು ಆದ್ಯತೆಯನ್ನು ವ್ಯಕ್ತಪಡಿಸಲು ಹಿಂಜರಿಯದಿರುವ ಪ್ರಜಾಪ್ರತಿನಿಧಿಗಳ ಉದಾಹರಣೆಗಳೂ ಬಹಳಷ್ಟಿವೆ. ಪರ ಧರ್ಮ ಮತ್ತು ಪರ ವಿಚಾರಗಳನ್ನು ಸೈರಣೆಯಿಂದ ನೋಡುವುದೇ ನಿಜವಾದ ಧರ್ಮ ಎನ್ನುವ ಕವಿರಾಜಮಾರ್ಗಕಾರನ ಮಾತನ್ನು ಅಣಕಿಸುವಂತೆ, ಪ್ರಚೋದನಕಾರಿ ಹಾಗೂ ಕೀಳು ಮಾತುಗಳಿಂದ ಹೀಗಳೆಯುವುದನ್ನೇ ರಾಜಕೀಯ ಶಕ್ತಿಯನ್ನಾಗಿಸಿಕೊಂಡಿರುವ ಕೂಗುಮಾರಿಗಳೂ ಇದ್ದಾರೆ. ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಯೊಂದಿಗೆ ಲಿಂಗಭೇದವೂ ಹೆಚ್ಚಾಗುತ್ತಿದೆ. ಇಂಥ ಸಂಕೀರ್ಣ ಸಂದರ್ಭದಲ್ಲಿ 'ಬಸವ ಪಥ'ದ ಅನುಸರಣೆಯ ಮೂಲಕ 'ಸೌಹಾರ್ದ ಕರ್ನಾಟಕ'ವನ್ನು ರೂಪಿಸುವ ಮಾರ್ಗದಲ್ಲಿ ಸಾಗುವುದು ಇಂದಿನ ಅಗತ್ಯವಾಗಿದೆ. ಅರಿವನ್ನು ಗುರು, ನುಡಿಯನ್ನು ಜ್ಯೋತಿರ್ಲಿಂಗ ಹಾಗೂ ದಯೆಯನ್ನು ಧರ್ಮದ ಮೂಲವನ್ನಾಗಿ ಕಂಡ ಬಸವಣ್ಣನವರ ಪ್ರತಿಪಾದನೆಯಲ್ಲಿ, ವರ್ತಮಾನದ ಅಹಿತಕರ ವಿದ್ಯಮಾನಗಳನ್ನು ಕೊನೆಗೊಳಿಸಲು ಪ್ರೇರಣೆಗಳಿವೆ. ನಡೆ ಮತ್ತು ನುಡಿಯ ಮೌಲ್ಯವನ್ನು ಎತ್ತಿಹಿಡಿದ ಬಸವ ಸಂಸ್ಕೃತಿ ಸಮಕಾಲೀನ ರಾಜಕಾರಣಿಗಳಿಗೆ ನಿತ್ಯ ಅನುಷ್ಠಾನದ ತತ್ವವಾಗಬೇಕು. ಭಕ್ತಿಮಾರ್ಗದಲ್ಲಿದ್ದುಕೊಂಡೂ ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತವಾಗಿರುವುದು ಸಾಧ್ಯ ಎನ್ನುವುದನ್ನು ಪ್ರಜಾಪ್ರತಿನಿಧಿಗಳು ಬಸವಣ್ಣನವರ ಮೂಲಕ ಅರಿಯಬೇಕಾಗಿದೆ. ಬಸವೇಶ್ವರರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಪ್ರಕಟಿಸಿರುವ ಸರ್ಕಾರ, ಬಸವತತ್ವಗಳನ್ನು ವ್ಯಾಪಕ ಪ್ರಚಾರ ಮಾಡುವುದಾಗಿಯೂ ಹೇಳಿದೆ. ಸರ್ಕಾರದ ಉದ್ದೇಶ ಸ್ವಾಗತಾರ್ಹ. ಆದರೆ, ಬಸವತತ್ವದ ಬೀಜಗಳು ಜನಸಾಮಾನ್ಯರಿಗಿಂತಲೂ ಮೊದಲು ಪ್ರಜಾಪ್ರತಿನಿಧಿಗಳ ಎದೆಗೆ ಬೀಳಬೇಕಾಗಿದೆ. ಅದು ಸಾಧ್ಯವಾದಲ್ಲಿ, ಕಲುಷಿತಗೊಂಡಿರುವ ಸಮಕಾಲೀನ ರಾಜಕಾರಣ ಸ್ವಲ್ಪವಾದರೂ ಮಾನವೀಯಗೊಳ್ಳಬಹುದು.

ದಿನದ ಟ್ವೀಟ್

ಪತ್ರಿಕಾ ಸ್ವಾತಂತ್ರ್ಯಕ್ಕೆ ಗೆಲುವು



ಸಾಂಕ್ರಾಮಿಕಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಬರೆದಿದ್ದ ಪತ್ರಕರ್ತರ ವಿರುದ್ಧ ಎಐಎಡಿಎಂಕೆ ನೇತೃತ್ವದ ಸರ್ಕಾರ ದಾಖಲಿಸಿದ್ದ ಪ್ರಕರಣಗಳನ್ನು ಹೈಕೋರ್ಟ್ ರದ್ದುಪಡಿಸಿದೆ. ಸರ್ಕಾರದ ಕ್ರಮವು ಪತ್ರಿಕಾ ಸ್ವಾತಂತ್ರ್ಯಕ್ಕೆ ನೀಡಿದ್ದ ಹೊಡೆತವಾಗಿತ್ತು ಮತ್ತು ಕೋರ್ಟ್ ಈಗ ಅದನ್ನು ತಳ್ಳಿಹಾಕಿರುವುದು ಸಂತೋಷದ ಸಂಗತಿ.

ಧನ್ಯಾ ರಾಜೇಂದ್ರನ್, ಪತ್ರಕರ್ತೆ

ಕಿಡಿನುಡಿ



ಕೋಚಿಂಗ್ ಕೇಂದ್ರಗಳ ಪರಿಧಿಯು ವ್ಯಾಖ್ಯಾನಕ್ಕೆ ಒಳಪಡಲಿ! ಡಜನ್‌ಗಟ್ಟಲೆ ಇರುವ 'ಟೆಕ್ನೊ ಶಾಲೆ'ಗಳು ಆ ಭಯಾನಕ ಪರೀಕ್ಷೆಗಳನ್ನು ಜಯಿಸಲು 4ನೇ ತರಗತಿಯಿಂದಲೇ ಮಕ್ಕಳಿಗೆ ತರಬೇತಿ ನೀಡುತ್ತಾ ಅವರ ಬಾಲ್ಯವನ್ನು ಹಾಳುಗೆಡವುತ್ತಿವೆ! ಈ ಆದೇಶವು ಇಂತಹ 'ಶಾಲೆ'ಗಳನ್ನೂ ಒಳಗೊಂಡರೆ, ಆಗ ಉದ್ದೇಶ ಸಫಲವಾಗುತ್ತದೆ.

(ಕೋಚಿಂಗ್ ಕೇಂದ್ರಗಳು 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳುವಂತಿಲ್ಲ ಎಂಬ ಕೇಂದ್ರ ಶಿಕ್ಷಣ ಸಚಿವಾಲಯದ ಆದೇಶಕ್ಕೆ ಪ್ರತಿಕ್ರಿಯೆ)

ಡಾ. ಸಚಿನ್ ರೆಡ್ಡಿ, ನರವಿಜ್ಞಾನಿ

25 ವರ್ಷಗಳ ಹಿಂದೆ

ಬುಧವಾರ, 20-1-1999

• ಪಟೇಲ್ ಮಧ್ಯಸ್ಥಿಕೆ – ಶಂಕರ್ ಪದಚ್ಯುತಿ ಬಿಕ್ಕಟ್ಟು ಇತ್ಯರ್ಥ

ಬೆಂಗಳೂರು, ಜ. 19 - ರಾಜ್ಯ ಜನತಾ ದಳದ ಅಧ್ಯಕ್ಷ ಸ್ಥಾನದಿಂದ ಬಿ.ಎಲ್. ಶಂಕರ್ ಅವರನ್ನು ಪದಚ್ಯುತಗೊಳಿಸಿದ ವಿಧಾನದ ಬಗ್ಗೆ ಹಿರಿಯ ಒಕ್ಕಲಿಗ ಸಚಿವರು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, ಆಡಳಿತ ಪಕ್ಷದಲ್ಲಿ ಉದ್ಭವಿಸಿದ್ದ ಹೊಸ ಬಿಕ್ಕಟ್ಟು ಇಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರ ಮಧ್ಯಸ್ಥಿಕೆಯಿಂದಾಗಿ ಸದ್ಯಕ್ಕೆ ಬಗೆಹರಿದಿದೆ.

ಶಂಕರ್ ಪದಚ್ಯುತಿ ವಿಚಾರದಲ್ಲಿ ತೀವ್ರ ಅಸಮಾಧಾನಗೊಂಡಿದ್ದ ಹಿರಿಯ ಒಕ್ಕಲಿಗ ಸಚಿವರು ಕದನವಿರಾಮ ಘೋಷಿಸಿ ಪಕ್ಷದ ಬಿಕ್ಕಟ್ಟು ಪರಿಹರಿಸುವ ಸಂಬಂಧ ಜನತಾ ದಳದ ರಾಷ್ಟ್ರೀಯ ಅಧ್ಯಕ್ಷ ಶರದ್ ಯಾದವ್ ಅವರ ತೀರ್ಮಾನಕ್ಕೆ ಬದ್ಧರಾಗಿರಲು ನಿರ್ಧರಿಸಿದ್ದಾರೆ ಎಂದು ತಿಳಿದುಬಂದಿದೆ.

ಶಂಕರ್ ಅವರಿಗೆ ಸೂಕ್ತ ನ್ಯಾಯ ದೊರಕಿಸುವ ಅಧಿಕಾರವನ್ನು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರಿಗೆ ವಹಿಸಿರುವ ಹಿರಿಯ ಒಕ್ಕಲಿಗ ಸಚಿವರು, ಉಪ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಜನತಾದಳದ ಅಧ್ಯಕ್ಷರಾಗಿ ನಾಳೆ ಅಧಿಕಾರ ವಹಿಸಿಕೊಳ್ಳುವ ಸಮಾರಂಭದಲ್ಲಿ ಪಾಲ್ಗೊಳ್ಳಲು ತೀರ್ಮಾನಿಸಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 20-1-1974

• 'ಮುಷ್ಕರ ಜಾಡ್ಯ ತೊಲಗಿಸಲು ಜಾಗೃತರಾಗಿ'

ಮಂಗಳೂರು, ಜ. 19 – 'ಅತಿ ಕಡಿಮೆ ಕೆಲಸ, ಹೆಚ್ಚು ಪಗಾರ – ಇದಕ್ಕಾಗಿ ಮುಷ್ಕರ. ಈ ಜಾಡ್ಯ ತೊಲಗಿಸಲು ಜನರು ಜಾಗೃತರಾಗಬೇಕು' ಎಂದು ಲೋಕೋಪಯೋಗಿ ಸಚಿವ ಎಚ್. ಎಂ. ಚನ್ನಬಸಪ್ಪ ಅವರು ಇಂದು ಕರೆ ನೀಡಿದರು.

ಇಲ್ಲಿಗೆ ಆರು ಮೈಲಿ ದೂರದ ಬೃಹತ್ ಬಂದರು ನಿವೇಶನದಲ್ಲಿ ಕೊಡಗು, ದಕ್ಷಿಣ- ಕನ್ನಡ ಜಿಲ್ಲೆಗಳ ಎಂಜಿನಿಯರುಗಳ ಸಂಘ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಮಂಗಳೂರು ಶಾಖೆ ಜೊತೆಯಾಗಿ ಏರ್ಪಡಿಸಿದ್ದ ವಿಚಾರಗೋಷ್ಠಿಯೊಂದರಲ್ಲಿ ಮಾತನಾಡುತ್ತಿದ್ದ ಸಚಿವ ಚನ್ನಬಸಪ್ಪ ಅವರು, ದೇಶದ ಇಂದಿನ ಪರಿಸ್ಥಿತಿಯ ಬಗೆಗೆ ತಮ್ಮ ಕಳವಳ ವ್ಯಕ್ತಪಡಿಸಿದರು.

'ದೇಶದ ಈ ದುಷ್ಟಶಕ್ತಿಗಳನ್ನು ಹತ್ತಿಕ್ಕಲು ಒಂದು ಕ್ರಾಂತಿ ಆಗಬೇಕಾದೀತು' ಎಂದು ಅವರು ಹೇಳಿ, ಪ್ರಜಾಭಿಪ್ರಾಯ ಕಲ್ಲು ಹಿಡಿದು ಓಡಾಡುವವರ ಕೈಯಲ್ಲಿ ಇರದಂತೆ ನೋಡಿಕೊಳ್ಳಬೇಕೆಂದು ಮನವಿ ಮಾಡಿಕೊಂಡರು.

• ಟಾಲ್‌ಸ್ಟಾಯ್ ಸ್ಮಾರಕ ವಸ್ತುಗಳು ಬೆಂಕಿಗೆ ಆಹುತಿ

ವೆಲ್ಷ್‌ಪೂಲ್, ವೇಲ್ಸ್ ಜ. 19 – ರಷ್ಯಾದ ಕಾದಂಬರಿಕಾರ ಲಿಯೋ ಟಾಲ್‌ಸ್ಟಾಯ್ ಅವರಿಗೆ ಸೇರಿದ ವಸ್ತುಗಳು, ಇಲ್ಲಿಗೆ ಸಮೀಪದಲ್ಲಿರುವ ಅವರ ಮೊಮ್ಮಗ ಕೌಂಟ್ ನಿಕೊಲಾಯಿ ಟಾಲ್‌ಸ್ಟಾಯ್ ಅವರ ಮನೆಗೆ ನಿನ್ನೆ ಬಿದ್ದ ಬೆಂಕಿಯಲ್ಲಿ ಸುಟ್ಟು ನಾಶವಾದವು.

ಬುಡಕಟ್ಟು ಸಮುದಾಯದ ಪ್ರಜ್ಞಾವಂತಿಕೆಯು ನಮ್ಮ ಬಾಳಿಗೂ ಬೆಳಕಾಗಲಿ

ಮೊಳಗಲಿ ನ್ಯಾಯದ ಗಂಟೆ



ವಿಶ್ಲೇಷಣೆ

ದೇವನೂರ ಮಹಾದೇವ

ಪಂಜು ಗಂಗೊಳ್ಳಿ ಅವರ 'ದೇವರುಗಳ ಮೌಲ್ಯಮಾಪನ ಮತ್ತು ಡಾ. ಖಾನ್ ಎಂಬ ಮುಸ್ಲಿಂ ದೇವತೆ' ಎನ್ನುವ ಹೃದಯಸ್ಪರ್ಶಿ ಬರಹ ನನ್ನನ್ನು ವಶಪಡಿಸಿಕೊಂಡುಬಿಟ್ಟಿತು. ಛತ್ತೀಸಗಢದ ಬಸ್ತಾರ್ ಜಿಲ್ಲೆಯ ನೂರಾರು ಬುಡಕಟ್ಟು ಸಮುದಾಯಗಳಲ್ಲಿರುವ, ಜಾತಿ, ಧರ್ಮಗಳನ್ನು ಮೀರಿದ ಧಾರ್ಮಿಕತೆ, ದೇವರುಗಳ ಮೌಲ್ಯಮಾಪನ ಮಾಡುವ ಪ್ರಜ್ಞಾವಂತಿಕೆಯು ಈ ಭೂಮಿಗೆ ಬೆಳಕು ಎಂಬಂತೆ ನನಗೆ ಕಾಣಿಸತೊಡಗಿತು.

ಆ ಪ್ರಸಂಗ ಹೀಗಿದೆ: ಬಸ್ತಾರ್ ಜಿಲ್ಲೆಯ ಬುಡಕಟ್ಟು ಜನಾಂಗಗಳ ಪ್ರಮುಖ ದೇವತೆ ಬಂಗಾರಾಂದೇವಿ. ವರ್ಷಕ್ಕೊಮ್ಮೆ ಇಲ್ಲಿ 'ಭಡೋ ಜಾತ್ರಾ' ನಡೆಯುತ್ತದೆ. ಅಂದು 240 ಹಳ್ಳಿಗಳ ಬುಡಕಟ್ಟು ಸಮುದಾಯಗಳ ಜನ ತಂತಮ್ಮ ದೇವತಾಮೂರ್ತಿಗಳನ್ನು ಹೊತ್ತುತಂದು ಬಂಗಾರಾಂದೇವಿಯ ಪದತಲದಲ್ಲಿ ಇರಿಸುತ್ತಾರೆ. ಪೂಜಾರಿಗಳು ಬಂಗಾರಾಂದೇವಿಯ ಸಮ್ಮುಖದಲ್ಲಿ ಈ ದೇವತೆಗಳ ವಿಚಾರಣೆ ನಡೆಸುತ್ತಾರೆ. ಯಾವ ದೇವರು ತಮ್ಮ ಭಕ್ತರ ಸಂಕಟಗಳನ್ನು ನಿವಾರಿಸಲಿಲ್ಲವೋ ಅಂತಹವುಗಳ ದೈವತ್ವವನ್ನು ಅಳಿಸಿಹಾಕಿ, ಆ ದೇವರುಗಳ ಮೂರ್ತರೂಪವಾದ ಮರದ ಆಕೃತಿ, ಕಲ್ಲಿನ ಆಕೃತಿ, ಪೆಟ್ಟಿಗೆಗಳನ್ನು ಗುಡಿಯ ಹಿಂಬದಿಯ ಆವರಣದಲ್ಲಿನ ಮೂಲೆಯಲ್ಲಿ ಗುಡ್ಡೆ ಹಾಕುತ್ತಾರೆ. ಈ ಮಾಜಿ ದೇವರುಗಳ ಆಕೃತಿಗಳು ಬಿಸಿಲಲ್ಲಿ ಒಣಗುತ್ತ, ಮಳೆಗೆ ತತ್ತರಿಸುತ್ತ, ಚಳಿಗೆ ನಡುಗುತ್ತ, ಮರಗಳ ಬುಡಕ್ಕೆ ಒರಗಿಕೊಂಡೊ, ಪೊದೆಗಳಲ್ಲಿ ಸಿಕ್ಕಿಹಾಕಿಕೊಂಡೊ ಬಿದ್ದಿರುತ್ತವೆ.

ಇಲ್ಲೊಂದು ಸೋಜಿಗವಿದೆ: ಬಸ್ತಾರ್‌ನ ಕೇಶಕಾಲ್ ಪರ್ವತದ ತುದಿಯಲ್ಲಿರುವ ಗುಡಿಯ ಮಣ್ಣಿನ ವೇದಿಕೆಯ ಮೇಲೆ ಶಿವಲಿಂಗಾಕೃತಿಯ ಕಪ್ಪುಮರದ ತುಂಡನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲೊಂದು ಹಣತೆ ಬೆಳಗುತ್ತಿರುತ್ತದೆ. 'ಸುರ್ಡೊಂಗಾರ್' ಜಾತ್ರೆ ಸಮಯದಲ್ಲಿ ಗುಡಿಯ ಬಾಗಿಲು ತೆರೆದಾಗ, ಸುತ್ತಲಿನ ಬುಡಕಟ್ಟು ಸಮುದಾಯಗಳ ಸಹಸ್ರಾರು ಜನರು ಆ ದೇವರ ದರ್ಶನ ಪಡೆಯುತ್ತಾರೆ. ಇತರ ದೇವತೆಗಳೂ ಈ ದೇವರ ದರ್ಶನಕ್ಕೆ ಆಗಮಿಸುತ್ತಾರೆ ಎಂಬ ಪ್ರತೀತಿ ಇದೆ. ಆ ದೇವತೆಯ ಹೆಸರು ಡಾ. ಖಾನ್. 200 ವರ್ಷಗಳ ಹಿಂದೆ ಬಸ್ತಾರ್‌ನಲ್ಲಿ ಕಾಲರಾ, ಸಿಡುಬು ಪಿಡುಗುಗಳು ಜನರ ಬಲಿ ತೆಗೆದುಕೊಳ್ಳುತ್ತಿದ್ದಾಗ ಅಲ್ಲಿಗೆ ಆಗಮಿಸಿದಾತ ಇಸ್ಲಾಂ ಧರ್ಮದ ಡಾ. ಖಾನ್. ಜನರನ್ನು ಸಾವಿನ ದವಡೆಯಿಂದ ಪಾರು ಮಾಡಿದಾತ. ಅಲ್ಲೇ ನೆಲೆನಿಂತು ಜನಸೇವೆಯನ್ನು ಮುಂದುವರಿಸಿದಾತ. ಡಾ. ಖಾನ್ ಕಾಲವಶವಾದ ಮೇಲೆ ಬುಡಕಟ್ಟು ಸಮುದಾಯ ಡಾ. ಖಾನ್ ಸಾಹೇಬರನ್ನು ದೇವತೆಯನ್ನಾಗಿಸಿ ಪೂಜಿಸುತ್ತಿದೆ. ಹೀಗೆಲ್ಲಾ ಇದೆ, ಈ ನೆಲದಲ್ಲೆ, ನಮ್ಮಲ್ಲೆ.

ಆದರೆ ನಮ್ಮೊಳಗೆ ದೈವಗಳ ಮೌಲ್ಯಮಾಪನ ಮಾಡುವ ಪ್ರಜ್ಞಾವಂತಿಕೆ ಇದೆಯೇ? ದೇವರುಗಳು ಇರಲಿ, ನಾವೇ ಆಯ್ಕೆ ಮಾಡಿದ ಜನಪ್ರತಿನಿಧಿಗಳ ಮೌಲ್ಯಮಾಪನವನ್ನೂ ನಾವು ಮಾಡುತ್ತಿಲ್ಲ. ಹೀಗಿರುವಾಗ, ನಮ್ಮ ಸಂಕಟಗಳು ಪರಿಹಾರ ಕಾಣುವುದಾದರೂ ಹೇಗೆ? ಈ ಭೂಮಿಗೆ ತಂದೆತಾಯಿಯಾದ ಬುಡಕಟ್ಟು ಸಮುದಾಯಗಳು ತಮ್ಮ ದೈವವನ್ನು ವಿಚಾರಣೆ ಮಾಡಿ, ಅನುಪಯುಕ್ತ ದೈವವನ್ನು ಆಚೆ ಬಿಸಾಡುವಷ್ಟು ಪ್ರಜ್ಞಾವಂತರಾಗಿರುವಾಗ, ಆ ಆದಿವಾಸಿಗಳ ಸಂತಾನವಾದ ನಾವು ಮೂಢಾತ್ಮರಾಗಿಬಿಟ್ಟಿದ್ದೇವೆ. ಆದಿವಾಸಿ ಮೂಲಗಳಿಂದ ಬೇರ್ಪಟ್ಟ ನಾವು ಎಚ್ಚರತಪ್ಪಿದ ಜನಸ್ತೋಮವಾಗಿಬಿಟ್ಟಿದ್ದೇವೆ. ಈಗಲಾದರೂ ನಾವು ಪ್ರಜ್ಞೆ ಪಡೆದುಕೊಂಡು, ನಮ್ಮ ಭವಿಷ್ಯ ರೂಪಿಸಲು ನಾವೇ ಆಯ್ಕೆ ಮಾಡಿಕೊಂಡ, ಹಾಲಿ ಇರುವ ನಮ್ಮ ಸಂಸತ್ ಸದಸ್ಯರನ್ನು ಮತದಾರ ಪ್ರಭುವಿನ ಪದತಲದಲ್ಲಿಟ್ಟು ಮೌಲ್ಯಮಾಪನ ಮಾಡಬೇಕಿದೆ. ನನಗನ್ನಿಸುತ್ತದೆ, ಆಗ ಶೇಕಡ 90ರಷ್ಟು ಸಂಸತ್ ಸದಸ್ಯರನ್ನು ಸಂಸತ್ ಭವನದ ಆಚೆಗೆ ಎಸೆಯಬೇಕಾಗಿ ಬರಬಹುದು.

ಈಗಲೇ ಎಚ್ಚರ ವಹಿಸೋಣ- ಕೆಲವೇ ತಿಂಗಳಲ್ಲಿ ಲೋಕಸಭಾ ಚುನಾವಣೆ ಬರುತ್ತಿದೆ. ಮುಂಬರುವ ಚುನಾವಣೆಯಲ್ಲಾದರೂ ನಾವು ಮೌಲ್ಯಮಾಪನ ಪ್ರಜ್ಞೆ ಗಳಿಸಿಕೊಂಡು- 'ನಮ್ಮ ಪ್ರಜಾಪ್ರಭುತ್ವದ ಯೋಗಕ್ಷೇಮ, ನ್ಯಾಯಾಂಗ ಹಾಗೂ ಸ್ವಾಯತ್ತ ಸಂಸ್ಥೆಗಳ ಸ್ವಾಯತ್ತತೆಯ ಸ್ಥಿತಿಗತಿ, ಆಳುವವರ ಕಾಲ್ತುಳಿತಕ್ಕೆ ಸಿಲುಕಿದ ರಾಜ್ಯಗಳ ಒಕ್ಕೂಟ ವ್ಯವಸ್ಥೆ, ಸಾಮಾಜಿಕ ನ್ಯಾಯ, ಮಹಿಳಾ ಮೀಸಲಾತಿ, ಸ್ವಾಮಿನಾಥನ್ ವರದಿ ಹಾಗೂ ಶಿಕ್ಷಣ, ಆರೋಗ್ಯ, ಉದ್ಯೋಗಗಳ ಅಧೋಗತಿಯ ಮೌಲ್ಯಮಾಪನ ಮಾಡಬೇಕಾಗಿದೆ. ನಾವು ಕಣ್ತೆರೆದು- ಕೊರೊನಾ ಕಾಲದಲ್ಲೂ ಹೆಚ್ಚಳವಾದ ಪ್ರಧಾನಿ ಪರಮಾಪ್ತ ಬಂಡವಾಳಿಗರ ಸಂಪತ್ತಿನ ಒಳಹೊಕ್ಕು ನೋಡಬೇಕಾಗಿದೆ. ಹಣದುಬ್ಬರ, ಬೆಲೆ ಏರಿಕೆಗೆ ಜನಸಾಮಾನ್ಯರು ಹೊರುವ ತೆರಿಗೆ ಮತ್ತು ಪ್ರಾಕೃತಿಕ ಸಂಪತ್ತು- ಸರ್ವವೂ ಇದೇ ಬಂಡವಾಳಿಗರ ಸಂಪತ್ತಿಗೆ ಜಮಾ ಆಗುತ್ತಿದೆ. ಈ ಗೋಲ್‌ಮಾಲ್ ತಡೆಗಟ್ಟಿದರೆ ಮಾತ್ರ ಭಾರತವು ಉಳಿಯುತ್ತದೆ.

ಈಗ ನಾವು ಮಾಡಬೇಕಾಗಿರುವುದು ಇಷ್ಟೆ. 2024ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಪಕ್ಷಗಳು, ಅಭ್ಯರ್ಥಿಗಳು ಮತ ಯಾಚಿಸಲು ಬಂದಾಗ ನಾವು ಕೇಳಬೇಕು- 'ನಿಮ್ಮ ನುಡಿ ಮತ್ತು ನಡೆಯನ್ನು ನಾವು ಮೌಲ್ಯಮಾಪನ ಮಾಡುತ್ತೇವೆ, ಮುಂದೆ ನಿಮ್ಮ ಚುನಾವಣಾ ಜುಮ್ಲಾ (ಸುಳ್ಳು) ಸಹಿಸೆವು' ಎಂದು ಎಚ್ಚರಿಸಿದರೆ, ಈ ದೇಶ ಅಷ್ಟೊಇಷ್ಟೊ ಮುನ್ನಡೆಯಬಹುದು. ಜನಸಾಮಾನ್ಯರ ಸಂಕಷ್ಟಗಳು ಅನುಭವಿಸುವವರಿಗೇ ತಟ್ಟದಂತೆ ಮಾಡಿರುವ ಆಳ್ವಿಕೆಯ ವಂಚನೆಯ ಸಮ್ಮೋಹನಾಸ್ತ್ರ, ದ್ವೇಷಾಸ್ತ್ರ, ಅಸಹನಾಸ್ತ್ರ, ಭ್ರಮಾಸ್ತ್ರಗಳ ಪ್ರಭಾವಗಳಿಂದ ಹೊರಬಂದಾಗ ಮಾತ್ರ ನಮಗೆ ಜನಪ್ರತಿನಿಧಿಗಳ ಮೌಲ್ಯಮಾಪನ ಮಾಡಲು ಸಾಧ್ಯವಾಗುತ್ತದೆ.



ಮೊದಲು ಜನಸ್ತೋಮದ ಮೇಲೆ ಹಾಕಿರುವ ಮಾಯಾಬಲೆಯ ಚಹರೆಯನ್ನು ಗುರುತಿಸಬೇಕಾಗಿದೆ. ಉದಾಹರಣೆಗೆ, ತುಂಬಾ ವ್ಯವಸ್ಥಿತವಾಗಿ 'ಹಿಂದುತ್ವ'ದ ಕಹಳೆ ಊದಲಾಗುತ್ತಿದೆ. ಈಗ, 'ಹಿಂದೂ' ಮೇಲೆ 'ಹಿಂದುತ್ವ' ಸವಾರಿ ಮಾಡುತ್ತಿದೆ. ಸ್ಪಷ್ಟತೆಗಾಗಿ ಉದಾಹರಣೆಗೆ- 'ನಾನು' ಎಂಬ ಪದವನ್ನು ಬಳಸುತ್ತೇವೆ. ಇದು ನಮ್ಮನಮ್ಮ ಗುರುತಿಗಿರುವ ಪದ. ಆದರೆ ನಾನತ್ವ? ಇದು ಬೇರೆಯವರ ಮೇಲೆ ಸವಾರಿ ಮಾಡುವ ಅತಿರೇಕ. ಹೀಗೆಯೇ ಹಿಂದೂ, ಹಿಂದೂಸ್ಥಾನಿ ಕೂಡ ಗುರುತಿಸುವ ಪದಗಳೇ. ಆದರೆ ಚಾತುರ್ವರ್ಣದ ಹಿಂದುತ್ವ? ಇದು ನಾನತ್ವದಂತೆಯೇ ಅತಿರೇಕ, ಜೊತೆಗೆ ವಿನಾಶಕಾರಿ. ನಾನು, ನನ್ನದು ಮಾತ್ರ ಮುಖ್ಯ ಎಂಬಲ್ಲಿಗೆ ಇದು ಕರೆದೊಯ್ಯುತ್ತದೆ. ಆದರೆ ನಮ್ಮ ಪುರಾಣ, ಚರಿತ್ರೆ, ಮಹಾಕಾವ್ಯಗಳಲ್ಲಿ- ನಾನತ್ವ ಹೆಚ್ಚಾದಾಗ ಅದರ ಗರ್ವಭಂಗವೂ ನಡೆಯುತ್ತಾ ಬಂದಿದೆ. ಭೀಮನಿಗೆ ತನ್ನ ಬಲದ ಅಹಂ ಹೆಚ್ಚಾದಾಗ ಹನುಮನ ಬಾಲವನ್ನೇ ಅಲುಗಾಡಿಸಲಾಗಲಿಲ್ಲ. ಯಾವುದೇ ಆದರೂ ಅತಿಯಾದಾಗ ಅದು ಇಳಿಯಲೇ- ಬೇಕಾಗುತ್ತದೆ. ಇದು ಭಾರತದ ಸಮಷ್ಟಿ ಪ್ರಜ್ಞೆಯಲ್ಲೇ ಇದೆ.

ಈಗ 'ಸನಾತನ'ವನ್ನೂ ಹಬ್ಬಿಸಲಾಗುತ್ತಿದೆ. ಸಮಾಜವನ್ನು ಕದಡಿ ಬಗ್ಗಡ ಮಾಡಲಾಗಿದೆ. ತಿಳಿಯಾಗಲು ಯಾರೂ ಬಿಡುತ್ತಿಲ್ಲ. ಅಷ್ಟಕ್ಕೂ ಸನಾತನ ಅಂದರೆ ಏನು? ಪುರಾತನ ಕಾಲದಿಂದಲೂ ಸಾಗುತ್ತ ವರ್ತಮಾನದಲ್ಲೂ ಇರುವ ಸಂಗತಿಗಳು. ಉದಾಹರಣೆಗೆ- ಕಾರುಣ್ಯ, ಸಹನೆ, ಪ್ರೀತಿ, ಸಹಬಾಳ್ವೆ, ಎಲ್ಲರಿಗೂ ಒಂದೇ ನ್ಯಾಯ, ತನ್ನಂತೆ ಪರರ ಬಗೆಯುವುದು ಎಂಬಂತಹ ಪುರಾತನ ಕಾಲದ ಮೌಲ್ಯಗಳು ಇಂದಿಗೂ ಹಣತೆಯ ಬೆಳಕಿನಂತಿವೆ. ಇವು ಸನಾತನವೆ. ಜೊತೆಗೇ ಚಾತುರ್ವರ್ಣ, ಜಾತಿಭೇದ, ಅಸಹನೆ, ದ್ವೇಷದಂತಹವು ಇಂದಿಗೂ ಬಂದಿವೆ. ಇವೂ ಸನಾತನವೆ. ಆದರೆ ಇವು ಅಪಮೌಲ್ಯಗಳು. ಪಂಜಿನಂತೆ ಧಗಧಗಿಸಿ ಉರಿಯುತ್ತಿರುತ್ತವೆ. ಇಂದು, ಸನಾತನ ಮೌಲ್ಯಗಳು ಹಾಗೂ ಸನಾತನ ಅಪಮೌಲ್ಯಗಳ ನಡುವೆ ಘರ್ಷಣೆ ನಡೆಯುತ್ತಿದೆ. ಈ ಘರ್ಷಣೆಯಲ್ಲಿ ಮುಳುಗಿದವರು ಜನಪ್ರತಿನಿಧಿಗಳ ಮೌಲ್ಯಮಾಪನ ಮಾಡಲು ಅಗತ್ಯವಾದ ಪ್ರಜ್ಞೆ ಇಲ್ಲದವರಾಗಿರುತ್ತಾರೆ. ಇಷ್ಟೆಲ್ಲಾ ಇದ್ದೂ ಭಾರತದ ಸಮಷ್ಟಿ ಪ್ರಜ್ಞೆಗೆ, ಮುಳುಗುವ ಕಾಲದಲ್ಲಿ ಕೈ ಹಿಡಿದು ಮೇಲೆತ್ತುವ ಸತ್ವವಿದೆ.

ಈಗ, ಭಾರತವನ್ನು ಅಯೋಧ್ಯೆಯ ರಾಮಮಂದಿರದ ಸಂಭ್ರಮ ಆವರಿಸಿಕೊಂಡಿದೆ. ಇಂದು ಶ್ರೀರಾಮನ ವಚನಪಾಲನೆಯ ಮೌಲ್ಯವನ್ನು ಭಾರತ ಸಂಭ್ರಮಿಸಬೇಕಿತ್ತು. ಇದು ಕಾಣುತ್ತಿಲ್ಲ. ಅಯೋಧ್ಯೆಯ ರಾಮ ಮಂದಿರಕ್ಕೆ ರಾಜಕಾರಣದ ಸೋಂಕು ತಗುಲಬಾರದಿತ್ತು.

ಶ್ರೀರಾಮನ ಅರಮನೆಯ ಮುಂದೆ ಒಂದು ನ್ಯಾಯದ ಗಂಟೆ ಇತ್ತಂತೆ. ಒಂದು ದಿನ ಒಂದು ಕುದುರೆ ಈ ಗಂಟೆಯನ್ನು ಎಳೆದಾಗ, ಶಬ್ದ ಕೇಳಿ ಹೊರಬಂದ ಶ್ರೀರಾಮ, ಹಸಿವಿನಿಂದ ಬಳಲುತ್ತಿದ್ದ ಆ ಕುದುರೆಗೆ ನ್ಯಾಯ ಕೊಡಿಸಿದನಂತೆ. ಭಾರತಕ್ಕೂ ಇಂತಹ ಕಣ್ಣು, ಕಿವಿ, ಹೃದಯ ಇರುವ ನ್ಯಾಯವಂತ ಮನುಷ್ಯ ಆಳ್ವಿಕೆ ನಡೆಸುವುದು ತುರ್ತಾಗಿ ಬೇಕಾಗಿದೆ. ಅಯೋಧ್ಯೆಯ ರಾಮಮಂದಿರದಲ್ಲೂ ಒಂದು ನ್ಯಾಯದ ಗಂಟೆ ಕಟ್ಟಿಸುವಂತಾಗಲಿ, ನೊಂದುಬೆಂದ ಸಕಲಜೀವಿಗಳೂ ನ್ಯಾಯದ ಗಂಟೆ ಬಾರಿಸುವಂತಾಗಲಿ. ಅದು ಡೆಲ್ಲಿ ದರ್ಬಾರಿಗೂ ಕೇಳಿಸಬಹುದೇ?

ಚುರುಮುರಿ



ರಾರಾಜಿಸಲಿದೆ ಸಂಪತ್ತು

• ಆನಂದ

'ರಾಮ ಮಂದಿರ ಬಂತು, ಆದರೆ ರಾಮ ರಾಜ್ಯ ಬಂದೀತೆ?' ಮಡದಿಯ ಪ್ರಶ್ನೆ, ಕಾಂಗ್ರೆಸ್‌ನವರು ಕೇಳುವಂತೆ.

'ರಾಮ ರಾಜ್ಯದ ಬಗ್ಗೆ ಗೊತ್ತಿಲ್ಲ, ಆದರೆ ರಾಮ ಮಂದಿರ ರಾಜ್ಯ ಬಂದಿದೆ ಅಥವಾ ಬರ್ತಾ ಇದೆ. ಆನ್ ದಿ ವೇ' ಎಂದೆ.

'ಹೌದೆ?! ಎಲ್ಲಿ?!'

'ಅಯೋಧ್ಯೆಯಲ್ಲಿ' ಎಂದೆ.

'ಅಲ್ರೀ, ಅಲ್ಲಿ ಬಂದಿರುವುದು ಮಂದಿರ. ರಾಜ್ಯ ಎಲ್ಲಿ ಬಂತು?'

'ವೇಟ್, ಇನ್ನು 10 ವರ್ಷಗಳಲ್ಲಿ ಅಲ್ಲಿ ₹ 8,500 ಕೋಟಿ ಬಂಡವಾಳ ಹೂಡಲಾಗುತ್ತದೆ. ಅಂದರೆ ಅಷ್ಟು ಮೊತ್ತದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ'.

'ಮೈ ಗಾಡ್!'

'ಅಯೋಧ್ಯೆ ಒಂದು ಸಣ್ಣ ಊರು. ಇನ್ನು ಮುಂದೆ ರಾಮನ ದರ್ಶನಕ್ಕೆ ಪ್ರತಿದಿನ ಸುಮಾರು 3 ಲಕ್ಷ ಪ್ರವಾಸಿಗರು ಬರಲಿದ್ದಾರೆ. ಅವರಿಗಾಗಿ ಹೊಸ ವಿಮಾನ ನಿಲ್ದಾಣ, ಹೊಸ ರೈಲು ನಿಲ್ದಾಣ ಸಿದ್ಧವಾಗಿವೆ. ಈ ಪ್ರವಾಸಿ ಪ್ರವಾಹ ಎದುರಿಸಲು 1,200 ಎಕರೆ ಜಾಗದಲ್ಲಿ ಒಂದು ಉಪನಗರವನ್ನೇ ನಿರ್ಮಿಸಲಾಗುವುದು. ಅಂದರೆ ಲೆಕ್ಕ ಹಾಕು, ಎಷ್ಟು ಹೊಸ ಹೊಸ ಕಟ್ಟಡಗಳು ನಿರ್ಮಾಣಗೊಳ್ಳಲಿವೆ. ಒಂದು ಕಟ್ಟಡ ಎಂದರೂ ಸಿಮೆಂಟ್, ಸ್ಟೀಲ್, ಸ್ಯಾನಿಟರಿ, ವಿದ್ಯುತ್ ಸಂಪರ್ಕ...'

'ಅಂದರೆ ಹೊಸ ಉದ್ಯೋಗಗಳ ಸೃಷ್ಟಿ?'

'ಕರೆಕ್ಟ್. ರಾಮನ ದರ್ಶನ ಮಾಡೋದಿಕ್ಕೆ ಬರೋರಿಗೆ ವಸತಿ ಸೌಕರ್ಯ, ಭೋಜನ ವ್ಯವಸ್ಥೆ, ಅಡ್ಡಾಡೋದಿಕ್ಕೆ ವಾಹನ ಸೌಲಭ್ಯ, ಮನರಂಜನೆ ಹೀಗೆ ನೋಡು ಸಾವಿರಾರು ಮಂದಿಗೆ ನೌಕರಿ ಸಿಗಲಿದೆ. ಯಾತ್ರಾರ್ಥಿಗಳಿಗೆ ಅಯೋಧ್ಯೆ ದರ್ಶನ ಮಾಡಿಸೋದಿಕ್ಕೆ ಗೈಡ್‌ಗಳು ಬೇಕು. ಯೋಗ, ಧ್ಯಾನ ಕಲಿಯಲು ಅಥವಾ ಕಲಿಸಲು ಕೇಂದ್ರಗಳೂ ತಲೆ ಎತ್ತಲಿವೆ ಅಂತಾಯಿತು'.

'ಅನೇಕ ಶ್ರೀಗಳು, ಗುರುಗಳು, ಆಚಾರ್ಯರು ಈಗಾಗಲೇ ಜಾಗ ಹುಡುಕುತ್ತಿರಬಹುದು ಅದಕ್ಕೆ'.

'ಹಳೆಯ ಅಯೋಧ್ಯೆಗಿಂತ ಕಲಿಯುಗದ ಅಯೋಧ್ಯೆ ಸಂಪತ್ತಿನಲ್ಲಿ ರಾರಾಜಿಸಲಿದೆ. ಈ ಅಯೋಧ್ಯಾ ಕಾಂಡವನ್ನು ಅನೇಕರು ಎದುರು-ನೋಡುತ್ತಿದ್ದಾರೆ. ಇದೇ ಅಲ್ಲವೇ ರಾಮ ಮಂದಿರ ರಾಜ್ಯ?'

ಸಂಗತ

ದುರ್ಬಲ ಬುನಾದಿ ಮೇಲೆ ಶಿಕ್ಷಣ ಸೌಧ

ಶೈಕ್ಷಣಿಕ ಕೌಶಲದ ತೀವ್ರ ಕೊರತೆ ಎದುರಿಸುತ್ತಿರುವ ಯುವಜನ ಚುನಾವಣೆಯಲ್ಲಿ ಅದ್ಯಾವ ವಿವೇಚನೆಯಿಂದ ಭಾಗವಹಿಸಲು ಸಾಧ್ಯ?

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಕನ್ನಡ ಮಾತೃಭಾಷೆಯ 9ರಿಂದ 12ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಎರಡನೇ ತರಗತಿಯ ಕನ್ನಡ ಪಠ್ಯಪುಸ್ತಕವನ್ನು ಕೊಟ್ಟು ಓದಲು ಹೇಳಿದಾಗ, ಶೇ 26.5ರಷ್ಟು ಮಂದಿಗೆ ಸರಾಗವಾಗಿ ಓದಲು ಬರಲಿಲ್ಲ. ಅದೇರೀತಿ, ಶೇ 43.7ರಷ್ಟು ಮಕ್ಕಳಿಗೆ ಇಂಗ್ಲಿಷ್ ವಾಕ್ಯಗಳನ್ನು ಓದಲು ಬರಲಿಲ್ಲ. ಓದಲು ಬಂದವರಲ್ಲಿಯೂ ಶೇ 26.7ರಷ್ಟು ಮಕ್ಕಳಿಗೆ ತಾವು ಓದಿದ ವಾಕ್ಯಗಳ ಅರ್ಥ ಗೊತ್ತಿರಲಿಲ್ಲ. ಮೂರಂಕಿಯ ಸಂಖ್ಯೆಯೊಂದನ್ನು ಒಂದಂಕಿಯ ಸಂಖ್ಯೆಯಿಂದ ಭಾಗಿಸಲು ಹೇಳಿದಾಗ, ಶೇ 56.7ರಷ್ಟು ಮಕ್ಕಳು ಮಾತ್ರ ಅದನ್ನು ಮಾಡುವುದರಲ್ಲಿ ಯಶಸ್ವಿಯಾದರು.

ಯಾವ ಸಾಕ್ಷರತಾ ಕೌಶಲಗಳನ್ನು, ಹೆಚ್ಚೆಂದರೆ ಮೂರನೇ ತರಗತಿಯಲ್ಲಿ ಕಲಿತು ಮುಗಿಸಬೇಕಾಗಿತ್ತೋ ಅವು ಸುಮಾರು ಮಕ್ಕಳಲ್ಲಿ ಹತ್ತನೇ ತರಗತಿಯಲ್ಲಿಯೂ ಕಂಡುಬರಲಿಲ್ಲ.

ಇವು 'ಆ್ಯನ್ಯುಯಲ್ ಸ್ಟೇಟಸ್ ಆಫ್ ಎಜುಕೇಷನ್ ರಿಪೋರ್ಟ್ (ಏಸರ್)- ಬಿಯಾಂಡ್ ಬೇಸಿಕ್ಸ್' ಎಂಬ ಸಮೀಕ್ಷಾ ವರದಿಯಲ್ಲಿ ಕಂಡುಬಂದ ಅಂಕಿಅಂಶಗಳು. ಈ ಸಮೀಕ್ಷೆಯನ್ನು ಪ್ರಥಮ್ ಎಂಬ ಸ್ವಯಂಸೇವಾ ಸಂಸ್ಥೆಯು 2005ರಿಂದ ಎರಡು ವರ್ಷಗಳಿಗೊಮ್ಮೆ ನಡೆಸುತ್ತಾ ಬಂದಿದೆ. 2023ರ ಸಮೀಕ್ಷೆಯಲ್ಲಿ ಕರ್ನಾಟಕವೂ ಸೇರಿದಂತೆ ದೇಶದ 26 ರಾಜ್ಯಗಳಲ್ಲಿನ 28 ಗ್ರಾಮಾಂತರ ಜಿಲ್ಲೆಗಳ 14-18ರ ವಯೋಮಾನದ 34,745 ವಿದ್ಯಾರ್ಥಿಗಳನ್ನು ಒಳಗೊಳ್ಳಲಾಗಿದೆ.

ಕೇಂದ್ರ ಶಿಕ್ಷಣ ಸಚಿವಾಲಯ ನಡೆಸುವ ನ್ಯಾಷನಲ್ ಅಚೀವ್‌ಮೆಂಟ್ ಸರ್ವೆ ಮತ್ತು ಏಸರ್ ನಡೆಸುವ ಸಮೀಕ್ಷೆಯ ಕಾರ್ಯವಿಧಾನಗಳು ಸ್ವಲ್ಪಮಟ್ಟಿಗೆ ವಿಭಿನ್ನವಾಗಿದ್ದರೂ ಗ್ರಾಮೀಣ ಭಾರತದಲ್ಲಿನ ಶೈಕ್ಷಣಿಕ ಪರಿಸ್ಥಿತಿಯ ಕುರಿತು ಆ ಸಮೀಕ್ಷೆಯೂ ಇಂಥ ಕೊರತೆಗಳನ್ನು ಎತ್ತಿತೋರಿಸುತ್ತದೆ.

ರಾಜ್ಯ ಶಿಕ್ಷಣ ಇಲಾಖೆಯ ಶಾಲಾ ಪಠ್ಯಪುಸ್ತಕಗಳ ಮುನ್ನುಡಿಯಲ್ಲಿ, 'ಶಾಲಾ ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು', 'ಶಿಕ್ಷಣವನ್ನು ಇಂದಿನ ಮತ್ತು ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು', 'ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ', 'ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸುವುದು' ಎಂಬಂತಹ ಮಹತ್ವಾಕಾಂಕ್ಷೆಯ ಧ್ಯೇಯಗಳನ್ನು ಘೋಷಿಸಲಾಗಿದೆ. ಆದರೆ, ಇಲಾಖೆಯು ರೂಪಿಸುವ ಪಠ್ಯಪುಸ್ತಕಗಳಲ್ಲಾಗಲೀ ಬೋಧನಾ ಕ್ರಮದಲ್ಲಾಗಲೀ ಈ ಉದ್ದೇಶ ಈಡೇರಿಕೆಗೆ ಅಗತ್ಯವಾದ ತಂತ್ರಗಳು ಕಾಣಿಸುವುದಿಲ್ಲ.

ಉಲ್ಲೇಖಿತ ಸಮೀಕ್ಷೆಯಲ್ಲಿ ಹೇಳಿರುವ ಹಾಗೆ, 9ನೇ ತರಗತಿಯ ಕಾಲುಭಾಗದಷ್ಟು ವಿದ್ಯಾರ್ಥಿಗಳಿಗೆ 2ನೇ ತರಗತಿಯ ಕನ್ನಡ ಪಾಠವನ್ನೂ ಓದಲು ಬರುವುದಿಲ್ಲ. ಇಂಥ ದುರ್ಬಲವಾದ ಭಾಷಾ ಮಾಧ್ಯಮದ ಮೂಲಕವೇ ಈ ಮಕ್ಕಳು ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಗಣಿತದ ವಿಷಯಗಳನ್ನು ಕಲಿಯುತ್ತಾರೆ, ಪಾಸೂ ಆಗುತ್ತಾರೆ ಎನ್ನುವುದು ಒಂದು 'ಪವಾಡ'ವೇ ಸರಿ.

ಇನ್ನು, ಶಾಲೆಯಲ್ಲಿನ ಕಲಿಕೆ ಮುಂದಿನ ಜೀವನದಲ್ಲಿ ಪ್ರಯೋಜನಕ್ಕೆ ಬರುವ ವಿಚಾರವನ್ನು ನೋಡೋಣ. ಏಸರ್ ಸಮೀಕ್ಷೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಲ್ಲಿ, ಇಷ್ಟು ಗಂಟೆಗೆ ಮಲಗಿದ ಮಗು ಇಷ್ಟು ಗಂಟೆಗೆ ಎದ್ದಿತು ಎಂದಾದರೆ, ಅದು ಒಟ್ಟು ಎಷ್ಟು ಗಂಟೆ ನಿದ್ರೆ ಮಾಡಿತು ಎಂದು ಲೆಕ್ಕಹಾಕಿ ಹೇಳಲು ಶೇ 45ರಷ್ಟು ಮಕ್ಕಳಿಗೆ ಮಾತ್ರ ಸಾಧ್ಯವಾಯಿತು. ಒಂದು ಅಳತೆಪಟ್ಟಿಯ ಮೇಲೆ ಒಂದು ವಸ್ತುವನ್ನು '0'ಯಿಂದ ಇರಿಸಿ, ಅದು ಎಷ್ಟು ಇಂಚು ಉದ್ದ ಇದೆ ಹೇಳಿ ಎಂದರೆ, ಶೇ 85ರಷ್ಟು ಮಕ್ಕಳು ಸರಿಯಾಗಿ ಹೇಳಿದರು. ಅದೇ ವಸ್ತುವನ್ನು ಸ್ಕೇಲಿನ ಮೇಲೆ ಬೇರೆ ಕಡೆ ಇಟ್ಟು ಕೇಳಿದಾಗ, ಶೇ 40ರಷ್ಟು ಮಕ್ಕಳು ಮಾತ್ರ ಸರಿಯಾಗಿ ಹೇಳಿದರು. ನಿರ್ಜಲೀಕರಣ ನಿವಾರಣೆಗೆ (ಡೀಹೈಡ್ರೇಷನ್) ಕೊಡುವ ಓಆರ್‌ಎಸ್ ಪ್ಯಾಕೆಟ್‌ನ ಮೇಲೆ, ಅದನ್ನು ಬಳಸಲು ಕೊಟ್ಟಿರುವ ಸೂಚನೆಗಳನ್ನು ಓದಲು ಹೇಳಿದಾಗ, 11ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಶೇ 65.1ರಷ್ಟು ಮಕ್ಕಳಿಗೆ ಮಾತ್ರ ಓದಲು ಸಾಧ್ಯವಾಯಿತು.



ಯಾವುದೇ ದೇಶದ ಯುವಜನ, ಲೋಕತಂತ್ರದ ಪೋಷಕರು ಮತ್ತು ಸಂರಕ್ಷಕರು. ಒಂದು ಅಂದಾಜಿನ ಪ್ರಕಾರ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸುಮಾರು 15 ಕೋಟಿ ಯುವಜನ ತಮ್ಮ ಮೊದಲ ಮತಾಧಿಕಾರವನ್ನು ಚಲಾಯಿಸಲಿದ್ದಾರೆ. ಎಲ್ಲಾ ಪಕ್ಷದವರು ತಮ್ಮ ಗೆಲುವಿಗಾಗಿ ಈ ನಾಗರಿಕ ವರ್ಗದ ಮೇಲೆ ಕಣ್ಣಿಟ್ಟಿರುತ್ತಾರೆ. ಇವರನ್ನು ಓಲೈಸಲು ಹಲವಾರು ತಂತ್ರಗಳನ್ನು ಹೂಡುತ್ತಾರೆ. ಮೇಲೆ ಉಲ್ಲೇಖಿಸಿದ ಸಮೀಕ್ಷೆಯಲ್ಲಿ ಭಾಗವಹಿಸಿದ ಯುವಜನರಲ್ಲಿ ಲಕ್ಷಾಂತರ ಮಂದಿಗೆ ಮತದ ಹಕ್ಕು ದೊರಕುತ್ತದೆ. ಮೂಲಭೂತ ಶೈಕ್ಷಣಿಕ ಕೌಶಲದ ತೀವ್ರ ಕೊರತೆ ಇರುವ ಈ ಯುವಜನ ಚುನಾವಣೆಯಲ್ಲಿ ಅದ್ಯಾವ ವಿವೇಚನೆಯಿಂದ ಭಾಗವಹಿಸಲು ಸಾಧ್ಯ? ಇಂಥ ಮತದಾರರನ್ನು ಹಲವಾರು ಆಮಿಷಗಳಿಗೆ ಬಲಿಯಾಗಿಸಿ ವೋಟನ್ನು ಗಿಟ್ಟಿಸಲು ಪ್ರತಿಯೊಬ್ಬ ಅಭ್ಯರ್ಥಿ ಹೊಂಚುಹಾಕುತ್ತಾರೆ. ಶಾಲಾ ಶಿಕ್ಷಣವೇ ಇಷ್ಟೊಂದು ಅಧೋಗತಿಯಲ್ಲಿ ಇರುವಾಗ, ಇಂಥ ದುರ್ಬಲ ಬುನಾದಿಯ ಮೇಲೆ ಕಟ್ಟಲಾಗುವ ದೇಶದ ಲೋಕತಂತ್ರವು ಇನ್ನೆಷ್ಟು ಸದೃಢವಾಗಿರಲು ಸಾಧ್ಯ?

ಇದೆಲ್ಲ ಗೊತ್ತಿದ್ದರೂ ಸರ್ಕಾರಗಳು ವರ್ಷದಿಂದ ವರ್ಷಕ್ಕೆ ಶಿಕ್ಷಣ ಕ್ಷೇತ್ರಕ್ಕೆ ಒದಗಿಸಬೇಕಾದ ಹೆಚ್ಚು ಹೆಚ್ಚು ಅನುದಾನ, ಮೂಲ ಸೌಕರ್ಯಗಳ ಪೂರೈಕೆ, ಶಿಕ್ಷಕರ ತರಬೇತಿ ಮತ್ತು ನೇಮಕಾತಿಯ ಕಡೆಗೆ ಗಂಭೀರವಾಗಿ ಗಮನಹರಿಸದೇ ಇರುವುದು, ಇದ್ದಷ್ಟು ಅನುದಾನವನ್ನೇ ಕಡಿತಗೊಳಿಸುವುದು ದೀರ್ಘಾವಧಿಯಲ್ಲಿ ಅತ್ಯಂತ ಅಪಾಯಕಾರಿ.

ವಾಚಕರ ವಾಣಿ

ದೊಂಬಿದಾಸ ಸಮುದಾಯದತ್ತ ಇರಲಿ ಚಿತ್ತ

ಪರಿಶಿಷ್ಟ ಜಾತಿಯಲ್ಲಿನ ವಿವಿಧ ಸಮುದಾಯಗಳಿಗೆ ಒಳಮೀಸಲಾತಿ ಕಲ್ಪಿಸುವ ಸಂಬಂಧ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ರಾಜ್ಯ ಸರ್ಕಾರ ಮುಂದಾಗಿರುವುದಾಗಿ ವರದಿಯಾಗಿದೆ. ಇದನ್ನು ಓದಿದಾಗ, ಈ ನಾಡಿನ ಸಾಂಸ್ಕೃತಿಕ ರಾಯಭಾರಿಗಳಂತಿದ್ದು ಇಂದು ತಬ್ಬಲಿಗಳಂತೆ ಅಲೆಮಾರಿಗಳಾಗಿ ಜೀವನ ಸಾಗಿಸುತ್ತಿರುವ ದೊಂಬಿದಾಸ ಸಮುದಾಯದವರು ನೆನಪಾದರು. ನಾಡಿನಲ್ಲಿ ಸಾವಿರ ಸಂಖ್ಯೆಯಲ್ಲಿರುವ ಈ ಸಮುದಾಯವು ನಾಟಕ, ಹರಿಕತೆ, ಲಾವಣಿಯಂತಹವುಗಳ ಮೂಲಕ ಜನಪದ ಕಲೆಗಳಿಗೆ ಧ್ವನಿಯಾಗಿದೆ. ಆದರೆ ಇಂದು ತಮ್ಮ ಹಕ್ಕುಗಳಿಗೆ ಧ್ವನಿಯೆತ್ತಲಾಗದ ಅಸಹಾಯಕ ಸ್ಥಿತಿಯಲ್ಲಿದೆ. ಹಿಂದುಳಿದ ವರ್ಗಗಳ ಪ್ರವರ್ಗ 1ರಲ್ಲಿ ಪ್ರಬಲ ಜಾತಿಗಳೊಂದಿಗೆ ಸೇರ್ಪಡೆಯಾಗಿರುವ ಈ ಸಮುದಾಯವು ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ಸವಲತ್ತುಗಳಿಂದ ವಂಚಿತವಾಗಿದೆ.

ಈ ಸಮುದಾಯದ ಬಗ್ಗೆ ಧಾರವಾಡ ವಿಶ್ವವಿದ್ಯಾಲಯದಿಂದ ಈಗಾಗಲೇ ಕುಲಶಾಸ್ತ್ರೀಯ ಅಧ್ಯಯನ ನಡೆದಿದೆ. ಇದನ್ನು ಸರ್ಕಾರ ಪರಿಶೀಲಿಸಿ, ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕಾದ ತುರ್ತಿದೆ. ಮೀಸಲಾತಿ ಎಂಬುದು ಬಡತನ ನಿರ್ಮೂಲನ ಕಾರ್ಯಕ್ರಮವಲ್ಲ, ಜಾತಿ ವಿನಾಶದ ಕಾರ್ಯಕ್ರಮವೂ ಅಲ್ಲ. ಅದು, ಸಾಮಾಜಿಕ ಪ್ರಾತಿನಿಧ್ಯ ವಂಚಿತ ಜನರಿಗೆ ಪ್ರಾತಿನಿಧ್ಯ ಕಲ್ಪಿಸುವ ಮಾನವ ಹಕ್ಕು, ಜೊತೆಗೆ ಸಂವಿಧಾನದ ಹಕ್ಕು. ಇದರ ಅರಿವಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಗ್ಗೆ ಕಾಳಜಿ ವಹಿಸಿ, ಈ ತೆರನಾದ ತಬ್ಬಲಿ ಸಮುದಾಯಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲಿ. ಈ ಮೂಲಕ, ಪ್ರತಿ ವ್ಯಕ್ತಿಯೂ ಆತ್ಮಗೌರವದಿಂದ ಜೀವನ ಸಾಗಿಸುವಂತೆ ಆಗಬೇಕೆಂಬ ಸಂವಿಧಾನದ ಆಶಯವನ್ನು ಈಡೇರಿಸಲಿ.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

ಬದಲಾಗದಿರಲಿ

ನೆನಪಾಗುತ್ತಾರೆ ನಾಯಕರಿಗೆ
ಚುನಾವಣಾ ಹೊಸ್ತಿಲಲ್ಲಿ
ಶ್ರೀರಾಮ, ಬಸವಣ್ಣ,
ಗೆದ್ದ ಮೇಲೆ ಪಾಲಿಸಿ
ಅವರ ಆದರ್ಶಗಳನ್ನು
ಬದಲಿಸದೇ ಬಣ್ಣ!

ಮಹಾಂತೇಶ ಮಾಗನೂರ
ಬೆಂಗಳೂರು

ಶಿಕ್ಷಕರ ಮುಂದೊಂದು ಮಾದರಿ ನಡೆ

ಕಲಬುರಗಿ ಜಿಲ್ಲೆಯ ತೋನಸನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ನಜೀರ್ ಅಹ್ಮದ್ ಅವರು, ಕಲಿಕೆಯಿಂದ ದೂರವುಳಿದ ಮಕ್ಕಳನ್ನು ಆಕರ್ಷಿಸಲು ಮಾಡಿರುವ ಪ್ರಯತ್ನಗಳು (ಪ್ರ.ವಾ., ಜ. 19) ಅನನ್ಯವಾದವು, ಮೌಲಿಕವಾದವು.

ಎಂಟು ಮಕ್ಕಳು ಹಾಜರಾಗುತ್ತಿದ್ದ ಶಾಲೆಗೆ ಇದೀಗ 20 ಮಕ್ಕಳು ಉತ್ಸಾಹದಿಂದ ಸೇರಿಕೊಳ್ಳಬೇಕಾದರೆ ಈ ಶಿಕ್ಷಕ ಏನು ಮಾಡಿದರು ಗೊತ್ತೇ? ನಿರುಪಯೋಗಿ ಪರಿಕರಗಳಿಂದ ಬಣ್ಣ ಬಣ್ಣದ ಆಟಿಕೆಗಳನ್ನು ತಯಾರಿಸಿದರು, ಶಾಲಾ ಕೊಠಡಿಗಳನ್ನು ಸಿಂಗರಿಸಿದರು, ಮಕ್ಕಳನ್ನು ರಮಿಸಿ, ಪ್ರೀತಿಸಿ ಕರೆತಂದರು. ಅದಕ್ಕಾಗಿ ಸರ್ಕಾರದ ನೆರವಿಗೆ ಕೈಚಾಚದೆ ಸ್ವಯಂಪ್ರೇರಣೆಯಿಂದ ₹ 1.6 ಲಕ್ಷ ಸ್ವಂತ ಹಣವನ್ನು ವೆಚ್ಚ ಮಾಡಿದ್ದು ಸಣ್ಣ ಸೇವೆಯಲ್ಲ, ಬೆಲೆ ಕಟ್ಟಲಾಗದಂತಹ ಸೇವೆ. ಹೀಗೆ ಅವರು ನಮ್ಮ ಕನ್ನಡ ಶಾಲಾ ಶಿಕ್ಷಕರ ಮುಂದೆ ಒಂದು ಮಾದರಿಯನ್ನು ಇಟ್ಟಿದ್ದಾರೆ. ಇದು, ನಿಜವಾದ ಸಮಾಜಸೇವೆ.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಹೆಣ್ಣಿನ ಅಸ್ಮಿತೆಗೆ ಸಡ್ಡು ಹೊಡೆದ ಪುರುಷ ಧ್ವನಿ

ಆರೋಗ್ಯ ಇಲಾಖೆಯು 'ಶುಚಿ' ಯೋಜನೆಯಡಿ ಜಾರಿಗೆ ತಂದಿರುವ 'ನನ್ನ ಮೈತ್ರಿ' ಮುಟ್ಟಿನ ಕಪ್ ವಿತರಣೆ ಕಾರ್ಯಕ್ರಮ ಸ್ವಾಗತಾರ್ಹ. ಆದರೆ, ಪ್ರತಿದಿನ ಟಿ.ವಿ. ವಾಹಿನಿಗಳಲ್ಲಿ ಪ್ರಸಾರವಾಗುವ ಈ ಸಂಬಂಧದ ಜಾಹೀರಾತು ಗಂಡಸಿನ ಧ್ವನಿಯಲ್ಲಿ ಮೂಡಿಬರುತ್ತಿರುವುದು ಹೆಣ್ಣಿನ ಸೂಕ್ಷ್ಮ ಮನಸ್ಸಿನ ಅಸ್ಮಿತೆಗೆ ಸಡ್ಡು ಹೊಡೆಯುವಂತೆ ಇರುವುದು ವಿಪರ್ಯಾಸ. ಇಲ್ಲೂ ಲಿಂಗ ತಾರತಮ್ಯವೇ?

ಮುಟ್ಟಿನ ಕುರುಹು ಪ್ರತಿಯೊಂದು ಹೆಣ್ಣಿನ ಹೆಮ್ಮೆಯ ಸಂಕೇತ. ಇದು ಪ್ರಕೃತಿಯ ಸಹಜ ವರದಾನ. ಪ್ರಸಾರವಾಗುತ್ತಿರುವ ಜಾಹೀರಾತಿನ ಆ ಗಂಡಸಿನ ಧ್ವನಿಯ ಬದಲು ಹೆಣ್ಣೊಂದು ಹೆಣ್ಣಿಗಾಗಿ ಆರ್ದ್ರತೆ ಮತ್ತು ಆಪ್ಯಾಯಮಾನವಾಗಿ ಹೇಳಿದರೆ, ಹೆಚ್ಚಿನ ಹೆಣ್ಣುಮಕ್ಕಳು ಇದರ ಸದುಪಯೋಗಕ್ಕೆ ಮುಂದಾಗಬಹುದೇನೊ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇತ್ತ ಗಮನಹರಿಸುವುದೇ?

ಪದ್ಮಜಾ ಪ್ರಸನ್ನ, ಬೆಂಗಳೂರು

ಶ್ವಾನಗಳ ಪೋಷಣೆ: ಪೊಲೀಸರ ಅನನ್ಯ ಕಾರ್ಯ

ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ ಶ್ವಾನಗಳು ವೃದ್ಧಾಪ್ಯ ಅಥವಾ ಇತರ ಕಾರಣಗಳಿಂದ ಕರ್ತವ್ಯ ನಿರ್ವಹಿಸಲು ಅನರ್ಹಗೊಂಡಾಗ, ಅವುಗಳ ಪಾಲನೆ, ಪೋಷಣೆಗಾಗಿ ಗುಜರಾತ್‌ನ ಆನಂದ್ ಜಿಲ್ಲೆಯಲ್ಲಿ 'ನಿವೃತ್ತ ಪೊಲೀಸ್ ಶ್ವಾನಗಳ ವಿಶ್ರಾಂತಿ ಧಾಮ'ವನ್ನು ಆರಂಭಿಸಿರುವುದು (ಪ್ರ.ವಾ., ಜ. 18) ನಿಜಕ್ಕೂ ಮಾದರಿ ನಡೆ. ಈ ಬಗೆಯ 'ಶ್ವಾನಗಳ ನಿವೃತ್ತಿ ಧಾಮ'ಗಳು ದೇಶದೆಲ್ಲೆಡೆ ಪ್ರಾರಂಭವಾಗಲು ಇದು ಪ್ರೇರಣೆ ನೀಡುತ್ತದೆ. ಗಂಡ ಅಥವಾ ಹೆಂಡತಿ ದುಡಿಯುವ ಕಾಲದಲ್ಲಿ ಪರಸ್ಪರ ಪ್ರೀತಿಸುವಂತೆ ನಟಿಸಿ, ಮೂಲೆ ಹಿಡಿದಾಗ ಕಾಲಕಸದಂತೆ ಕಾಣುವುದನ್ನು ಹಾಗೂ ಮಕ್ಕಳಿಗಾಗಿ ಹಗಲಿರುಳು ದುಡಿದ ತಂದೆ-ತಾಯಿ ವಯಸ್ಸಾದ ಕಾಲಕ್ಕೆ ಅವರಿಂದ ಅನಾದರಕ್ಕೆ ಒಳಗಾಗಿ, ಜೀವ ಹೋಗುವ ಗಳಿಗೆಯನ್ನು ಎದುರು ನೋಡುತ್ತಾ ದೇವಸ್ಥಾನದಲ್ಲೋ ಛತ್ರದಲ್ಲೋ ವೃದ್ಧಾಶ್ರಮದಲ್ಲೋ ಕಾಲ ನೂಕುವಂಥ ಪರಿಸ್ಥಿತಿ ಈ ಸಮಾಜದಲ್ಲಿದೆ. ಹೀಗಿರುವಾಗ, ನಿವೃತ್ತವಾದ, ಸೇವೆಗೆ ಬಳಸಲು ಅನರ್ಹವಾದ ಶ್ವಾನಗಳಿಗೆ ಪುನರ್ವಸತಿ ಕಲ್ಪಿಸಿರುವುದು ಪ್ರಶಂಸನೀಯ ನಡೆ. ಅವುಗಳಿಗೆ ಹೊತ್ತುಹೊತ್ತಿಗೆ ಹಾಲು, ಅನ್ನ, ಮೊಟ್ಟೆಯ ಊಟ, ವೈದ್ಯಕೀಯ ತಪಾಸಣೆ, ಅವು ಆಟ ಆಡುವುದಕ್ಕೆ ಅವಕಾಶ ಎಲ್ಲವನ್ನೂ ಕಲ್ಪಿಸಿರುವ ಈ ಯೋಜನೆಯನ್ನು ಜಾರಿಗೆ ತಂದ ಅಲ್ಲಿನ ಪೊಲೀಸ್ ಅಧಿಕಾರಿಗಳು ಅಭಿನಂದನಾರ್ಹರು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಎಂಟು ದಶಕಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿ ಕರ್ನಾಟಕ ತಂಡವು ಟ್ರೋಫಿ ಗೆದ್ದಿತು. ಶಿವಮೊಗ್ಗದಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಅಜೇಯ 404 ರನ್ ಗಳಿಸಿದ ಪ್ರಖರ್ ಚತುರ್ವೇದಿ, ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಈ ಹಾದಿಯಲ್ಲಿ ಅವರು 25 ವರ್ಷಗಳ ಹಿಂದೆ ಯುವರಾಜ್ ಸಿಂಗ್ ಮಾಡಿದ್ದ ದಾಖಲೆಯನ್ನೂ ಮುರಿದರು. ಅಲ್ಲದೇ ಈ ಟೂರ್ನಿಯ ಇತಿಹಾಸದಲ್ಲಿ ನಾಲ್ಕುನೂರಕ್ಕಿಂತಲೂ ಹೆಚ್ಚು ರನ್ ಗಳಿಸಿದ ಎರಡನೇ ಆಟಗಾರನಾದರು

‘ಇದು ಆರಂಭವಷ್ಟೇ, ಸಾಧಿಸುವುದು ಬಹಳಷ್ಟಿದೆ’

ಅಜೇಯ 404 ರನ್‌ಗಳ ದಾಖಲೆ ಬರೆದ ಪ್ರಖರ್ ಚತುರ್ವೇದಿಯ ಮನದಾಳ

● ಗಿರೀಶ ದೊಡ್ಡಮನಿ



‘19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಲಭಿಸಲಿಲ್ಲ. ವಿನೂ ಮಂಕಡ್ ಟ್ರೋಫಿ ಟೂರ್ನಿಯಲ್ಲಿ ನನ್ನ ಸಾಧನೆ ಕಡಿಮೆ ಇತ್ತು. ಆದರೆ ಈ ವಿಶ್ವಕಪ್ ಟೂರ್ನಿಯಲ್ಲಿ ಆಡದಿದ್ದರೂ ದಿಗ್ಗಜರಾಗಿರುವ ಆಟಗಾರರು ಹಲವರಿದ್ದಾರೆ. ಮಹೇಂದ್ರಸಿಂಗ್ ಧೋನಿ ಅವರು ಉತ್ತಮ ಉದಾಹರಣೆ. ಆಗಿದ್ದು ಆಗಿಹೋಯಿತು. ಮುಂದಿನ ಗುರಿ ಸಾಧಿಸಬೇಕು ಎಂದು ನಿರ್ಧರಿಸಿದೆ. ಮತ್ತಷ್ಟು ಕಠಿಣ ಪರಿಶ್ರಮಪಟ್ಟೆ. ಈ ಸಾಧನೆ ಸಾಧ್ಯವಾಯಿತು’–

ಶಿವಮೊಗ್ಗದಲ್ಲಿ ಈಚೆಗೆ ನಡೆದ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮುಂಬೈ ಎದುರು ಅಜೇಯ 404 ರನ್ ಗಳಿಸಿ ದಾಖಲೆ ಮಾಡಿದ ಕರ್ನಾಟಕ ತಂಡದ ಪ್ರಖರ್ ಚತುರ್ವೇದಿ ನುಡಿಗಳಿವು. ಈ ಟೂರ್ನಿಯ ಎಂಟು ದಶಕಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕರ್ನಾಟಕ ಟ್ರೋಫಿ ಜಯಿಸಲು ಅವರ ಆಟವೂ ಪ್ರಮುಖವಾಗಿತ್ತು.

ಮೂಲತಃ ಮಧ್ಯಪ್ರದೇಶದವರಾದ ಸಂಜಯಕುಮಾರ್ ಚತುರ್ವೇದಿ ಹಾಗೂ ರೂಪಾ ದಂಪತಿಯ ಮಗ ಪ್ರಖರ್. ಸಂಜಯಕುಮಾರ್ ಅವರು ಸಾಫ್ಟ್‌ವೇರ್ ಉದ್ಯಮಿ ಹಾಗೂ ರೂಪಾ ಅವರು ಡಿ.ಆರ್.ಡಿ.ಒದಲ್ಲಿ ತಾಂತ್ರಿಕ ಅಧಿಕಾರಿಯಾಗಿದ್ದಾರೆ. ಉನ್ನತ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ಕೊಟ್ಟ ಕುಟುಂಬದಲ್ಲಿ ಕ್ರಿಕೆಟಿಗರು ಇರಲಿಲ್ಲ. ಓದಿನಲ್ಲಿಯೂ ಉತ್ತಮವಾಗಿದ್ದ ಪ್ರಖರ್ ಕ್ರಿಕೆಟಿಗನಾಗುವತ್ತ ಒಲವು ತೋರಿದಾಗ ತಂದೆ, ತಾಯಿ ಪೂರ್ಣ ಬೆಂಬಲ ನೀಡಿದರು.

ಪ್ರಖರ್ ಈ ದಾಖಲೆಯ ಹಾದಿಯಲ್ಲಿ ದಿಗ್ಗಜ ಕ್ರಿಕೆಟಿಗ ಯುವರಾಜ್ ಸಿಂಗ್ ಅವರು 25 ವರ್ಷಗಳ ಹಿಂದೆ ನಿರ್ಮಿಸಿದ್ದ ದಾಖಲೆಯನ್ನೂ ಮುರಿದರು. ಎಂಟನೇ ವಯಸ್ಸಿನಲ್ಲಿ ಕ್ರಿಕೆಟ್ ಬ್ಯಾಟ್ ಹಿಡಿದ ಪ್ರಖರ್, ತಮ್ಮ ಇಲ್ಲಿಯವರೆಗಿನ ಪಯಣದ ಬಗ್ಗೆ ‘ಪ್ರಜಾವಾಣಿ’ಯೊಂದಿಗೆ ನಡೆಸಿದ ಮಾತುಕತೆ ಇಲ್ಲಿದೆ.

● ಶಿವಮೊಗ್ಗದಲ್ಲಿ ಕ್ರೀಸ್‌ಗೆ ಬಂದಾಗಲೇ ನಿಮ್ಮ ಮನಸ್ಸಿನಲ್ಲಿ ದಾಖಲೆ ಮಾಡುವ ಗುರಿ ಇತ್ತಾ?

ಹಾಗೇನೂ ಇಲ್ಲ. ಆದರೆ 100, 200, 300 ರನ್‌ಗಳನ್ನು ಗಳಿಸುತ್ತಾ ಹೋದಂತೆ ಮತ್ತಷ್ಟು ಬ್ಯಾಟಿಂಗ್ ಮಾಡುವ ಛಲ ಮೂಡಿತು. ರನ್‌ಗಳ ಹಸಿವು ಹೆಚ್ಚಿತು. ಕೊನೆ ದಿನದಾಟದ ಊಟದ ವಿರಾಮದ ಸಂದರ್ಭದಲ್ಲಿ ಯುವರಾಜ್ ಸಿಂಗ್ ಅವರ ದಾಖಲೆ ಮೀರುವ ಅವಕಾಶ ಇದೆ ಎಂದು ಕೆಲ ಸ್ನೇಹಿತರು ಮಾಹಿತಿ ನೀಡಿದರು. ಮುಂದೆ ನಡೆದಿದ್ದು ಇತಿಹಾಸ.

ಪ್ರಜಾವಾಣಿ ಸಂದರ್ಶನ

ಪ್ರಖರ್ ಚತುರ್ವೇದಿ

● ನೀವು ದಾಖಲೆ ಮಾಡಿದ ಪಿಚ್ ಹೇಗಿತ್ತು. ಮುಂಬೈ ಬೌಲಿಂಗ್ ದಾಳಿ ದುರ್ಬಲವಾಗಿತ್ತೇ?

ಪಿಚ್ ಉತ್ತಮವಾಗಿತ್ತು. ಇನ್ನು ಮುಂಬೈನ ಯಾವುದೇ ತಂಡವಿದ್ದರೂ ಅದು ಬಲಿಷ್ಠವೇ ಆಗಿರುತ್ತದೆ. ಉತ್ತಮ ವೇಗದ ಮತ್ತು ಸ್ಪಿನ್ ಬೌಲರ್‌ಗಳಿದ್ದರು. ಫೀಲ್ಡಿಂಗ್ ನಿಯೋಜನೆಯ ತಂತ್ರಕ್ಕೆ ಅನುಗುಣವಾಗಿ ಶಿಸ್ತಿನ ದಾಳಿ ನಡೆಸಿದರು. ಆದರೆ ಒಮ್ಮೆ ಕ್ರೀಸ್‌ನಲ್ಲಿ ಸೆಟ್ ಆದ ಮೇಲೆ ದೊಡ್ಡ ಮೊತ್ತ ಗಳಿಸಬೇಕು. ಕೇವಲ ಶತಕ, ದ್ವಿಶತಕಕ್ಕೆ ಯಾಕೆ ತೃಪ್ತರಾಗಬೇಕು. ಆಡುತ್ತಲೇ ಸಾಗಬೇಕೆಂಬುದು ನನ್ನ ಅಭಿಪ್ರಾಯ. ಈ ಟೂರ್ನಿಗೂ ಮುಂಚೆ ಇಲ್ಲಿಯೇ ನಡೆದಿದ್ದ ಅಂತರ ವಲಯ ಟೂರ್ನಿಯಲ್ಲಿ ದ್ವಿಶತಕ (224) ಗಳಿಸಿದ್ದೆ.

● ನೀವು ಆಡಿದ ಕರ್ನಾಟಕ ತಂಡದ ಕೋಚ್ ಮತ್ತಿತರರ ಬೆಂಬಲ ಯಾವ ರೀತಿ ಇತ್ತು?

ಕೋಚ್ ಕೆ.ಬಿ. ಪವನ್ ಅವರ ಸಲಹೆಗಳು ನನಗೆ ಉಪಯುಕ್ತವಾದವು. ಟೂರ್ನಿಗೂ ಮುನ್ನ ಅವರು ಎರಡು ಸಲಹೆಗಳನ್ನು ಕೊಟ್ಟಿದ್ದರು. ಮೊದಲನೆಯದಾಗಿ; ನಾನು ಇನ್‌ಸ್ವಿಂಗ್ ಎಸೆತಗಳನ್ನು ಫ್ಲಿಕ್ ಮಾಡಲು ಪ್ರಯತ್ನಿಸಿ ಎಲ್‌ಬಿಡಬ್ಲ್ಯು ಆಗುತ್ತಿದ್ದೆ. ಅದನ್ನು ಗಮನಿಸಿದ್ದ ಅವರು ಓಪನಿಂಗ್ ಮಾಡುವಾಗ ಫ್ಲಿಕ್ ಬೇಡ. ಆನ್‌ಡ್ರೈವ್ ಆಡಲು ಪ್ರಯತ್ನಿಸು ಎಂದಿದ್ದರು. ಎರಡನೆಯದಾಗಿ; ನಾನು ಮೂಲತಃ ಆಕ್ರಮಣಕಾರಿ ಶೈಲಿಯ ಬ್ಯಾಟರ್. ದೀರ್ಘ ಮಾದರಿಯಲ್ಲಿ ಶಾಂತಚಿತ್ತವಾಗಿ ಆಡುವುದನ್ನು ರೂಢಿಸಿಕೊಳ್ಳಲು ಹೇಳಿದರು. ಈ ಎರಡೂ ಸಲಹೆಗಳು ನನ್ನ ಯಶಸ್ಸಿಗೆ ಕಾರಣವಾದವು. ಇನ್ನು ಇಡೀ ತಂಡ ಮತ್ತು ನೆರವು ಸಿಬ್ಬಂದಿಯ ಬೆಂಬಲ ಬಹಳಷ್ಟಿದೆ. ದೀರ್ಘ ಇನಿಂಗ್ಸ್ ಆಡಲು ನೆರವಾದ ಫಿಸಿಯೊಗಳು ಹಾಗೂ ತಂಡಕ್ಕೆ ಆಯ್ಕೆ ಮಾಡಿದ ಸಮಿತಿಗೆ ಆಭಾರಿಯಾಗಿದ್ದೇನೆ.

● ತಂಡದ ನಾಯಕನ ಸಹಕಾರ ಹೇಗಿತ್ತು?

ಧೀರಜ್ ಗೌಡ ನಿಜಕ್ಕೂ ಉತ್ತಮ ನಾಯಕ ಮತ್ತು ಅಮೋಘ ಆಟಗಾರ. ನನ್ನನ್ನು ಪ್ರತಿ ಹಂತದಲ್ಲಿಯೂ ಪ್ರೋತ್ಸಾಹಿಸಿದರು. ಅವರು ಬಲಗೈ ಮತ್ತು ಎಡಗೈ ಎರಡರಲ್ಲೂ ಬೌಲಿಂಗ್ ಮಾಡುತ್ತಾರೆ. ಹುಬ್ಬಳ್ಳಿಯಲ್ಲಿ ನಡೆದಿದ್ದ ಈ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಮಧ್ಯಪ್ರದೇಶದ ಎದುರು ಧೀರಜ್ ಅಮೋಘ ಶತಕ ಹೊಡೆದಿದ್ದರು. ಆ ಪಿಚ್‌ನಲ್ಲಿ ಬ್ಯಾಟಿಂಗ್ ಮಾಡುವುದು ತುಂಬಾ ಸವಾಲಿನದ್ದಾಗಿದ್ದರೂ ಅವರು ಈ ಸಾಧನೆ ಮಾಡಿದ್ದರು.

● ನಿಮಗೆ ಕ್ರಿಕೆಟ್ ಮೇಲೆ ಪ್ರೀತಿ ಆರಂಭವಾಗಿದ್ದು ಯಾವಾಗ?

ಎಂಟೂವರೆ ವರ್ಷದವನಿದ್ದಾಗ ಟಿ.ವಿಯಲ್ಲಿ ನಡೆಯುತ್ತಿದ್ದ ಪಂದ್ಯವೊಂದರಲ್ಲಿ ವೀರೇಂದ್ರ ಸೆಹ್ವಾಗ್ ಅವರ ಬ್ಯಾಟಿಂಗ್ ನೋಡಿ ಮನಸೋತೆ. ಅವರಂತೆ ಬ್ಯಾಟಿಂಗ್ ಮಾಡಲು ಪ್ರಯತ್ನಿಸುತ್ತಿದ್ದೆ. ಆಗ ಕೋಚ್ ರಂಜನ್ ಅವರ ಬಳಿ ನನ್ನನ್ನು ಅಪ್ಪ ಸೇರಿಸಿದರು. ಸುಮಾರು ನಾಲ್ಕು ವರ್ಷ ಅವರ ಬಳಿ ತರಬೇತಿ ಪಡೆದೆ. ನಂತರ ನನಗೆ ಉನ್ನತಮಟ್ಟದ ತರಬೇತಿಗಾಗಿ ರಂಜನ್ ಅವರೇ ಪ್ರಕಾಶ್ ಪಡುಕೋಣೆ–ರಾಹುಲ್ ದ್ರಾವಿಡ್ ಕ್ರೀಡಾ ಕೇಂದ್ರದಲ್ಲಿರುವ ಸಿಕ್ಸ್ ಕ್ರಿಕೆಟ್ ಅಕಾಡೆಮಿಗೆ ಕರೆದುಕೊಂಡು ಹೋದರು. ಅಲ್ಲಿ ಕೋಚ್ ಕಾರ್ತಿಕ್ ಜೆಶ್ವಂತ್ ಅವರ ಮಾರ್ಗದರ್ಶನ ಪಡೆಯುತ್ತಿದ್ದೇನೆ.

● ನಿಮ್ಮನ್ನು ಪ್ರಭಾವಿಸಿದ ಕ್ರಿಕೆಟಿಗ ಯಾರು?

ನನ್ನನ್ನು ಅಪಾರವಾಗಿ ಪ್ರಭಾವಿಸಿದ ಆಟಗಾರ ವೆಸ್ಟ್ ಇಂಡೀಸ್ ದಿಗ್ಗಜ ವಿವಿಯನ್ ರಿಚರ್ಡ್ಸ್ ಅವರು. ಆ ಕಾಲದಲ್ಲಿ ತೆಳುವಾದ ಬ್ಯಾಟ್‌ನಿಂದ ಅವರು 150 ಕಿ.ಮೀ ವೇಗದ ಎಸೆತಗಳನ್ನು ಸಲೀಸಾಗಿ ಸಿಕ್ಸರ್‌ಗೆ ಎತ್ತುತ್ತಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ಹೆಲ್ಮೆಟ್ ಹಾಕುತ್ತಿರಲಿಲ್ಲ. ಬೌನ್ಸರ್‌ಗಳನ್ನು ಪುಲ್ ಮಾಡುತ್ತಿದ್ದರು. ಹೆಲ್ಮೆಟ್ ಇಲ್ಲದೇ ಆಡಲು ಅಪಾರ ಏಕಾಗ್ರತೆ ಮತ್ತು ಎದೆಗಾರಿಕೆ ಇರಬೇಕು. ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಅವರ ಆಟವೂ ನನಗಿಷ್ಟ.

● ಮುಂದಿನ ಗುರಿ ಏನು?

ಈ ದಾಖಲೆಯು ನನ್ನ ಮುಂದೆ ಇರುವ ಹಲವು ಗುರಿಗಳನ್ನು ಸಾಧಿಸಲು ಪ್ರೇರಣೆ. ಎಲ್ಲರಿಗೂ ಇರುವಂತೆ ನನಗೂ ಭಾರತ ತಂಡದಲ್ಲಿ ಆಡುವ ಗುರಿ ಇದೆ. ಅಲ್ಲದೇ ವೈಟ್ ಬಾಲ್ ಕ್ರಿಕೆಟ್ ಅಭ್ಯಾಸದತ್ತಲೂ ಈಗ ಗಮನ ಹರಿಸುತ್ತೇನೆ.

● ಓದು ಮತ್ತು ಕ್ರಿಕೆಟ್ ನಡುವೆ ಸಮತೋಲನ ಹೇಗೆ ಸಾಧಿಸುತ್ತೀರಿ?

ನನ್ನ ಇಡೀ ದಿನದ ಬಹುತೇಕ ಸಮಯ ಕ್ರಿಕೆಟ್‌ಗೇ ಮೀಸಲು. ರಾತ್ರಿ ಸಿಗುವ ಒಂದೆರಡು ಗಂಟೆಗಳಲ್ಲಿ ಓದುತ್ತೇನೆ. ಈ ವರ್ಷ ಬಿ.ಎ. ಅರ್ಥಶಾಸ್ತ್ರ ಕೋರ್ಸ್‌ಗೆ ಸೇರಿಕೊಂಡಿದ್ದೇನೆ. ಮನೆಯಲ್ಲಿ ಅಪ್ಪ, ಅಮ್ಮ ಮತ್ತು ತಂಗಿ ಬಹಳಷ್ಟು ಪ್ರೋತ್ಸಾಹ ನೀಡುತ್ತಾರೆ. ನನಗಾಗಿ ವಿಶೇಷ ಆಹಾರ ಸಿದ್ಧಪಡಿಸಲು ಅಮ್ಮ ಬಹಳಷ್ಟು ಶ್ರಮಪಡುತ್ತಾರೆ. ❖


ಯುವರಾಜ್ ಸಿಂಗ್ ಭೇಟಿಯ ಪುಳಕ

ಗುರುವಾರ ಬೆಂಗಳೂರಿಗೆ ಕಾರ್ಯಕ್ರಮವೊಂದಕ್ಕೆ ಬಂದಿದ್ದ ಮಾಜಿ ಕ್ರಿಕೆಟಿಗ ಯುವರಾಜ್ ಸಿಂಗ್ ಅವರು ತಮ್ಮ ಹಳೆಯ ದಾಖಲೆ ಮುರಿದಿದ್ದ ಪ್ರಖರ್ ಅವರನ್ನು ಭೇಟಿಯಾದರು.

‘ಮೂರು ದಿನಗಳ ಹಿಂದಷ್ಟೇ ಅವರ ದಾಖಲೆ ಮುರಿದಿದ್ದೆ. ಅಷ್ಟರಲ್ಲಿಯೇ ಭೇಟಿಯಾಗುವ ಅವಕಾಶ ಸಿಕ್ಕಿತು. ಅವರು ಕರೆಸಿಕೊಂಡು ಆತ್ಮೀಯವಾಗಿ ಮಾತನಾಡಿದರು’ ಎಂದು ಪ್ರಖರ್ ಸಂತಸ ವ್ಯಕ್ತಪಡಿಸಿದರು.

‘ಯುವಿ ಅವರು ಟಿ20 ಪಂದ್ಯದಲ್ಲಿ ಒಂದೇ ಓವರ್‌ನಲ್ಲಿ ಆರು ಸಿಕ್ಸರ್ ಸಿಡಿಸಿದ್ದು ನನ್ನ ಅಚ್ಚುಮೆಚ್ಚಿನ ಇನಿಂಗ್ಸ್. ಅವರನ್ನೇ ಭೇಟಿಯಾಗಿದ್ದು ಸಂತಸ ನೀಡಿತು’ ಎಂದರು.

‘ಆಗ 350 ರನ್ ಗಳಿಸಲೇ ನಾನು ಸುಸ್ತಾಗಿದ್ದೆ. ನೀನು ಅದ್ಹೇಗೆ 400 ರನ್ ದಾಟಿದೆ ಎಂದೂ ಯುವಿ ಕೇಳಿದರು. ಇಷ್ಟಕ್ಕೆ ನಿಲ್ಲಬೇಡ. ನಿರಂತರವಾಗಿ ಉತ್ತಮ ಇನಿಂಗ್ಸ್‌ಗಳನ್ನು ಆಡು ಎಂದೂ ಹಾರೈಸಿದರು’ ಎಂದು ಪ್ರಖರ್ ಹೇಳಿದರು.



ಕೇಳಲಾಗದ ಮಗುವಿಗೆ ದನಿಯಾಗುವ ಪರಿ

ಕಿವಿ ಕೇಳದ ಮಕ್ಕಳಿಗೆ ಶಿಕ್ಷಕಿಯರೇ ಮಾತು ಕಲಿಸುವುದು ಜಗದ ರೂಢಿ. ಆದರೆ ಅಂತಹ ಮಗುವಿನ ತಾಯಿಯೇ ಮಾತು ಕಲಿಸುವ ಶಿಕ್ಷಕಿಯೂ ಆದರೆ ಚಂದವಲ್ಲವೇ... ಅಂಥದ್ದೊಂದು ಪ್ರಯತ್ನಕ್ಕೆ ಮುನ್ನುಡಿ ಬರೆದ ಮೈಸೂರಿನ ಪಿಎಡಿಸಿಗೆ ಈಗ 43ರ ಹರೆಯ. ಈ ನಾಲ್ಕು ದಶಕ ಮೀರಿದ ಅವಧಿಯಲ್ಲಿ ಸಾವಿರದೈನೂರು ತಾಯಂದಿರು ಇಲ್ಲಿ ತರಬೇತಿ ಪಡೆದಿದ್ದಾರೆ, ತಮ್ಮ ಮಕ್ಕಳಿಗೆ ದನಿ ನೀಡಿದ್ದಾರೆ

● ಸುಕೃತ ಎಸ್.

‘ಮೇಡಮ್, ನನ್ನ ಮಗುವಿಗೆ ಕಿವಿ ಕೇಳುತ್ತಿರಲಿಲ್ಲ. ಆದ ಕಾರಣ ಮಾತೂ ಹೊರಡುತ್ತಿರಲಿಲ್ಲ. ನನ್ನ ಮಗುವನ್ನು ನನ್ನಷ್ಟು ಸರಿಯಾಗಿ ಯಾರು ಅರ್ಥಮಾಡಿಕೊಂಡಾರು ಹೇಳಿ. ನನ್ನ ವಿಶೇಷ ಮಗುವಿಗೆ ತಾಳ್ಮೆಯಿಂದ, ಪ್ರೀತಿಯಿಂದ ನನ್ನ ವಿನಾ ಯಾರು ಹೇಳಿಕೊಡಬಲ್ಲರು. ದಿನ ದಿನವೂ ನನ್ನ ಮಗುವಿನ ಬೆಳವಣಿಗೆಯನ್ನು ನೋಡಿ, ಮಗುವಿನ ಭವಿಷ್ಯದ ಕನಸನ್ನು ಕಣ್ತುಂಬಿಕೊಳ್ಳುತ್ತಿದ್ದೇನೆ. ನನ್ನ ಮಗು ಮುಂದೆ ಡಾಕ್ಟರೋ, ಎಂಜಿನಿಯರೋ ಆಗುವುದನ್ನು ಕಾಣುವಾಸೆ ನನಗೆ...’ ಹೀಗೆನ್ನುತ್ತಾ ಬೆಂಗಳೂರಿನ ಸ್ವಾತಿ ಹಿಗ್ಗಿದ್ದರು. ಬಾಗಲಕೋಟೆಯ ರಾಜಶ್ರೀ ಸುರೇಶಲಾಳಿ ಅವರದ್ದೂ ಇದೇ ಮಾತು.

ಕಿವಿ ಕೇಳದ, ಮಾತು ಬಾರದ ತಮ್ಮ ಮಕ್ಕಳ ಭವಿಷ್ಯದ ಬಗೆಗೆ ಚಿಂತಿತರಾಗುವ ಪೋಷಕರಿಗೆ ಮೈಸೂರಿನ ‘ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್’ ಸಂಸ್ಥೆ ಊರುಗೋಲಾಗಿದೆ. ಕಳೆದ 43 ವರ್ಷಗಳಿಂದಲೂ ಈ ಸಂಸ್ಥೆ ಕಿವುಡು ಮಕ್ಕಳಿಗೆ ಮಾತು ಕಲಿಸುವ ಕೆಲಸ ಮಾಡುತ್ತಿದೆ. ಕೆ.ಕೆ. ಶ್ರೀನಿವಾಸನ್ ಹಾಗೂ ಅವರ ಪತ್ನಿ ರತ್ನಾ ಶ್ರೀನಿವಾಸನ್ ಅವರು ಈ ಸಂಸ್ಥೆಯನ್ನು ಸ್ಥಾಪಿಸಿದರು. ಇವರ ಮಗುವಿಗೆ ಕೂಡ ಕಿವಿ ಕೇಳದ ಸಮಸ್ಯೆ ಇತ್ತು. ಚೆನ್ನೈಗೆ ಹೋಗಿ ಮಗುವಿಗೆ ಮಾತು ಕಲಿಸಿಕೊಂಡು ಬಂದರು. ನಮ್ಮ ಊರಿನ ತಾಯಿ–ತಂದೆಯರಿಗೂ ಈ ಅನುಕೂಲ ಸಿಗಬೇಕು ಎನ್ನುವ ದೃಷ್ಟಿಯಿಂದ ತಮ್ಮ ಮನೆಯಲ್ಲಿಯೇ ನಾಲ್ಕು ಜನ ಮಕ್ಕಳಿಗೆ ಮಾತು ಕಲಿಸುವ ಮೂಲಕ ತಮ್ಮ ಸೇವೆ ಆರಂಭಿಸಿದ್ದರು. ಈಗ ಇದು ದೊಡ್ಡದಾಗಿ ಬೆಳೆದು, ಕರ್ನಾಟಕವಲ್ಲದೆ ಬಿಹಾರ, ಅಸ್ಸಾಂನಿಂದಲೂ ತಾಯಂದಿರು ತಮ್ಮ ಮಕ್ಕಳೊಂದಿಗೆ ಈ ಸಂಸ್ಥೆಗೆ ಸೇರುತ್ತಿದ್ದಾರೆ.

ಈ ಸಂಸ್ಥೆಯಲ್ಲಿ ತಾಯಂದಿರೇ ತಮ್ಮ ಮಕ್ಕಳಿಗೆ ಮಾತು ಕಲಿಸುತ್ತಾರೆ. ಈ ತಾಯಂದಿರಿಗೆ ಸಂಸ್ಥೆಯ ಶಿಕ್ಷಕಿಯರು ಹೇಗೆ ಮಾತು ಕಲಿಸಬೇಕು ಎನ್ನುವುದರ ಕುರಿತು ತರಬೇತಿ ನೀಡುತ್ತಾರೆ. ಇದೇ ಈ ಸಂಸ್ಥೆಯ ವಿಶೇಷತೆ. ‘ಯಾವುದೇ ಮಗುವಿರಲಿ, ತಾಯಿಯೊಂದಿಗೆ ಅವು ಅಂಟಿಕೊಂಡಿರುತ್ತವೆ. ಜೊತೆಗೆ, ತನ್ನ ಮಗುವಿನ ಪ್ರತಿಯೊಂದ ಚಲನೆಯ ಬಗೆಗೆ ತಾಯಿಗೇ ಹೆಚ್ಚು ಅರ್ಥವಾಗುತ್ತದೆ. ಆದಕಾರಣ ಮಾತನ್ನು ಕಲಿಸಲು ತಾಯಿಗಿಂತ ಬೇರೆ ಯಾರು ತಾನೆ ಸೂಕ್ತ ಅಲ್ಲವೇ?’ ಎನ್ನುತ್ತಾರೆ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯೆ ಹಾಗೂ ಇಲ್ಲಿನ ಶಿಕ್ಷಕಿ ರತ್ನಾ ಬಿ. ಶೆಟ್ಟಿ.

ಸಂಸ್ಥೆ ಪರಿಚಯ

ಈ ಸಂಸ್ಥೆಯ ವೈಶಿಷ್ಟ್ಯ ಇನ್ನೊಂದಿದೆ. ಮಕ್ಕಳಿಗೆ ಮಾತು ಕಲಿಸಲು ಪ್ರತ್ಯೇಕ ಪಠ್ಯ ಎಂದೇನಿಲ್ಲ. ಸಂಸ್ಥೆಯ 43 ವರ್ಷದ ಅನುಭವವೇ ಇಲ್ಲಿನ ಪಠ್ಯ. ಶ್ರೀನಿವಾಸನ್ ಅವರಿಂದ ನೇರವಾಗಿ ಕಲಿತ ತಾಯಂದಿರೇ ಕೆಲವರು ಈಗ ಇಲ್ಲಿ ಶಿಕ್ಷಕಿಯರಾಗಿದ್ದಾರೆ. ಇವರೇ ಈಗ ಮುಂದಿನ ಪೀಳಿಗೆಗೂ ತಮ್ಮ ಅನುಭವವನ್ನು ದಾಟಿಸುತ್ತಿದ್ದಾರೆ. ‘ನಾವು ಇಲ್ಲಿ ಮಾತನ್ನು ಹೇಳಿ ಕೊಡುವುದಿಲ್ಲ, ಮಾತು ಕಲಿಸುವ ವಾತಾವರಣವನ್ನು ಸೃಷ್ಟಿ ಮಾಡಿಕೊಡುತ್ತೇವೆ’ ಎಂದು ವಿವರಿಸುತ್ತಾರೆ ರತ್ನಾ. ಇವರು ‘ಕಿವುಡ ಮಕ್ಕಳಿಗೆ ಕಲಿಸುವ ವಿಧಾನ’ ಎನ್ನುವ ಪುಸ್ತಕವನ್ನೂ ಬರೆದಿದ್ದು, ಇದೇ ಪುಸ್ತಕವೇ ಪಠ್ಯದಂತೆ ಮಾರ್ಗದರ್ಶಿಯಾಗಿದೆ.

ಮಕ್ಕಳು ತಮ್ಮ ಮಾತೃಭಾಷೆಯನ್ನೇ ಕಲಿಯಬೇಕು ಎನ್ನುವುದು ಸಂಸ್ಥೆಯ ಉದ್ದೇಶ. ಕಲಿಕೆ ವಾತಾವರಣಕ್ಕೆ ಪೂರಕವಾಗಿ ಇಲ್ಲಿ ಸದ್ಯ ಕನ್ನಡ, ಹಿಂದಿ, ಇಂಗ್ಲಿಷ್, ತೆಲುಗು ಭಾಷೆಗಳಲ್ಲಿ ತಾಯಂದಿರಿಗೆ ಮೂರು ವರ್ಷಗಳಿಗೆ ತರಬೇತಿ ನೀಡಲಾಗುತ್ತದೆ. ಜೊತೆಗೆ, ಇಲ್ಲಿ ಪ್ರತೀ ಮಗುವಿನ ಮೇಲೆ ಪ್ರತ್ಯೇಕ ಗಮನಹರಿಸಲಾಗುತ್ತದೆ. ತಾಯಿಯೇ ಎಲ್ಲವನ್ನೂ ಹೇಳಿಕೊಡುವುದರಿಂದ ಇದು ಸಾಧ್ಯವಾಗಿದೆ. ತಾಯಿ ಇಲ್ಲದ ಅಥವಾ ತಂದೆ–ತಾಯಿಯರಿಬ್ಬರಿಗೂ ಕಿವಿ ಕೇಳುವುದಿಲ್ಲ ಎನ್ನುವ ಸ್ಥಿತಿ ಇದ್ದರೆ, ತಾಯಿಯಂತೆಯೇ ಮಗುವ ಆರೈಕೆ ಮಾಡುವ ಯಾರಾದರೂ ಈ ಸಂಸ್ಥೆಗೆ ಸೇರಬಹುದು. ಸದ್ಯ ಅಜ್ಜಿಯೊಬ್ಬರು ಈ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಶ್ರೀನಿವಾಸನ್ ಅವರು ತಮ್ಮ ಖರ್ಚಿನಿಂದಲೇ ಕೆಲವು ಮಕ್ಕಳಿಗೆ ಮಾತು ಕಲಿಸುವ ಕಾಯಕ ಆರಂಭಿಸಿದ್ದರು. ಬಳಿಕ ಕೆಲವು ಪೋಷಕರು ಆರ್ಥಿಕವಾಗಿ ಸಂಸ್ಥೆಯೊಂದಿಗೆ ಕೈಜೋಡಿಸಿದರು. ಸರ್ಕಾರದ ಯಾವುದೇ ಅನುದಾನವಿಲ್ಲದೇ, ಕೇವಲ ದಾನಿಗಳ ದಾನದಿಂದ ಈ ಸಂಸ್ಥೆ ನಡೆಯುತ್ತಿದೆ. ಸಂಸ್ಥೆಯಲ್ಲಿ 26 ರೂಮುಗಳಿರುವ ಹಾಸ್ಟೆಲ್ ಇದೆ. ಮೊದಲು ಬಂದವರಿಗೆ ಆದ್ಯತೆ.

ಸಂಪರ್ಕ: 9480344297

ನಾವು ನೋಡಿದ ಸಿನಿಮಾ

ರಂಗಸಮುದ್ರ

- **ನಿರ್ದೇಶನ:** ರಾಜ್‌ಕುಮಾರ್ ಅಸ್ಕಿ
- **ನಿರ್ಮಾಣ:** ಹೊಯ್ಸಳ ಕೊಣನೂರು
- **ತಾರಾಗಣ:** ರಂಗಾಯಣ ರಘು, ರಾಘವೇಂದ್ರ ರಾಜಕುಮಾರ್, ಸಂಪತ್‌ರಾಜ್, ಕಾರ್ತಿಕ್ ರಾವ್ ಮುಂತಾದವರು

ಏರಿಳಿತಗಳಿಲ್ಲದ ಸಮುದ್ರ...

ಕರ್ನಾಟಕ–ಮಹಾರಾಷ್ಟ್ರ ಗಡಿಯ ಊರು ‘ರಂಗಸಮುದ್ರ’. ಆ ಊರಿನ ಪಾತ್ರಗಳು, ನಡೆಯುವ ಘಟನೆಗಳೇ ಚಿತ್ರದ ಒಟ್ಟಾರೆ ಕಥೆ. ಒಂದೊಳ್ಳೆ ಪಾತ್ರವರ್ಗ, ಸಾಕಷ್ಟು ಸಾಧ್ಯತೆಗಳಿರುವ ಕಥಾವಸ್ತು, ಉತ್ತಮ ಛಾಯಾಚಿತ್ರಗ್ರಹಣ ಎಲ್ಲವೂ ಜೊತೆಗಿದ್ದೂ ಏರಿಳಿತಗಳಿಲ್ಲದ ಸಮುದ್ರದ ತೀರದಲ್ಲಿನ ಪಯಣದಂತಿರುವ ಸಿನಿಮಾವಿದು!

ಚಿತ್ರದಲ್ಲಿ ಬರವಣಿಗೆ ಎಂಬುದು ಬಹಳ ಮುಖ್ಯ. ಯಾವುದನ್ನು ಹೇಳಬೇಕು ಮತ್ತು ಎಷ್ಟನ್ನು ಹೇಳಬೇಕು ಎಂಬ ಸ್ಪಷ್ಟತೆ ನಿರ್ದೇಶಕರಿಗೆ ಇಲ್ಲದೇ ಹೋದರೆ ಚಿತ್ರ ಹದ ತಪ್ಪಿದ ವಿಚಿತ್ರಾನ್ನವಾಗುತ್ತದೆ. ಊರು ಬಿಟ್ಟು ಹೊರಟ ನಾಲ್ಕು ಚಿಕ್ಕ ಮಕ್ಕಳು ನೇರವಾಗಿ ರಾಘವೇಂದ್ರ ರಾಜಕುಮಾರ್ ಮನೆಗೆ ಬರುತ್ತಾರೆ. ಅಲ್ಲಿಗೆ ಯಾಕೆ ಬಂದರು ಮತ್ತು ಹೇಗೆ ಬಂದರು ಎಂಬುದಕ್ಕೆ ಗಟ್ಟಿಯಾದ ಲಾಜಿಕ್ ಇಲ್ಲ. ರಾಘವೇಂದ್ರ ರಾಜಕುಮಾರ್ ಪಾತ್ರಕ್ಕೂ ಒಂದು ನಿರ್ದಿಷ್ಟತೆ ಇಲ್ಲ. ಅಲ್ಲಿಂದ ಗಡಿನಾಡಿನ ರಂಗಮುದ್ರದ ಕಥೆ ಪ್ರಾರಂಭವಾಗುತ್ತದೆ. ಬಹುಶಃ ಇದು ಮಕ್ಕಳ ಸಿನಿಮಾ ಇರಬೇಕು ಎಂದುಕೊಳ್ಳುವ ಹೊತ್ತಿಗೆ ರಂಗಾಯಣ ರಘು ಪ್ರವೇಶವಾಗುತ್ತದೆ. ಡೊಳ್ಳು ಬಾರಿಸುವ ಸಮುದಾಯದ ನಾಯಕನಾಗಿ ರಘು ಕಾಣಿಸಿಕೊಂಡಿದ್ದಾರೆ. ಇದು ಆ ಕಲೆಯ ಕುರಿತಾದ ಚಿತ್ರವಿರಬಹುದೇ ಎಂಬ ಗ್ರಹಿಕೆಯನ್ನು ಕೂಡ ನಿರ್ದೇಶಕರು ಹುಸಿಯಾಗಿಸುತ್ತಾರೆ.

ರಂಗಾಯಣ ರಘು ಅವರದ್ದು ಸಾಕಷ್ಟು ಸಾಧ್ಯತೆಗಳಿದ್ದ ಒಂದು ಅದ್ಭುತ ಪಾತ್ರ. ಮೊದಲನೇ ದೃಶ್ಯದಲ್ಲೇ ರಂಗಾಯಣ ರಘು ಅದ್ಭುತ ನಟನೆಯೊಂದಿಗೆ ಇಷ್ಟವಾಗಿಬಿಡುತ್ತಾರೆ. ಆದರೆ ಆ ಪಾತ್ರ ಪೋಷಣೆಯಲ್ಲಿ, ಪಾತ್ರವನ್ನು ಗಟ್ಟಿಯಾಗಿ ನಿಲ್ಲಿಸುವಲ್ಲಿ ನಿರ್ದೇಶಕರು ಸಂಪೂರ್ಣವಾಗಿ ವಿಫಲವಾಗುತ್ತಾರೆ. ಇಡೀ ಚಿತ್ರದ ಒಂದೆಳೆ ಅಜ್ಜ ಮತ್ತು ಮೊಮ್ಮಗನ ನಡುವೆ ನಡೆಯುವ ಕಥೆ. ಚಿತ್ರವನ್ನು ಮನರಂಜನಾತ್ಮಕವಾಗಿಸಬೇಕು ಮತ್ತು ಒಂದಷ್ಟು ಸಂದೇಶ ಕೊಡಬೇಕೆಂಬ ನಿರ್ದೇಶಕರ ಉದ್ದೇಶ ಯಶಸ್ವಿಯಾಗಿಲ್ಲ. ಚಿತ್ರಕಥೆಯಲ್ಲಿ ಸಾಕಷ್ಟು ದೃಶ್ಯಗಳು ಬಲವಂತವಾಗಿ ತುರುಕಿದಂತಿವೆ. ಮೊದಲಾರ್ಧದಲ್ಲಿ ಅವನಶ್ಯ ಹಾಡುಗಳು ಹೆಚ್ಚಿವೆ.

ಕರ್ಣನ ಕುರಿತಾಗಿ ಊರಿನಲ್ಲಿ ನಡೆಯುವ ನಾಟಕದ ದೃಶ್ಯ ಮೈನವಿರೇಳಿಸುವಂತಿದೆ ಮತ್ತು ಸಿನಿಮಾ ತಂಡದ ಸಾಮರ್ಥ್ಯವನ್ನು ಸೂಚಿಸುತ್ತದೆ. ಊರಿನ ಜಾತ್ರೆಯ ದೃಶ್ಯ, ಡೋಲಿನ ದೃಶ್ಯಗಳು ಕೂಡ ಹಾಗೆಯೇ. ಆದರೆ ತಂಡದ ಈ ಶಕ್ತಿಯನ್ನು ಸಿನಿಮಾದುದ್ದಕ್ಕೂ ಬಳಸಿಕೊಳ್ಳುವಲ್ಲಿ ನಿರ್ದೇಶಕರು ಎಡವಿದ್ದಾರೆ. ಖಳನಾಯಕನಾಗಿ ಸಂಪತ್‌ರಾಜ್ ನಟನೆ ಖಡಕ್ ಆಗಿದೆ. ಮಂಗಳೂರು ಭಾಷೆ ಮಾತನಾಡುವ ಉಪಾಧ್ಯಾಯರಾಗಿ ಕಾರ್ತಿಕ್ ರಾವ್ ಸಾಕಷ್ಟು ಕಡೆ ‘ಒಂದು ಮೊಟ್ಟೆಯ ಕಥೆ’ಯ ರಾಜ್.ಬಿ.ಶೆಟ್ಟಿ ಅವರನ್ನು ನೆನಪಿಸುತ್ತಾರೆ. ಆದರೆ ಶಾಲೆಯ ವಿಪರೀತ ದೃಶ್ಯಗಳು, ಪ್ರೇಮಕಥೆ, ವಯಸ್ಸಿಗೆ ಮೀರಿದ ಮಕ್ಕಳ ತಮಾಷೆ ಮಾತುಗಳು ಕಿರಿಕಿರಿ ಮೂಡಿಸುತ್ತವೆ. ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಛಾಯಾಚಿತ್ರಗ್ರಹಣ ಸೊಗಸಾಗಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net



‘ರಂಗಸಮುದ್ರ’ದಲ್ಲಿ ರಂಗಾಯಣ ರಘು

ಪದಬಂಧ 5566


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ


1.ಈತ ಕೆಟ್ಟ ನಡತೆಯವನು (4)
3.ಮತದಲ್ಲಿರುವ ಉದ್ದೇಶ (4)
5.ಜಳಕ ಮಾಡಿದ್ದಕ್ಕೇ ಈ ರೋಮಾಂಚನ! (3)
6. ಹೀಗೆ ಸಮಾಧಾನ ಹೊಂದು! (2)
7.ನೆನಪಲ್ಲೇ ಇರುವ ಕಾರಣ (2)
9.ಸರ ಧರಿಸಿ ಆಚರಿಸುವ ನಾಡಹಬ್ಬ (3)
10.ದಾನ ನೀಡುತ್ತಿರುವ ಅಸುರ (3)
12.ತುದಿಯಲ್ಲಿಟ್ಟಿರುವ ಚರ್ಮದ ಊದುಚೀಲ (2)
14. ಏಳು ದಿನಗಳ ಅವಧಿ (2)
15.ಮುತ್ತಿಗೆ ಹಾಕಿದ ಜಾಗದಲ್ಲಿದ್ದ ಪವಿತ್ರ ಮಣ್ಣು (3)
17.ದೇಗುಲದ ಸಭಾಮಂಟಪ (4)
18. ಹಣ್ಣಿನ ಖಾದ್ಯ (4)

ಮೇಲಿಂದ ಕೆಳಕ್ಕೆ

1.ತಟ್ಟಕನೆ ನಡೆದ ಕೆಟ್ಟ ಘಟನೆ (4)
2.ಪುರಿಯಲ್ಲಿ ಅಡಗಿರುವ ವೈರಿ (2)
3.ಕರದಲ್ಲಿ ಶೇಖರಿಸಿರುವುದು ಹೂವಿನ ಸಿಹಿರಸ (4)
4.ನೀರು ಕೊಟ್ಟು ತಣಿಸಿದ ಯವತಿ (3)
6.ಈ ತರ ಸಿದ್ಧಗೊಳಿಸುವಿಕೆ (4)
8.ಅತ್ತೆ ಪರವಾಗಿದ್ದಾನಲ್ಲಾ ಈ ಶೋಧಕ! (4)
11.ವನದಲ್ಲಿರುವ ಕ್ರೂರ ಮೃಗ (4)
13.ತಟ್ಟೆಯಲ್ಲಿ ದಿನವೂ ತೋರುವ ಧೈರ್ಯ (4)
14.ಚತುರನ ಓದುವಿಕೆ (3)
16.ಕೆರೆಯ ಹತ್ತಿರವಿರುವ ಮೆಟ್ಟು (2)



ಗುಂಡಣ್ಣ



5565ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ಕಡಿವಾಣ 6.ಗಡವ
7.ಕಳಶ 9.ವಾಹಕ
10.ಪರಮಪದ 11.ಸುಪಥ
12.ಕಮ್ಮಟ 14.ಗಾವಿಲ
16.ಕಟವಾಯಿ

ಮೇಲಿಂದ ಕೆಳಕ್ಕೆ:
1.ಅಕಳಂಕ 2.ಹಣ
3.ಭಾಗ 4.ಅವಶ್ಯಕ
8.ಶಪಥ 9.ವಾದಕ
11.ಸುಡುಗಾಡು
13.ಟಕಾಯಿಸು
15.ಲತ್ತೆ 16.ಕಟ

ಸುಡೊಕು 5951

	3		6		2		4	
6		2				8		3
	4		3		9		1	
4		8			5		2	
				1		4		7
2		5	4				6	
			8		3		9	
7		3				6		5
	8		7		6		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5950 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜನವರಿ 20, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಶುಕ್ಲ ದಶಮಿ ಗಂ. 19-27 ನಕ್ಷತ್ರ: ಕೃತ್ತಿಕಾ ಗಂ. 27-09 ಯೋಗ: ಶುಭ ಗಂ. 11-06 ಕರಣ: ತೈತಿಲ ಗಂ. 07-36, ಮಕರ ಮಾಸದ 05 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 3. ರಾಹುಕಾಲ : ಬೆಳಿಗ್ಗೆ 09-00 – 10-30, ಸೂರ್ಯೋದಯ : 07-01 ಸೂರ್ಯಾಸ್ತ : 06-21
ಮುಸ್ಲಿಂ ದಿನಾಂಕ : 08 ರಜಬ್
ದಿನ ವಿಶೇಷ : ಸಾಂಬಾ ದಶಮಿ
ಅದೃಷ್ಟ ಸಂಖ್ಯೆ : 9, 11

ಮೇಷ: ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ನೆಮ್ಮದಿ. ಇಂದು ನ್ಯಾಯಮೂರ್ತಿಗಳಿಗೆ, ಆಡಳಿತಾಧಿಕಾರಿಗಳಿಗೆ ಸತ್ಫಲಗಳು ಸಿಗಲಿವೆ. ಅಧಿಕಾರಿಗಳ ಒಪ್ಪಂದದಿಂದ ಕಾರ್ಯಭಾರ ಅಧಿಕವಾಗಬಹುದು.

ವೃಷಭ: ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆಗಳು ಅನುಭವಕ್ಕೆ ಬಂದಲ್ಲಿ ತಡಮಾಡದೆ ವೈದ್ಯರನ್ನು ಭೇಟಿ ಮಾಡಿ. ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವಿರಿ. ಮಾನಸಿಕ ಸ್ಥೈರ್ಯ ಹೆಚ್ಚಲಿದೆ.

ಮಿಥುನ: ಕೊಡು– ಕೊಳ್ಳುವ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವನ್ನು ಕಂಡು ಕೆಲಸಗಳನ್ನು ವೃದ್ಧಿಸಿಕೊಳ್ಳುವಿರಿ. ಒಂಟಿತನವು ಈ ದಿನ ಕಾಡಲಿದೆ. ಜಾಗ್ರತರಾಗಿರಿ. ಬುದ್ಧಿವಂತಿಕೆಯಿಂದ ಕೆಲಸವನ್ನು ನಿಮ್ಮದಾಗಿಸಿಕೊಳ್ಳಿರಿ.

ಕರ್ಕಾಟಕ: ಧೈರ್ಯದಿಂದ ಎಲ್ಲರೆದುರು ವಾದವನ್ನು ಮಂಡಿಸುವಲ್ಲಿ ಯಶಸ್ವಿಯಾಗುವಿರಿ. ಶತ್ರುಗಳ ಬಾಧೆ ದೂರಾಗಿ ನಿಮ್ಮ ಯೋಜನೆಗಳು ಈಡೇರಲಿದೆ. ದೇವರ ಕೃಪೆಯಿಂದ ನಿರೀಕ್ಷೆಗೂ ಮೀರಿದ ಜಯ ಸಿಗಲಿದೆ.

ಸಿಂಹ: ಮನೆಯ ಕೌಟುಂಬಿಕ ವಿಷಯಗಳನ್ನು ತಂದೆಯೊಡನೆ ಚರ್ಚಿಸಿ ನಂತರದಲ್ಲಿ ತೀರ್ಮಾನಕ್ಕೆ ಬರುವುದು ಒಳ್ಳೆಯದು. ನ್ಯಾಯಾಲಯದಲ್ಲಿದ್ದ ಸಮಸ್ಯೆಗಳಿಗೆ ಉತ್ತರ ಸಿಗಲಿದೆ. ಮದುವೆ ಸಮಾರಂಭ ಜರುಗುವ ಸಾಧ್ಯತೆಗಳಿವೆ.

ಕನ್ಯಾ: ಸ್ವಯಂಕೃತ ತಪ್ಪುಗಳಿಂದ ವ್ಯವಹಾರದಲ್ಲಿ ಕೊಂಚ ಹಿನ್ನಡೆಯುಂಟಾಗುವ ಲಕ್ಷಣ ತೋರುವುದು. ಎಷ್ಟೇ ಚಾಣಾಕ್ಷತನ ತೋರಿದರೂ ಮಾತುಗಾರಿಕೆಯಲ್ಲಿ ಈ ದಿನ ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ತುಲಾ: ಆದರ್ಶ ಹಾಗೂ ತತ್ವಗಳ ಜತೆಗೆ ಹಿರಿಯರ ಉತ್ತಮ ಅನುಭವ ಹಾಗೂ ಸಲಹೆಗಳನ್ನು ಅಳವಡಿಸಿಕೊಂಡಲ್ಲಿ ಯೋಚಿಸಿದ ಕೆಲಸ ಸಂಪೂರ್ಣವಾಗುವುದು. ಮನೆಮದ್ದನ್ನು ಮಾಡುವುದರಿಂದ ರೋಗ ಶಮನವಾಗಲಿದೆ.

ವೃಶ್ಚಿಕ: ಜೀವನದ ಅಭಿವೃದ್ಧಿಗೆ ಬೇಕಾದ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿದೆ. ಈ ದಿನದಂದು ಕೆಲಸವು ನಿಧಾನಗತಿಯಲ್ಲಿ ಸಾಗುವ ಕಾರಣದಿಂದ ಯೋಜಿತ ಕಾರ್ಯವು ಬಾಕಿ ಉಳಿಯಲಿದೆ.


ಧನು: ದೈಹಿಕ ಶಕ್ತಿ ಹೆಚ್ಚುವುದರಿಂದ ಕೆಲಸದಲ್ಲಿ ಉತ್ತಮ ಅಭಿವೃದ್ಧಿ ಕಾಣುವಿರಿ. ದೇಹದಲ್ಲಿ ವಾತ ಪಿತ್ತದ ಅಂಶ ಅಧಿಕವಾಗುವುದರಿಂದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅವಶ್ಯಕ.

ಮಕರ: ತಂದೆಯ ಮನಸ್ಸಿಗೆ ನೋವಾಗುವ ಸಂಗತಿಯು ನಿಮ್ಮಿಂದ ನಡೆಯಲಿದೆ. ವಾಕ್ಚಾತುರ್ಯವನ್ನು ಪ್ರದರ್ಶಿಸಲು ಸುವರ್ಣಾವಕಾಶ ಲಭಿಸುವುದು. ಸಿದ್ಧ ಉಡುಪುಗಳ ವ್ಯಾಪಾರದಿಂದ ಹೇರಳ ಲಾಭ ಹೊಂದುವಿರಿ.

ಕುಂಭ: ಅತಿಯಾಗಿ ಪ್ರೀತಿಸುವ ಹಾಗೂ ಆದರಿಸುವ ಜನರೊಂದಿಗೆ ಕಾಲ ಕಳೆಯಲು ಈ ದಿನ ಸಕಾಲವಾಗಿದೆ. ಅವಶ್ಯ ವಸ್ತುಗಳ ಗಳಿಕೆಯಿಂದ ಸಂತೋಷ ಉಂಟಾಗುವುದು. ಮಕ್ಕಳ, ಮೊಮ್ಮಕ್ಕಳ ಭೇಟಿ ಮನಸ್ಸಿಗೆ ಸಂತಸ ತರುವುದು.

ಮೀನ: ಭವಿಷ್ಯದ ಭದ್ರತೆಗೆ ಕುರಿತಾದ ನಿಮ್ಮ ಕಾಳಜಿ ಕುಟುಂಬದ ಸದಸ್ಯರಿಗೆ ಸಂತೃಪ್ತಿಯನ್ನು ತಂದು ಕೊಡುವುದು. ಮನುಷ್ಯ ಪ್ರಯತ್ನದ ಜೊತೆಯಲ್ಲಿ ದೇವ ಬಲ ದೊರಕಿಸಿಕೊಂಡರೆ ಕನಸು ನನಸಾಗುವುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	21,462
ಇಂದಿನ ಅಂತ್ಯ	21,622
▲	160
ದಿನದ ಗರಿಷ್ಠ	21,670

ವಿನಿಮಯ ದರ	
$ ಡಾಲರ್	83.07
£ ಪೌಂಡ್	105.37
€ ಯೂರೊ	90.41
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು 100ಕ್ಕೆ	₹550
12 ಕ್ಕೆ	₹72
ಮೈಸೂರು 100ಕ್ಕೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ನೆನ್ನೆಯ ದರ)	
ಶೇಂಗಾ (ರಿಫೈನ್ಡ್)	₹1560 (1570)
ಸೋಯಾ (ರಿಫೈನ್ಡ್)	₹905 (910)
ಸೂರ್ಯಕಾಂತಿ (ರಿಫೈನ್ಡ್)	₹925 (925)
ಪಾಮೋಲಿನ್	₹853 (850)

ಈರುಳ್ಳಿ (ಕ್ವಿಂಟಲ್‌ಗೆ)	
ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹500-1000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹156.50
ಆರ್‌ಎಸ್‌ಎಸ್-5	₹150
ಗುಡ್ ಲಾಟ್	₹133

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಸಿ.ಬಿ)	₹291-485
ದ್ವಿತಳಿ (ಬಿ.ವಿ)	₹310-563

ರಿಲಯನ್ಸ್ ನಿವ್ವಳ ಲಾಭ ಹೆಚ್ಚಳ

Reliance Industries Limited

ನವದೆಹಲಿ (ಪಿಟಿಐ): 2023–24ರ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್, ರಿಲಯನ್ಸ್ ಜಿಯೊ ಮತ್ತು ರಿಲಯನ್ಸ್ ರಿಟೇಲ್‌ನ ನಿವ್ವಳ ಲಾಭದಲ್ಲಿ ಏರಿಕೆಯಾಗಿದೆ.

ರಿಲಯನ್ಸ್ ಇಂಡಸ್ಟ್ರೀಸ್‌ನ ಲಾಭದಲ್ಲಿ ಶೇ 9.30ರಷ್ಟು ಏರಿಕೆ ಆಗಿದೆ. 2022–23ರ ಮೂರನೇ ತ್ರೈಮಾಸಿಕದಲ್ಲಿ ಕಂಪನಿಯು ₹15,792 ಕೋಟಿ ನಿವ್ವಳ ಲಾಭ ಗಳಿಸಿತ್ತು. 2023–24ರ ಅವಧಿಯಲ್ಲಿ ₹17,265 ಕೋಟಿಗೆ ಏರಿಕೆಯಾಗಿದೆ. ಕಾರ್ಯಾಚರಣಾ ವರಮಾನವು ₹2.2 ಲಕ್ಷ ಕೋಟಿಗೆ ತಲುಪಿದೆ.

ಜಿಯೊ ಲಾಭ ಹೆಚ್ಚಳ: ರಿಲಯನ್ಸ್ ಜಿಯೊದ ಲಾಭದಲ್ಲಿ ಶೇ 12.2ರಷ್ಟು ಏರಿಕೆಯಾಗಿದೆ. 2022–23ರಲ್ಲಿ ₹4,638 ಕೋಟಿ ನಿವ್ವಳ ಲಾಭಗಳಿಸಿದ್ದ ಕಂಪನಿಯು 2023–24ರಲ್ಲಿ ₹5,208 ಕೋಟಿ ಲಾಭ ದಾಖಲಿಸಿದೆ. ಕಂಪನಿಯ ಕಾರ್ಯಾಚರಣಾ ವರಮಾನದಲ್ಲಿಯೂ ಶೇ 10.3ರಷ್ಟು ಏರಿಕೆಯಾಗಿದೆ. ಒಟ್ಟಾರೆ ವರಮಾನ ₹22,998 ಕೋಟಿಯಿಂದ ₹25,368 ಕೋಟಿಗೆ ತಲುಪಿದೆ ಎಂದು ಕಂಪನಿ ತಿಳಿಸಿದೆ.

ರಿಟೇಲ್ ಲಾಭದಲ್ಲೂ ಏರಿಕೆ: ರಿಲಯನ್ಸ್ ರಿಟೇಲ್ ಶೇ 31.87ರಷ್ಟು ಲಾಭ ದಾಖಲಿಸಿದೆ. ಕಂಪನಿಯು 2022–23ರ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹2,400 ಕೋಟಿ ಲಾಭ ದಾಖಲಿಸಿತ್ತು. 2023–24ರಲ್ಲಿ ₹3,165 ಕೋಟಿಗೆ ಏರಿಕೆಯಾಗಿದೆ. ಕಾರ್ಯಾಚರಣಾ ವರಮಾನವು ₹67,623 ಕೋಟಿಯಿಂದ ₹74,373 ಕೋಟಿಗೆ (ಶೇ 23.75) ಏರಿಕೆಯಾಗಿದೆ. ರಿಲಯನ್ಸ್ ರಿಟೇಲ್‌ನ ಒಟ್ಟಾರೆ ವರಮಾನ ₹83,063 ಕೋಟಿ ಆಗಿದೆ ಎಂದು ಕಂಪನಿ ತಿಳಿಸಿದೆ.

ರಾಬಿ ಅವಧಿ: ಎಣ್ಣೆಕಾಳು, ಚೆನ್ನಂಗಿ ಬೇಳೆ ಬಿತ್ತನೆ ಪ್ರದೇಶ ಹೆಚ್ಚಳ

ಭತ್ತ, ಬೇಳೆಕಾಳು ಬಿತ್ತನೆ ಕುಂಠಿತ

ನವದೆಹಲಿ (ಪಿಟಿಐ): ಕಳೆದ ವರ್ಷಕ್ಕೆ ಹೋಲಿಸಿದರೆ ದೇಶದಲ್ಲಿ ಈ ಬಾರಿಯ ರಾಬಿ ಋತುವಿನಲ್ಲಿ (ಚಳಿಗಾಲದ ಬಿತ್ತನೆ) ಭತ್ತ ಮತ್ತು ಬೇಳೆಕಾಳು ಬಿತ್ತನೆ ಪ್ರದೇಶವು ಕಡಿಮೆಯಾಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯದ ಅಂಕಿ–ಅಂಶಗಳು ತಿಳಿಸಿವೆ.

ಆದರೆ ಮೆಕ್ಕೆಜೋಳ, ಜೋಳ, ಜವೆಗೋಧಿ ಹಾಗೂ ಎಣ್ಣೆಕಾಳುಗಳ ಬಿತ್ತನೆ ಪ್ರದೇಶವು ಕಳೆದ ವರ್ಷಕ್ಕೆ ಹೋಲಿಸಿದರೆ ಹೆಚ್ಚಳವಾಗಿದೆ.

ಹಿಂದಿನ ವರ್ಷ 162.66 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೇಳೆಕಾಳುಗಳ ಬಿತ್ತನೆಯಾಗಿತ್ತು. ಈ ಬಾರಿ 155.13 ಲಕ್ಷ ಹೆಕ್ಟೇರ್‌ಗೆ ಕುಸಿದಿದೆ. ಅದರಲ್ಲೂ ಕಡಲೆ, ಉದ್ದು, ಹೆಸರು ಬಿತ್ತನೆ ಪ್ರದೇಶ ಕುಗ್ಗಿದೆ.


ಆದರೆ, ರೈತರು ಹೆಚ್ಚಿನ ಪ್ರದೇಶದಲ್ಲಿ ಚೆನ್ನಂಗಿ ಬೇಳೆ (ಮಸೂರ್ ದಾಲ್) ಬಿತ್ತನೆ ಮಾಡಿದ್ದಾರೆ. ಹಿಂದಿನ ವರ್ಷ 18.46 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿತ್ತು. ಈ ಬಾರಿ 19.51 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ.

ಕಳೆದ ವರ್ಷ 29.33 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ನಾಟಿ ಮಾಡಲಾಗಿತ್ತು. ಈ ಬಾರಿ 28.25 ಲಕ್ಷ ಹೆಕ್ಟೇರ್‌ನಲ್ಲಿ ನಾಟಿಯಾಗಿದೆ. ಹಿಂದಿನ ವರ್ಷ 108.82 ಲಕ್ಷ ಹೆಕ್ಟೇರ್‌ನಲ್ಲಿ ಎಣ್ಣೆಕಾಳುಗಳ ಬಿತ್ತನೆಯಾಗಿದ್ದು, ಈ ಬಾರಿ 109.88 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ.

ದೇಶದಲ್ಲಿ ಈ ಬಾರಿ ರಾಬಿ ಅವಧಿಯ ಬಿತ್ತನೆ ಕೊಂಚ ಕಡಿಮೆಯಾಗಿದೆ. ಹಿಂದಿನ ವರ್ಷ 689.09 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿತ್ತು. ಈ ಬಾರಿ 687.18 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ ಎಂದು ಕೃಷಿ ಸಚಿವಾಲಯದ ಅಂಕಿಅಂಶ ತಿಳಿಸಿದೆ.

ಮುಖ್ಯಾಂಶಗಳು
- ಕಡಲೆ, ಉದ್ದು, ಹೆಸರು ಬಿತ್ತನೆ ಪ್ರದೇಶ ಕುಗ್ಗಿದೆ
- ಈ ಬಾರಿಯ ರಾಬಿ ಅವಧಿಯಲ್ಲಿ 687.18 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ
- ಹವಾಮಾನಕ್ಕೆ ಹೊಂದಿಕೊಳ್ಳುವಂತಹ ಗೋಧಿ ತಳಿ ಬಿತ್ತಿದ ರೈತರು

340 ಲಕ್ಷ ಹೆಕ್ಟೇರ್‌ನಲ್ಲಿ ಗೋಧಿ ಬಿತ್ತನೆ



ದೇಶದಲ್ಲಿ ರಾಬಿ ಋತುವಿನಲ್ಲಿ 340.08 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಗೋಧಿ ಬಿತ್ತನೆಯಾಗಿದ್ದು, ಉತ್ಪಾದನೆಯೂ ಹೆಚ್ಚಳವಾಗುವ ನಿರೀಕ್ಷೆಯಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ಪಂಜಾಬ್‌ನಲ್ಲಿ ಅತಿಹೆಚ್ಚು ಗೋಧಿ ಬೆಳೆಯಲಾಗುತ್ತದೆ. 2022–23ರ ಬೆಳೆ ವರ್ಷದಲ್ಲಿ (ಜುಲೈ–ಜೂನ್) ಒಟ್ಟು 337.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತು. ಅದಕ್ಕೆ ಹೋಲಿಸಿದರೆ ಈ ಬಾರಿ ಬಿತ್ತನೆ ಪ್ರದೇಶ ಹೆಚ್ಚಾಗಿದೆ. ಹಾಗಾಗಿ, ಉತ್ಪಾದನೆಯೂ ಹೆಚ್ಚಳವಾಗಲಿದೆ ಎಂದು ಕೇಂದ್ರ ಕೃಷಿ ಸಚಿವ ಅರ್ಜುನ್ ಮುಂಡಾ ಅವರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ದೇಶದಲ್ಲಿ 2022–23ರ ಬೆಳೆ ವರ್ಷದಲ್ಲಿ 110.55 ದಶಲಕ್ಷ ಟನ್ ಹಾಗೂ 2021–22ರಲ್ಲಿ 107.7 ದಶಲಕ್ಷ ಟನ್ ಉತ್ಪಾದನೆಯಾಗಿತ್ತು. 2023–24ರಲ್ಲಿ 114 ದಶಲಕ್ಷ ಟನ್ ಗೋಧಿ ಉತ್ಪಾದನೆಯಾಗಲಿದೆ ಎಂದು ಭಾರತೀಯ ಆಹಾರ ನಿಗಮ ಅಂದಾಜಿಸಿದೆ.

'ಪಂಜಾಬ್ ಮತ್ತು ಹರಿಯಾಣದ ಶೇ 70ರಷ್ಟು ಪ್ರದೇಶದಲ್ಲಿ ಈ ಬಾರಿ ರೈತರು ಹವಾಮಾನಕ್ಕೆ ಹೊಂದಿಕೊಳ್ಳುವಂತಹ ತಳಿಗಳನ್ನು ಬಿತ್ತನೆ ಮಾಡಿದ್ದಾರೆ. ಇಲ್ಲಿಯವರೆಗೂ ಬೆಳೆ ನಷ್ಟವಾದ ವರದಿಯಾಗಿಲ್ಲ. ಶೀತ ಹವಾಮಾನವು ಗೋಧಿ ಫಸಲಿಗೆ ಪೂರಕವಾಗಿದೆ' ಎಂದು ಕೇಂದ್ರ ಕೃಷಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೆನ್ಸೆಕ್ಸ್, ನಿಫ್ಟಿ ಚೇತರಿಕೆ

ಮುಂಬೈ (ಪಿಟಿಐ): ಸತತ ಮೂರು ದಿನಗಳಿಂದ ಇಳಿಕೆ ಕಂಡಿದ್ದ ಷೇರುಪೇಟೆಯು ಶುಕ್ರವಾರ ಚೇತರಿಕೆ ಕಂಡಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 496 ಅಂಶ ಏರಿಕೆಯಾಗಿ 71,683ಕ್ಕೆ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 160 ಅಂಶ ಹೆಚ್ಚಾಗಿ 21,622 ವಹಿವಾಟು ಮುಕ್ತಾಯಗೊಳಿಸಿತು.

ಎಚ್‌ಡಿಎಫ್‌ಸಿ ಷೇರು ಮೌಲ್ಯ ಶೇ 12.40ರಷ್ಟು ಕುಸಿತ: ಹೂಡಿಕೆದಾರರು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳ ಮಾರಾಟಕ್ಕೆ ಮುಗಿಬಿದ್ದಿದ್ದಾರೆ. ಹಾಗಾಗಿ, ಮೂರು ದಿನಗಳಲ್ಲಿ ಕಂಪನಿಯ ಶೇ 12.40ರಷ್ಟು ನಷ್ಟ ದಾಖಲಿಸಿದೆ.

ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯ ಒಟ್ಟು ₹1.58 ಲಕ್ಷ ಕೋಟಿ ಕರಗಿದೆ. ಬಿಎಸ್‌ಇಯಲ್ಲಿ ಕಂಪನಿಯ ಷೇರಿನ ಬೆಲೆ ₹1,470 ಮತ್ತು ನಿಫ್ಟಿಯಲ್ಲಿ ₹1,470 ಆಗಿದೆ.

ಷೇರುಪೇಟೆಗೆ ರಜೆ (ರಾಯಿಟರ್ಸ್): ಜನವರಿ 20ರ ಶನಿವಾರ ಷೇರುಪೇಟೆಯು ವಹಿವಾಟು ನಡೆಸಲಿದೆ ಎಂದು ನಿಫ್ಟಿ ವಕ್ತಾರರು ತಿಳಿಸಿದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ.

ಅಯೋಧ್ಯೆಯಲ್ಲಿ ರಾಮಮಂದಿರ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಜನವರಿ 22ರಂದು ಷೇರುಪೇಟೆಯು ಬೆಳಿಗ್ಗೆ 9ಗಂಟೆಗೆ ಬದಲು ಮಧ್ಯಾಹ್ನ 2.30ಕ್ಕೆ ಆರಂಭವಾಗಿ ಸಂಜೆ 5 ಗಂಟೆವರೆಗೆ ವಹಿವಾಟು ನಡೆಸಲಿದೆ ಎಂದು ಆರ್‌ಬಿಐ ಸುತ್ತೋಲೆಯಲ್ಲಿ ತಿಳಿಸಿತ್ತು.

ಆದರೆ, ಮಹಾರಾಷ್ಟ್ರದಲ್ಲಿ ಜನವರಿ 22ರಂದು ಸಾರ್ವತ್ರಿಕ ರಜೆ ಘೋಷಿಸಿರುವುದರಿಂದ ಅಂದು ಷೇರು ಮಾರುಕಟ್ಟೆ ಕಾರ್ಯ ನಿರ್ವಹಿಸುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ಮುಂಬೈ ಧಾರಣೆ

ಶೇಂಗಾ
19-1-2024

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11400-11500
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570 (1580)
ಒಂದು ವಾರದ ಡೆಲಿವರಿ	1565 (1575)
ಸೋಯಾ ಕಚ್ಚಾ	865 (860)
ಪಾಮ್ ವಾರದ ಡೆಲಿವರಿ	855 (848)
ಸೂರ್ಯಕಾಂತಿ ಎಣ್ಣೆ ಕಚ್ಚಾ	875 (875)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,200 (61,650)
ಬೆಳ್ಳಿ ಕೆ.ಜಿ ₹71,200 (70,800)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಮಾವೇಶದಲ್ಲಿ ಭಾಗವಹಿಸಲು ಅರ್ಚಕರಿಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ ದಿಂದ ಫೆ.7ರಂದು ಬೆಂಗಳೂರಿನ ಪುರಭವನದಲ್ಲಿ ಸಮಾವೇಶ ಆಯೋಜಿಸಿದೆ.

ಈ ಸಮಾವೇಶದಲ್ಲಿ ಪಾಲ್ಗೊಳ್ಳುವ ಅರ್ಚಕರು ಆ ದಿನದ ದೇವಸ್ಥಾನದ ಪೂಜಾ ಕೈಂಕರ್ಯ ಹಾಗೂ ಕಾರ್ಯಕ್ರಮಗಳಿಗೆ ತೊಡಕು ಉಂಟಾಗದಂತೆ ಬದಲಿ ವ್ಯವಸ್ಥೆ ಮಾಡಿಕೊಂಡು ಭಾಗವಹಿಸಲು ಅನುಮತಿ ನೀಡಿದೆ ಎಂದು ಧಾರ್ಮಿಕ ದತ್ತಿ ಇಲಾಖೆ ಸುತ್ತೋಲೆ ಹೊರಡಿಸಿದೆ.

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹14100
ಎಸಿ	₹7840
ಆರ್‌ಪಿ	₹11500
ಆರ್‌ಸಿ	₹7210



ಶಿಲ್ಲಾಂಗ್‌ನಲ್ಲಿ ಶುಕ್ರವಾರ ನಡೆದ ಈಶಾನ್ಯ ಕೌನ್ಸಿಲ್‌ನ ಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ ಅವರು ವಾರ್ಷಿಕ ಪುಸ್ತಕ ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

'ಈಶಾನ್ಯ ರಾಜ್ಯಗಳಲ್ಲಿ ಹಿಂಸೆ ಇಳಿಕೆ'

ಶಿಲ್ಲಾಂಗ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ 10 ವರ್ಷಗಳ ಅವಧಿಯಲ್ಲಿ ದೇಶದ ಈಶಾನ್ಯ ಭಾಗದಲ್ಲಿ ಹಿಂಸಾಕೃತ್ಯಗಳು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿವೆ. ಅಲ್ಲದೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳೂ ನಡೆದಿರುವುದರಿಂದ ಈಶಾನ್ಯ ಭಾಗಕ್ಕೆ ಈ ಅವಧಿ ಸುವರ್ಣ ಯುಗವಾಗಿ ಪರಿಣಮಿಸಿದೆ ಎಂದು ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದರು.

ಈಶಾನ್ಯ ಕೌನ್ಸಿಲ್‌ನ 71ನೇ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು, ಈ ಭಾಗದಲ್ಲಿ 2004ರಿಂದ 2014ರ ನಡುವೆ ಒಟ್ಟು 11,121 ಹಿಂಸಾತ್ಮಕ ಘಟನೆಗಳು ನಡೆದಿದ್ದವು. 2014ರಿಂದ 2023ರ ಅವಧಿಯಲ್ಲಿ ಅದು 3,113ಕ್ಕೆ ಇಳಿದಿದೆ. ಅಂದರೆ ಶೇ 73ರಷ್ಟು ಕುಸಿದಿದೆ ಎಂದು ಗೃಹ ಸಚಿವರು ಅಂಕಿ– ಅಂಶ ಸಹಿತ ಮಾಹಿತಿ ನೀಡಿದರು.

ಅಲ್ಲದೆ ಭದ್ರತಾ ಸಿಬ್ಬಂದಿಯ ಸಾವಿನ ಪ್ರಮಾಣವೂ ಶೇ 71ರಷ್ಟು ಕಡಿಮೆಯಾಗಿದೆ. ಹಾಗೆಯೇ ನಾಗರಿಕರ ಸಾವಿನ ಪ್ರಮಾಣವೂ ಶೇ 86ರಷ್ಟು ಕಡಿಮೆಯಾಗಿದೆ ಎಂದರು.

'ಕಳೆದ ಐದು ವರ್ಷಗಳಲ್ಲಿ ವಿವಿಧ ಉಗ್ರಗಾಮಿ ಗುಂಪುಗಳ 8,900ಕ್ಕೂ ಹೆಚ್ಚು ಸದಸ್ಯರು ಶರಣಾಗಿ ಮುಖ್ಯವಾಹಿನಿಗೆ ಬಂದಿದ್ದಾರೆ. ಹೀಗಾಗಿ ಬಂಡಾಯ, ಸಂಘರ್ಷಗಳು ಗಣನೀಯವಾಗಿ ತಗ್ಗಿವೆ. ಶಾಂತಿ ಮತ್ತು ಸಮೃದ್ಧಿಯು ಪರಸ್ಪರ ಸಂಬಂಧ ಹೊಂದಿದ್ದು, ಇವಿಲ್ಲದೆ ರಾಜ್ಯಗಳು ಮತ್ತು ದೇಶದ ಅಭಿವೃದ್ಧಿಗೆ ಅಸಾಧ್ಯ ಎಂಬ ಸಂದೇಶವನ್ನು ಇದು ಸಾರಿದೆ' ಎಂದರು.

'ಈಶಾನ್ಯ ಭಾರತದಲ್ಲಿ ಶಾಂತಿ, ಸ್ಥಿರತೆ ನೆಲೆಸುವಂತೆ ಮಾಡಲು ಮೋದಿ ಸರ್ಕಾರವು ಒಂಬತ್ತು ಒಪ್ಪಂದಗಳಿಗೆ ಸಹಿ ಹಾಕಿದೆ. ಅಲ್ಲದೆ ಬಾಕಿಯಿದ್ದ ಅನೇಕ ಕಾನೂನು ತೊಡಕುಗಳನ್ನು ಯಶಸ್ವಿಯಾಗಿ ಬಗೆಹರಿಸಿದೆ' ಎಂದು ತಿಳಿಸಿದರು.

'ಜನಾಂಗೀಯ, ಭಾಷೆ, ಗಡಿ ಸಮಸ್ಯೆಗಳು ಹಾಗೂ ಭಯೋತ್ಪಾದಕಗುಂಪುಗಳಿಂದಸಾಕಷ್ಟುಸಮಸ್ಯೆಗಳನ್ನು ಎದುರಿಸುತ್ತಿದ್ದ ಈ ಪ್ರದೇಶದಲ್ಲಿ 10 ವರ್ಷಗಳಲ್ಲಿ ಶಾಂತಿ ನೆಲೆಯೂರಿದ್ದು, ಹೊಸ ಶಕೆ ಆರಂಭವಾಗಿದೆ. ಮೋದಿ ಸರ್ಕಾರವು ಯಾವಾಗಲೂ ಈಶಾನ್ಯ ಭಾರತವನ್ನು ದೇಶದ ಅತ್ಯಂತ ಮಹತ್ವದ ಭಾಗ ಎಂದೇ ಪರಿಗಣಿಸಿದೆ' ಎಂದು ಅಮಿತ್ ಶಾ ಹೇಳಿದರು.

ಶೇಂಗಾ ಧಾರಣೆ ಕುಸಿತ

ಗಜೇಂದ್ರಗಡ ಎಪಿಎಂಸಿಗೆ ನಿತ್ಯ 3ರಿಂದ 4 ಸಾವಿರ ಚೀಲ ಆವಕ

● ಶ್ರೀಶೈಲ ಎಂ. ಕುಂಬಾರ

ಗಜೇಂದ್ರಗಡ (ಗದಗ ಜಿಲ್ಲೆ): ಮಾರುಕಟ್ಟೆಯಲ್ಲಿ ದಿನೇ ದಿನೇ ದರ ಕುಸಿಯುತ್ತಿರುವುದರಿಂದ ಲಾಭದ ನಿರೀಕ್ಷೆಯಲ್ಲಿದ್ದ ಶೇಂಗಾ ಬೆಳೆಗಾರರು ಕಂಗಾಲಾಗಿದ್ದಾರೆ.

ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ 20 ದಿನಗಳ ಹಿಂದೆ ಒಂದು ಕ್ವಿಂಟಲ್ ಹಸಿ ಶೇಂಗಾ ದರ ₹5,000ರಿಂದ ₹5,600 ಹಾಗೂ ಒಣ ಶೇಂಗಾಕ್ಕೆ ₹8,600ರಿಂದ ₹9,000 ಧಾರಣೆ ಇತ್ತು. ಕಳೆದ ಮೂರ್ನಾಲ್ಕು ದಿನಗಳಿಂದ ಒಂದು ಕ್ವಿಂಟಲ್ ಹಸಿ ಶೇಂಗಾಕ್ಕೆ ₹3,009ರಿಂದ ₹4,600 ಮತ್ತು ಒಣ ಶೇಂಗಾ ದರ ₹6,600ರಿಂದ ₹7,859ಕ್ಕೆ ಕುಸಿದಿದೆ.

ಎಪಿಎಂಸಿಗೆ ಗದಗ ಜಿಲ್ಲೆಯ ರೈತರು ಸೇರಿದಂತೆ ಕೊಪ್ಪಳ ಜಿಲ್ಲೆಯ ಕುಷ್ಟಗಿ, ಯಲಬುರ್ಗಾ ತಾಲ್ಲೂಕು, ಬಾಗಲಕೋಟೆ ಜಿಲ್ಲೆಯ ಬಾದಾಮಿ, ಹುನಗುಂದ ತಾಲ್ಲೂಕಿನ ರೈತರು ಶೇಂಗಾವನ್ನು ಮಾರಾಟಕ್ಕೆ ತರುತ್ತಾರೆ. ಪ್ರತಿದಿನ 3ರಿಂದ 4 ಸಾವಿರ ಚೀಲ ಆವಕ ಆಗುತ್ತಿದೆ. ಒಂದು ಚೀಲ ಹಸಿ ಶೇಂಗಾವು 50ರಿಂದ 60 ಕೆ.ಜಿ, ಒಣ ಶೇಂಗಾ 35 ಕೆ.ಜಿ ಇರುತ್ತದೆ.



ಗಜೇಂದ್ರಗಡದ ಎಪಿಎಂಸಿಗೆ ರೈತರು ಮಾರಾಟಕ್ಕೆ ತಂದಿರುವ ಶೇಂಗಾ

ಎಪಿಎಂಸಿಯಲ್ಲಿ ಮೇ ತಿಂಗಳವರೆಗೂ ಶೇಂಗಾ ಆವಕವಾಗುತ್ತದೆ. ಸ್ಥಳೀಯವಾಗಿ 12 ಮಂದಿ ಖರೀದಿದಾರರಿದ್ದಾರೆ. ಗದಗ, ಇಳಕಲ್ ಮತ್ತು ರಾಮದುರ್ಗದಿಂದಲೂ ಖರೀದಿದಾರರು ಬರುತ್ತಾರೆ.

ಕೊಯ್ಲಿನ ಆರಂಭದಲ್ಲಿ ಶೇಂಗಾ ಆವಕ ಕಡಿಮೆಯಿತ್ತು. ಹಾಗಾಗಿ, ಖರೀದಿದಾರರು ಹೆಚ್ಚು ದರ ನೀಡಿದ್ದರು. ಈಗ ಆವಕ ಹೆಚ್ಚಾಗಿದೆ. ಹಾಗಾಗಿ, ಬೆಲೆ ಕುಸಿದಿದೆ
ಅಮರೇಶ ಬಳಿಗೇರ, ಅಧ್ಯಕ್ಷ, ಎಪಿಎಂಸಿ ವರ್ತಕರ ಸಂಘ

'ಕಳೆದ ವರ್ಷ ಮುಂಗಾರು ವೈಫಲ್ಯದಿಂದ ಫಸಲು ಹಾಳಾಯಿತು. ಈ ಬಾರಿ ಕೊಳವೆಬಾವಿ ಆಶ್ರಯದಲ್ಲಿ ಶೇಂಗಾ ಬೆಳೆದಿದ್ದೆ. ದನ-ಕರುಗಳಿಗೆ ಮೇವು, ಕೈಗೊಂದಿಷ್ಟು ಹಣ ಸಿಗುವ ಭರವಸೆ ಇತ್ತು. ಮಾರಾಟಕ್ಕಾಗಿ ಎಪಿಎಂಸಿಗೆ 87 ಚೀಲ ಹಸಿ ಶೇಂಗಾ ತಂದಿದ್ದೆ. ಹಿಂದಿನ ವಾರಗಳಲ್ಲಿದ್ದ ದರಕ್ಕೆ ಹೋಲಿಸಿದರೆ ಪ್ರತಿ ಕ್ವಿಂಟಲ್‌ಗೆ ಒಂದು ಸಾವಿರದಷ್ಟು ದರ ಕಡಿಮೆಯಾಗಿದೆ' ಎಂದು ರಾಜೂರ ಗ್ರಾಮದ ರೈತ ಚಂದ್ರು ಹೊಗರಿ ತಿಳಿಸಿದರು.

ಕೇಂದ್ರ ಸಂವಹನ ಸಚಿವ ಅಶ್ವಿನಿ ವೈಷ್ಣವ್ ಹೇಳಿಕೆ

ಡಿಸೆಂಬರ್‌ಗೆ ದೇಶೀಯ ಚಿಪ್ ಲಭ್ಯ

ದಾವೋಸ್ (ಪಿಟಿಐ): 'ಕೇಂದ್ರ ಸರ್ಕಾರವು 2022ರ ಜನವರಿಯಲ್ಲಿ ಸೆಮಿಕಂಡಕ್ಟರ್ ನೀತಿಯನ್ನು ಅನುಷ್ಠಾನಗೊಳಿಸಿದ ಬಳಿಕ ಚಿಪ್‌ಗಳ ತಯಾರಿಕೆಗೆ ವೇಗ ಸಿಕ್ಕಿದೆ. ಡಿಸೆಂಬರ್ ವೇಳೆಗೆ ದೇಶದಲ್ಲಿಯೇ ಸೆಮಿಕಂಡಕ್ಟರ್ ಚಿಪ್ ತಯಾರಿಕೆ ಆಗುವ ನಿರೀಕ್ಷೆಯಿದೆ' ಎಂದು ಕೇಂದ್ರ ಸಂವಹನ ಮತ್ತು ಐ.ಟಿ. ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಭೆಯಲ್ಲಿ ಪಾಲ್ಗೊಂಡಿರುವ ಅವರು, ಶುಕ್ರವಾರ ಪಿಟಿಐ ಸುದ್ದಿಸಂಸ್ಥೆಯೊಂದಿಗೆ ಈ ಮಾಹಿತಿ ಹಂಚಿಕೊಂಡರು.

'ಸಭೆಯಲ್ಲಿ ಪಾಲ್ಗೊಂಡಿರುವ ಸೆಮಿಕಂಡಕ್ಟರ್ ತಯಾರಿಕಾ ಕಂಪನಿಗಳ ಹಿರಿಯ ಪ್ರತಿನಿಧಿಗಳೊಟ್ಟಿಗೆ ಚರ್ಚಿಸಿದ್ದೇನೆ. ಭಾರತದಲ್ಲಿ ಇಷ್ಟು ಕಡಿಮೆ ಅವಧಿಯಲ್ಲಿ ಈ ವಲಯವು ಸಾಧಿಸುತ್ತಿರುವ ಬೆಳವಣಿಗೆ ಬಗ್ಗೆ ಅವರು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಜತೆಗೆ, ಸರ್ಕಾರದ ನೀತಿ ಬಗ್ಗೆಯೂ ಮೆಚ್ಚುಗೆ ಸೂಚಿಸಿದ್ದಾರೆ' ಎಂದರು.



ವಿಶ್ವದ ಹಲವು ರಾಷ್ಟ್ರಗಳು ಸೆಮಿಕಂಡಕ್ಟರ್ ನೀತಿಯನ್ನು ಅಳವಡಿಸಿಕೊಂಡಿವೆ. ಆದರೆ, ಭಾರತದಷ್ಟು ಪ್ರಗತಿ ಸಾಧಿಸಲು ಅವುಗಳಿಗೆ ಸಾಧ್ಯವಾಗಿಲ್ಲ
ಅಶ್ವಿನಿ ವೈಷ್ಣವ್, ಕೇಂದ್ರ ಸಂವಹನ ಮತ್ತು ಐ.ಟಿ ಸಚಿವ

ಗುಜರಾತ್‌ನಲ್ಲಿ ಅಮೆರಿಕದ ಮೈಕ್ರಾನ್ ಕಂಪನಿಯು ಸೆಮಿಕಂಡಕ್ಟರ್ ಚಿಪ್ ಘಟಕ ಸ್ಥಾಪನೆ ಸಂಬಂಧ 2023ರ ಜೂನ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕಿತು. ತ್ವರಿತವಾಗಿ ಭೂಮಿ ಹಂಚಿಕೆ, ಫ್ಯಾಕ್ಟರಿ ವಿನ್ಯಾಸದ ಕೆಲಸ ಮತ್ತು ತೆರಿಗೆಗೆ ಸಂಬಂಧಿಸಿದ ಒಪ್ಪಂದ ಪೂರ್ಣಗೊಂಡಿದ್ದರಿಂದ ಅದೇ ವರ್ಷದ ಸೆಪ್ಟೆಂಬರ್‌ನಿಂದಲೇ ಕೆಲಸ ಆರಂಭಿಸಿದೆ ಎಂದರು.

'ಸೆಮಿಕಂಡಕ್ಟರ್ ಚಿಪ್‌ಗಳ ತಯಾರಿಕಾ ಕೌಶಲಕ್ಕೆ ಪೂರಕ ವ್ಯವಸ್ಥೆ ರೂಪಿಸಬೇಕು ಎಂಬುದು ಪ್ರಧಾನಿ ಮೋದಿ ಅವರ ಆಶಯವಾಗಿದೆ. ಈ ನಿಟ್ಟಿನಲ್ಲಿ 104 ವಿಶ್ವವಿದ್ಯಾಲಯಗಳ ಜೊತೆಗೆ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕುವ ಪ್ರಕ್ರಿಯೆ ನಡೆಯುತ್ತಿದೆ. ಚಿಪ್‌ಗಳ ವಿನ್ಯಾಸ, ಕೌಶಲಕ್ಕೆ ಸಂಬಂಧಿಸಿದಂತೆ ವಿ.ವಿ ಕೋರ್ಸ್‌ಗಳ ಪಠ್ಯಕ್ರಮದಲ್ಲಿಯೂ ಪರಿಷ್ಕರಣೆಯಾಗಲಿದೆ' ಎಂದು ತಿಳಿಸಿದರು.

ಎಂಜಿನ್ ದೋಷ: ವಿಮಾನ ತುರ್ತು ಭೂಸ್ಪರ್ಶ

ಮಿಯಾಮಿ (ರಾಯಿಟರ್ಸ್): ಅಟ್ಲಾಸ್ ಏರ್ ಬೋಯಿಂಗ್ ಸರಕು ಸಾಗಣೆ ವಿಮಾನವೊಂದು ಟೇಕಾಫ್ ಆದ ಕೆಲವೇ ಕ್ಷಣದಲ್ಲಿ ಎಂಜಿನ್ ದೋಷದ ಕಾರಣಕ್ಕೆ ಮಿಯಾಮಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗುರುವಾರ ತುರ್ತು ಭೂಸ್ಪರ್ಶ ಮಾಡಿದೆ.

'ಪೈಲಟ್‌ಗಳು ವಿಮಾನವನ್ನು ಸುರಕ್ಷಿತವಾಗಿ ಎಂಐಎನಲ್ಲಿ ಇಳಿಸಿದ್ದಾರೆ. ಈ ಘಟನೆಯ ಕಾರಣ ಪತ್ತೆಗೆ ತನಿಖೆ ನಡೆಸಲಾಗುವುದು' ಎಂದು ಅಟ್ಲಾಸ್ ಏರ್ ತಿಳಿಸಿದೆ.

ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆ ಸಂಬಂಧ ಬೋಯಿಂಗ್ ವಿಮಾನದ ಎಂಜಿನ್ ತಯಾರಕ ಸಂಸ್ಥೆ ಜನರಲ್ ಎಲೆಕ್ಟ್ರಿಕ್ ಮತ್ತು ಅಮೆರಿಕದ ವಿಮಾನಯಾನ ಆಡಳಿತ (ಎಫ್‌ಎಎ) ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ವಿಮಾನ ಹಾರಾಟದಲ್ಲಿರುವಾಗಲೇ ಎಡ ಭಾಗದ ರೆಕ್ಕೆಗೆ ಬೆಂಕಿ ಹೊತ್ತಿಕೊಂಡಿದ್ದ ದೃಶ್ಯದ ವಿಡಿಯೊವೊಂದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ. ಆದರೆ, ಇದು ಅಟ್ಲಾಸ್ ಏರ್ ಬೋಯಿಂಗ್ ವಿಮಾನದ್ದೇ ಎನ್ನುವುದು ತಕ್ಷಣಕ್ಕೆ ಖಚಿತಪಟ್ಟಿಲ್ಲ.

ದೋಣಿ ದುರಂತ: 6 ಬಂಧನ

ವಡೋದರಾ (ಪಿಟಿಐ): ಹರ್ನಿ ಕೆರೆಯಲ್ಲಿ ವಿಹಾರ ನಡೆಸುವಾಗ ದೋಣಿ ಮುಳುಗಿ 12 ಶಾಲಾ ಮಕ್ಕಳು ಹಾಗೂ ಇಬ್ಬರು ಶಿಕ್ಷಕರು ಮೃತಪಟ್ಟ ದುರಂತ ಪ್ರಕರಣಕ್ಕೆ ಸಂಬಂಧಿಸಿ, ಗುತ್ತಿಗೆದಾರ ಸಂಸ್ಥೆಯ ಮೂವರು ನಿರ್ದೇಶಕರು ಸೇರಿ ಆರು ಮಂದಿಯನ್ನು ವಡೋದರಾ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಗುರುವಾರ ಮಧ್ಯಾಹ್ನ ನಡೆದ ಈ ದುರಂತಕ್ಕೆ ಸಂಬಂಧಿಸಿ ಪೊಲೀಸರು, ಹರ್ನಿ ಕೆರೆ ವಲಯದ ಗುತ್ತಿಗೆ ಪಡೆದಿದ್ದ ಕೋಟಿಯಾ ಪ್ರಾಜೆಕ್ಟ್ಸ್‌ನ 18 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು.

ಘಟನೆ ನಡೆದ ದಿನ ಗುರುವಾರ ನಸುಕಿನಲ್ಲಿ ಪೊಲೀಸರು, ಹರ್ನಿ ಲೇಕ್ ವಲಯದ ವ್ಯವಸ್ಥಾಪಕ ಶಾಂತಿಲಾಲ್ ಸೋಲಂಕಿ, ದೋಣಿ ಆಪರೇಟರ್‌ಗಳಾದ ನಯನ್ ಗೋಹಿಲ್ (20) ಮತ್ತು ಅಂಕಿತ್ ವಾಸವ (19) ಅವರನ್ನು ಘಟನಾ ಸ್ಥಳದಲ್ಲಿ ಬಂಧಿಸಿದ್ದರು.

ಪರಿಹಾರ: ದೋಣಿ ದುರಂತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ ₹2ಲಕ್ಷಹಾಗೂಗಾಯಾಳುಗಳಿಗೆತಲಾ₹50ಸಾವಿರಪರಿಹಾರ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ.

ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಮೃತರ ಕುಟುಂಬಗಳಿಗೆ ತಲಾ ₹4 ಲಕ್ಷ ಹಾಗೂ ಗಾಯಾಳುಗಳಿಗೆ ₹50 ಸಾವಿರ ಪರಿಹಾರ ಪ್ರಕಟಿಸಿದ್ದಾರೆ.

ದೋಣಿಯಲ್ಲಿ 14 ಜನರಿಗೆ ಮಾತ್ರ ಸ್ಥಳಾವಕಾಶವಿತ್ತು. ಆದರೆ, ಇದರ ದುಪ್ಪಟ್ಟು ಸಂಖ್ಯೆಯಲ್ಲಿ ಜನರನ್ನು ಕೂರಿಸಿಕೊಂಡು ಹೋಗಿದ್ದೇ ಈ ಅವಘಡಕ್ಕೆ ಕಾರಣ ಎಂಬುದಾಗಿ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿಖಿಲ್ ಗುಪ್ತಾ ಹಸ್ತಾಂತರ: ಜೆಕ್ ಕೋರ್ಟ್ ಅಸ್ತು

ಪ್ರಾಗ್ (ರಾಯಿಟರ್ಸ್): ಅಮೆರಿಕದ ನೆಲದಲ್ಲಿ ಸಿಖ್ ಪ್ರತ್ಯೇಕತಾವಾದಿ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಗೆ ನಡೆಸಿದ ವಿಫಲ ಸಂಚಿನಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಭಾರತೀಯ ವ್ಯಕ್ತಿ ನಿಖಿಲ್ ಗುಪ್ತಾ (52) ಅವರನ್ನು ಅಮೆರಿಕಕ್ಕೆ ಹಸ್ತಾಂತರ ಮಾಡಬಹುದು ಎಂದು ಜೆಕ್ ನ್ಯಾಯಾಲಯ ಶುಕ್ರವಾರ ತೀರ್ಪು ನೀಡಿದೆ ಎಂದು ನ್ಯಾಯ ಸಚಿವಾಲಯ ಶುಕ್ರವಾರ ಹೇಳಿದೆ.

'ನಿಖಿಲ್ ಗುಪ್ತಾ ಅವರನ್ನು ಹಸ್ತಾಂತರಿಸಬಹುದು, ಆದರೆ, ನ್ಯಾಯ ಸಚಿವ ಪಾವೆಲ್ ಬ್ಲೇಜೆಕ್ ಅವರು ಈ ಸಂಬಂಧ ಅಂತಿಮ ತೀರ್ಮಾನ ತೆಗೆದುಕೊಳ್ಳುವಂತೆ ನ್ಯಾಯಾಲಯ ಆದೇಶ ನೀಡಿದೆ' ಎಂದು ಸಚಿವಾಲಯದ ವಕ್ತಾರ 'ರಾಯಿಟರ್ಸ್' ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಆಸ್ಟ್ರೇಲಿಯನ್ ಓಪನ್: ಸಬಲೆಂಕಾ, ಸಿನ್ನರ್‌ಗೂ ನಿರಾಯಾಸ ಗೆಲುವು

ಅಮೋಘವಾಗಿ ಗೆದ್ದ ಜೊಕೊವಿಚ್

ಮೆಲ್ಬರ್ನ್ (ಎಎಫ್‌ಪಿ): ತಮ್ಮ ಎಂದಿನ ಲಹರಿಯಲ್ಲಿ ಆಡಿದ ನೊವಾಕ್ ಜೊಕೊವಿಚ್ ನೇರ ಸೆಟ್‌ಗಳ ಗೆಲುವಿನೊಡನೆ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಅಂತಿಮ 16ರ ಸುತ್ತಿಗೆ ಮುನ್ನುಗ್ಗಿದರು. ಅರಿನಾ ಸಬಲೆಂಕಾ ಮತ್ತು ಯಾನಿಕ್ ಸಿನ್ನರ್ ಕೂಡ ಶುಕ್ರವಾರ ನಡೆದ ಪಂದ್ಯಗಳಲ್ಲಿ ಗೆಲ್ಲಲು ಕಷ್ಟಪಡಲಿಲ್ಲ.

ಈ ಮೊದಲಿನ ಸುತ್ತುಗಳಲ್ಲಿ ಲಯಕ್ಕೆ ಪರದಾಡಿದ್ದ ಹತ್ತು ಬಾರಿಯ ಚಾಂಪಿಯನ್ ಜೊಕೊವಿಚ್ ಅವರು ರಾಡ್ ಲೇವರ್ ಅರೇನಾದಲ್ಲಿ ಈ ಬಾರಿ ಅತ್ಯುತ್ತಮ ಆಟ ಕಂಡುಕೊಂಡರು. ಸರ್ಬಿಯಾದ ಸೂಪರ್ ಸ್ಟಾರ್ ಆಟಗಾರ 6-3, 6-3, 7-6 (2) ರಿಂದ ಅರ್ಜೆಂಟಿನಾದ ಥಾಮಸ್ ಮಾರ್ಟಿನ್ ಇಚೆವೆರಿ ಅವರನ್ನು ಸೋಲಿಸಿದರು.

'ಇವತ್ತಿನ ಆಟದಿಂದ ಸಮಾಧಾನ ವಾಗಿದೆ' ಎಂದು ಆಸ್ಟ್ರೇಲಿಯನ್ ಓಪನ್‌ನಲ್ಲಿ ನೂರನೇ ಪಂದ್ಯವಾಡಿದ ಜೊಕೊವಿಚ್ ಹೇಳಿದರು. ರೋಜರ್ ಫೆಡರರ್ (117) ಮತ್ತು ಸೆರೆನಾ ವಿಲಿಯಮ್ಸ್ (105) ಮಾತ್ರ ಇಲ್ಲಿ ಅವರಿಗಿಂತ ಹೆಚ್ಚು ಪಂದ್ಯಗಳಲ್ಲಿ ಆಡಿದ್ದರು.

ಮಹಿಳೆಯರ ವಿಭಾಗದಲ್ಲಿ ಅಮೆರಿಕ ಓಪನ್ ಚಾಂಪಿಯನ್ ಕೊಕೊ ಗಫ್ (ಅಮೆರಿಕ) 6-0, 6-2 ರಿಂದ ಸ್ವದೇಶದ ಅಲಿಸಿಯಾ ಪಾರ್ಕ್ಸ್ ವಿರುದ್ಧ ಗೆಳಿಸಿದರೆ, 16ರ ಹರೆಯದ ಮಿರಾ ಆಂಡ್ರೀವಾ (ರಷ್ಯಾ) ಕನಸಿನ ಓಟವನ್ನು ಮುಂದುವರಿಸಿ ಫ್ರಾನ್ಸ್‌ನ ಡಯಾನ ಪಾರಿ ಅವರನ್ನು 1-6, 6-1, 7-6 ರಿಂದ ಹಿಮ್ಮೆಟ್ಟಿಸಿದರು.



ನೊವಾಕ್ ಜೊಕೊವಿಚ್ —ಎಎಫ್‌ಪಿ ಚಿತ್ರ

ಇವರನ್ನು, ರಷ್ಯಾದ ಮತ್ತೊರ್ವ ಯುವ ಆಟಗಾರ್ತಿ ಮರಿಯಾ ಟಿಮೊಫೀವಾ ನಾಲ್ಕನೇ ಸುತ್ತಿನಲ್ಲಿ ಸೇರಿಕೊಂಡರು. ಟಿಮೊಫೀವಾ 7-6 (9/7), 6-3 ರಿಂದ ಹತ್ತನೇ ಶ್ರೇಯಾಂಕದ ಬೀಟ್ರಿಜ್ ಹದದ್ ಮಯಿಯ (ಬ್ರೆಜಿಲ್) ಅವರನ್ನು ಮಣಿಸಿದರು. ಈ ಮೊದಲು, 170ನೇ ಕ್ರಮಾಂಕದ ಈ ಆಟಗಾರ್ತಿ, ಮಾಜಿ ಚಾಂಪಿಯನ್ ಕರೋಲಿನ್ ವೊಜ್ನಿಯಾಕಿ ವಿರುದ್ಧ ಜಯಗಳಿಸಿದ್ದೂ ಅಚ್ಚರಿಗೆ ಕಾರಣವಾಗಿತ್ತು. 2017ರ ನಂತರ ಇಷ್ಟು ಕೆಳಕ್ರಮಾಂಕದ ಆಟಗಾರ್ತಿಯೊಬ್ಬರು ನಾಲ್ಕನೇ ಸುತ್ತಿಗೆ ತಲುಪಿದ್ದು ಇದೇ ಮೊದಲು.

ಹಾಲಿ ಚಾಂಪಿಯನ್ ಸಬಲೆಂಕಾ 6-0, 6-0 ಯಿಂದ 28ನೇ ಶ್ರೇಯಾಂಕದ ಲೆಸಿಯಾ ಸುರೆಂಕೊ ಅವರನ್ನು ಸದೆಬಡಿದರು.

ಯಾನಿಕ್ ಸಿನ್ನರ್ 6-0, 6-1, 6-3 ರಿಂದ ಸೆಬಾಸ್ಟಿಯನ್ ಬೇಜ್ ಮೇಲೆ ಗೆಲ್ಲುವ ಹಾದಿಯಲ್ಲಿ ಕಳೆದುಕೊಂಡಿದ್ದು ನಾಲ್ಕು ಗೇಮ್‌ಗಳನ್ನಷ್ಟೇ.

ಡಬಲ್ಸ್‌ನಲ್ಲಿ ಬೋಪಣ್ಣ–ಎಬ್ಡೆನ್ ಮೂರನೇ ಸುತ್ತಿಗೆ

ಮೆಲ್ಬರ್ನ್ (ಪಿಟಿಐ): ಎರಡನೇ ಶ್ರೇಯಾಂಕದ ಭಾರತ–ಆಸ್ಟ್ರೇಲಿಯಾ ಜೋಡಿಯಾದ ರೋಹನ್ ಬೋಪಣ್ಣ ಮತ್ತು ಮ್ಯಾಥ್ಯೂ ಎಬ್ಡೆನ್ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಪಂದ್ಯದಲ್ಲಿ ಶುಕ್ರವಾರ ನೇರ ಸೆಟ್‌ಗಳ ಗೆಲುವು ಪಡೆದು ಮೂರನೇ ಸುತ್ತಿಗೆ ಮುನ್ನಡೆದರು.

ಬೋಪಣ್ಣ–ಎಬ್ಡೆನ್ ಜೋಡಿ ಎರಡನೇ ಸುತ್ತಿನ ಆಟದಲ್ಲಿ 6-2, 6-4 ರಿಂದ ಆತಿಥೇಯ ದೇಶದ ಜಾನ್ ಮಿಲ್ಮನ್– ಎಡ್ವರ್ಡ್ ವಿಂಟರ್ ಅವರನ್ನು ಸೋಲಿಸಿದರು. ಮಿಲ್ಮನ್– ವಿಂಟರ್ ಅವರು ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದರು.

ಕಿವೀಸ್‌ಗೆ 4ನೇ ಜಯ

ಕ್ರೈಸ್ಟ್‌ಚರ್ಚ್ (ಎಎಫ್‌ಪಿ): ನ್ಯೂಜಿಲೆಂಡ್ ತಂಡ ಶುಕ್ರವಾರ ನಡೆದ ನಾಲ್ಕನೇ ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಏಳು ವಿಕೆಟ್‌ಗಳಿಂದ ಸೋಲಿಸಿತು. ಐದು ಪಂದ್ಯಗಳ ಸರಣಿಯಲ್ಲಿ ನ್ಯೂಜಿಲೆಂಡ್ 4–0 ಮುನ್ನಡೆ ಪಡೆದಿದ್ದು 'ಕ್ಲೀನ್ ಸ್ವೀಪ್' ಹಾದಿಯಲ್ಲಿದೆ. ಭಾನುವಾರ ಅಂತಿಮ ಪಂದ್ಯ ನಡೆಯಲಿದೆ.

ಶಹೀನ್ ಶಾ ಅಫ್ರೀದಿ ದಾಳಿಗೆ 3 ವಿಕೆಟ್‌ಗೆ 20 ರನ್ ಗಳಿಸಿ ತಂಡ ಪರದಾಡುತ್ತಿದ್ದಾಗ 44 ಎಸೆತಗಳಲ್ಲಿ ಅಜೇಯ 72 ರನ್ ಹೊಡೆದ ಡೇರಿಲ್ ಮಿಚೆಲ್ ಪಂದ್ಯದ ಆಟಗಾರ ಎನಿಸಿದರು.

ಸ್ಕೋರುಗಳು: ಪಾಕಿಸ್ತಾನ: 20 ಓವರುಗಳಲ್ಲಿ 5 ವಿಕೆಟ್‌ಗೆ 158 (ಮೊಹಮ್ಮದ್ ರಿಜ್ವಾಲ್ ಔಟಾಗದೇ 90; ಮ್ಯಾಟ್ ಹೆನ್ರಿ 22ಕ್ಕೆ2, ಲಾಕಿ ಫರ್ಗ್ಯುಸನ್ 27ಕ್ಕೆ2); ನ್ಯೂಜಿಲೆಂಡ್: 18.1 ಓವರುಗಳಲ್ಲಿ 3 ವಿಕೆಟ್‌ಗೆ 159 (ಡೇರಿಲ್ ಮಿಚೆಲ್ ಔಟಾಗದೇ 72, ಗ್ಲೆನ್ ಫಿಲಿಪ್ಸ್ ಔಟಾಗದೇ 70; ಶಹೀನ್ ಶಾ ಅಫ್ರೀದಿ 34ಕ್ಕೆ3)



ಬೆಂಗಳೂರಿನ ಬಿಷಪ್ ಕಾಟನ್ ಶಾಲಾ ಮೈದಾನದಲ್ಲಿ ಶುಕ್ರವಾರ ನಡೆದ ಕಟೋನಿಯನ್ ಶೀಲ್ಡ್ ಕ್ರಿಕೆಟ್ ಟೂರ್ನಿಯ (15 ವರ್ಷದೊಳಗಿನವರ) ಫೈನಲ್‌ನಲ್ಲಿ ಗೋಪಾಲನ್ ನ್ಯಾಷನಲ್ ಶಾಲಾ ತಂಡವು, ಬಿಷಪ್ ಕಾಟನ್ ತಂಡವನ್ನು ಮಣಿಸಿ ಪ್ರಶಸ್ತಿ ಜಯಿಸಿತು. (ನಿಂತವರು– ಎಡದಿಂದ) ರಿತ್ವಿಕ್ ಕುಮಾರ್, ರಾಘವ್ ಅಗರವಾಲ್, ರಾಜರ್ಷಿ ಮಿತ್ರ, ಕುಶ್ ಝಾ, ಎಂ. ಸಾದಿಕ್ (ಮ್ಯಾನೇಜರ್), ಖಲೀಲ್ ಷರೀಫ್ (ಕೋಚ್), ನೀಲೇಶ್ ಸಿ. (ಚೀಫ್ ಮೆಂಟರ್), ಅರವಿಂದ್ ಜಿ. (ನಾಯಕ), ಅಯಾನ್ ಬಿ, ಅಮೋಘ್ ವರ್ಮಾ, ವಿಷ್ಣು ಎ, ಸುಹಾನ್ ಭಂಡಾರಿ, ಸಾಯಿ ವರುಣ್ ಜಿ.ಕೆ. (ನಿಂತವರು) ಕ್ರಿಸ್ ಆಲಿವರ್, ಸರ್ವಾರ್ಥ್ ಭಟ್, ಆಯುಷ್ ಭರತ್, ಅಹಾನ್ ಉಡುಪಿ, ಇಧಾಂತ್ ಕುಮಾರ್ ಸಿನ್ಹಾ, ಸಾತ್ವಿಕ್, ಸುಚಿತ್ —ಪ್ರಜಾವಾಣಿ ಚಿತ್ರ

ರಾಷ್ಟ್ರೀಯ ಟಿಟಿ: ತೇಶುಬ್‌ಗೆ ಬೆಳ್ಳಿ



ಬೆಂಗಳೂರು: ಕರ್ನಾಟಕದ ತೇಶುಬ್ ದಿನೇಶ್ ಅವರು ಇಂದೋರ್‌ನಲ್ಲಿ ನಡೆಯುತ್ತಿರುವ 85ನೇ ಅಂತರ ರಾಜ್ಯ ಯುಟಿಟಿ ಕೆಡೆಟ್ ಮತ್ತು ಸಬ್ ಜೂನಿಯರ್ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ 15 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ.

ಬಾಲಕರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ತೇಶುಬ್ 5-11, 11-5, 5-11, 8-11ರಿಂದ ಪಶ್ಚಿಮ ಬಂಗಾಳದ ಸೋಹಮ್ ಮುಖರ್ಜಿ ವಿರುದ್ಧ ಸೋತು ರನ್ನರ್ ಅಪ್ ಸ್ಥಾನ ಪಡೆದರು.

ಅವರು ಸೆಮಿಫೈನಲ್‌ನಲ್ಲಿ ಪಶ್ಚಿಮ ಬಂಗಾಳದ ದೇಬ್ಜಿತ್ ಭಟ್ಟಾಚಾರ್ಯ ಅವರನ್ನು ಮಣಿಸಿದ್ದರು.

ಟೆನಿಸ್: ರುತುಜಾ ಸೆಮಿಫೈನಲ್‌ಗೆ



ಬೆಂಗಳೂರು: ಭಾರತದ ರುತುಜಾ ಭೋಸಲೆ ಅವರು ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಜಪಾನ್‌ನ ಮೊಯುಕಾ ಉಚಿಜಿಮಾ ಅವರನ್ನು ಮಣಿಸಿದರು.

ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶುಕ್ರವಾರ ಅವರು 6-2, 5-7, 7-6 (5) ಸೆಟ್‌ಗಳಿಂದ ಜಪಾನಿನ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿದರು.

ವೈಲ್ಡ್‌ಕಾರ್ಡ್ ಪಡೆದು ಆಡುತ್ತಿರುವ 27 ವರ್ಷದ ಭಾರತೀಯ ಆಟಗಾರ್ತಿ ಮುಂದಿನ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಫ್ರಾನ್ಸ್‌ನ ಕ್ಯಾರೋಲ್ ಮೊನೆಟ್ ವಿರುದ್ಧ ಸೆಣಸಾಡುವರು. ಎಂಟರ ಘಟ್ಟದ ಪಂದ್ಯದಲ್ಲಿ ಕ್ಯಾರೋಲ್ 6-4, 6-1ರಿಂದ ಐದನೇ ಶ್ರೇಯಾಂಕದ ಸ್ವದೇಶದ ಕ್ಲೋಯ್ ಪ್ಯಾಕೆಟ್ ವಿರುದ್ಧ ಜಯ ಸಾಧಿಸಿದರು.

ಅಗ್ರ ಶ್ರೇಯಾಂಕದ ಲಾಟ್ವಿಯಾದ ದರ್ಜಾ ಸೆಮೆನಿಸ್ಟಾಜಾ 6-3, 6-7 (5), 5-1ರಿಂದ ಐದನೇ ಶ್ರೇಯಾಂಕದ ಪೋಲೀನಾ ಕುದೆರ್ಮೆಟೋವಾ (ರಷ್ಯಾ) ವಿರುದ್ಧ ಗೆಲುವು ಪಡೆದರು. 5-1ರಿಂದ ಹಿನ್ನಡೆಯಲ್ಲಿದ್ದಾಗ ರಷ್ಯಾದ ಆಟಗಾರ್ತಿ ಬೆನ್ನುನೋವಿನಿಂದಾಗಿ ನಿವೃತ್ತರಾದರು.

ಮುಂಬೈಗೆ ವಿಜಯ್ ಮರ್ಚೆಂಟ್ ಟ್ರೋಫಿ

ಬೆಂಗಳೂರು: ಗುಜರಾತ್ ತಂಡವನ್ನು, ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ವಿಜಯ್ ಮರ್ಚೆಂಟ್ ಟ್ರೋಫಿ ಕ್ರಿಕೆಟ್ ಟೂರ್ನಿ ಫೈನಲ್‌ನ ಮೂರನೇ ದಿನವಾದ ಶುಕ್ರವಾರ ಇನಿಂಗ್ಸ್ ಮತ್ತು 38 ರನ್‌ಗಳಿಂದ ಸೋಲಿಸಿದ ಮುಂಬೈ ತಂಡ ಪ್ರಶಸ್ತಿ ಗೆದ್ದುಕೊಂಡಿತು.

ಸ್ಕೋರುಗಳು: ಮೊದಲ ಇನಿಂಗ್ಸ್: ಗುಜರಾತ್: 145, ಮುಂಬೈ: 161.1 ಓವರುಗಳಲ್ಲಿ 376; ಎರಡನೇ ಇನಿಂಗ್ಸ್: ಗುಜರಾತ್: 55.2 ಓವರುಗಳಲ್ಲಿ 193 (ವೇದ್ ಪಟೇಲ್ 30, ಕಾವ್ಯ ಪಿ.ಪಟೇಲ್ 48; ನಿಕಾಶ್ ನೆರುಲರ್ 56ಕ್ಕೆ4, ಪ್ರಸೂನ್ ಸಿಂಗ್ 47ಕ್ಕೆ3, ವೇದಾಂತ ಗುರವ್ 36 ಕ್ಕೆ3).



ಪ್ರಜಾವಾಣಿ
ಶನಿವಾರ ● ಜನವರಿ 20, 2024

ಅಂತಿಮ ಹಂತದ ತಯಾರಿ; ಸಿದ್ಧತೆ ಪರಿಶೀಲಿಸಿದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ

ಅಯೋಧ್ಯೆಯಲ್ಲಿ ಹಬ್ಬದ ಸಂಭ್ರಮ

ಪ್ರಜಾವಾಣಿ ವಾರ್ತೆ/ ಪಿಟಿಐ

ಅಯೋಧ್ಯೆ: ರಾಮ ಮಂದಿರದಲ್ಲಿ ಬಾಲರಾಮನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆಗೆ ಎರಡು ದಿನಗಳು ಬಾಕಿಯಿದ್ದು, ಅಯೋಧ್ಯೆಯಲ್ಲಿ ಶುಕ್ರವಾರವೂ ವಿವಿಧ ಧಾರ್ಮಿಕ ಆಚರಣೆಗಳು ನಡೆದವು. ಸಮಾರಂಭಕ್ಕೆ ಅಂತಿಮ ಹಂತದ ಸಿದ್ಧತೆ ಭರದಿಂದ ಸಾಗಿದ್ದು, ಇಡೀ ನಗರದಲ್ಲಿ ಹಬ್ಬದ ಸಂಭ್ರಮ ಮನೆಮಾಡಿದೆ.

ಬಾಲರಾಮನ ವಿಗ್ರಹವನ್ನು ಗುರುವಾರ ವೇದಘೋಷಗಳ ನಡುವೆ ರಾಮ ಮಂದಿರದ ಗರ್ಭಗುಡಿಯ ಪೀಠದಲ್ಲಿ ಇರಿಸಲಾಗಿದೆ. ಶುಕ್ರವಾರ ಬೆಳಿಗ್ಗೆ 8.30 ರಿಂದ ಮಧ್ಯಾಹ್ನ 3.30ರ ವರೆಗೆ ಧಾರ್ಮಿಕ ಆಚರಣೆಗಳು ನಡೆದವು ಎಂದು ವಿಎಚ್‌ಪಿ ವಕ್ತಾರ ವಿನೋದ್ ಬನ್ಸಲ್ ತಿಳಿಸಿದರು.

ಮೈಸೂರಿನ ಶಿಲ್ಪಿ ಅರುಣ್ ಯೋಗಿ ರಾಜ್ ಕೆತ್ತಿರುವ ವಿಗ್ರಹದ ಮೊದಲ ಚಿತ್ರ ಶುಕ್ರವಾರ ಬಹಿರಂಗಗೊಂಡಿದೆ. ಈ ಚಿತ್ರವನ್ನು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಬಿಡುಗಡೆ ಮಾಡಿದೆ. ನಿಂತ ಭಂಗಿಯಲ್ಲಿರುವ ವಿಗ್ರಹವನ್ನು ಕಪ್ಪು ಶಿಲೆಯಿಂದ ಕೆತ್ತಲಾಗಿದ್ದು, 51 ಇಂಚು ಎತ್ತರ ಇದೆ. ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಈ ಹಿಂದೆ ಬಿಡುಗಡೆ ಮಾಡಿದ್ದ ಚಿತ್ರದಲ್ಲಿ ವಿಗ್ರಹವನ್ನು ಬಟ್ಟೆಯಿಂದ ಸುತ್ತಲಾಗಿತ್ತು.

ಸಿದ್ಧತೆ ಪರಿಶೀಲನೆ: ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಶುಕ್ರವಾರ ಅಯೋಧ್ಯೆಗೆ ಭೇಟಿ ನೀಡಿ ಪ್ರಾಣ ಪ್ರತಿಷ್ಠಾಪನಾ ಸಮಾರಂಭದ ಸಿದ್ಧತೆಯ ಪರಿಶೀಲನೆ ನಡೆಸಿದರು. ಸ್ಥಳೀಯ ಅಧಿಕಾರಿಗಳ ಜತೆ ಸರಣಿ ಸಭೆಗಳನ್ನು ನಡೆಸಿದ ಅವರು ರಾಮ ಮಂದಿರ ಆವರಣಕ್ಕೂ ಭೇಟಿ ನೀಡಿದರು. ಅದಕ್ಕೂ ಮುನ್ನ ಹನುಮಾನ್ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆಯಲ್ಲಿ ಪಾಲ್ಗೊಂಡರು.

'ದೇಶದಾದ್ಯಂತ ಸಂತಸ ಮನೆಮಾಡಿದೆ. ಪ್ರಾಣ ಪ್ರತಿಷ್ಠಾಪನೆ ಸಮಾರಂಭ ನಮಗೆಲ್ಲರಿಗೂ ಐತಿಹಾಸಿಕ ಕ್ಷಣವಾಗಿದೆ. ಅಯೋಧ್ಯೆಯ ಜನರು ಮಾತ್ರವಲ್ಲದೆ ಇಡೀ ದೇಶದ ಜನರು ಆ ಕ್ಷಣಕ್ಕಾಗಿ ಕಾಯುತ್ತಿದ್ದಾರೆ' ಎಂದು ಆದಿತ್ಯನಾಥ ಅವರು ಸುದ್ದಿಗಾರರಿಗೆ ತಿಳಿಸಿದರು.

ಶುಕ್ರವಾರ ಸಂಜೆಯಿಂದ ಸೋಮವಾರದವರೆಗೆ ರಾಮಮಂದಿರಕ್ಕೆ ಭಕ್ತರ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ. ಪ್ರಾಣ ಪ್ರತಿಷ್ಠಾಪನೆಯ ಮರುದಿನ ಅಂದರೆ ಜ.23 ರಿಂದ ಭಕ್ತರು ಮತ್ತು ಸಾರ್ವಜನಿಕರ ಭೇಟಿಗೆ ದೇವಾಲಯ ಮುಕ್ತವಾಗಲಿದೆ.

ಮೋದಿ ಕಠಿಣ ವ್ರತಾಚರಣೆ (ನವದೆಹಲಿ ವರದಿ): ಪ್ರಾಣ ಪ್ರತಿಷ್ಠಾಪನಾ ಸಮಾರಂಭದ 'ಮುಖ್ಯ ಯಜಮಾನ' ಆಗಿರುವ ಪ್ರಧಾನಿ ನರೇಂದ್ರ ಮೋದಿ ಅವರು 11 ದಿನಗಳ ಧಾರ್ಮಿಕ ವಿಧಿಗಳ ಅಂಗವಾಗಿ ಕಟ್ಟುನಿಟ್ಟಿನ ವ್ರತಾಚರಣೆ ಕೈಗೊಂಡಿದ್ದಾರೆ.

ಹೊದಿಕೆ ಹಾಸಿ ನೆಲದಲ್ಲೇ ಮಲಗುವ ಅವರು ಎಳನೀರು ಮಾತ್ರ ಸೇವಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆಹಾರದಲ್ಲಿ ಕಟ್ಟುನಿಟ್ಟು ಪಾಲಿಸುವುದರ ಜತೆಯಲ್ಲೇ ಇತರ ಪೂಜೆ ಹಾಗೂ ಧಾರ್ಮಿಕ ವಿಧಿಗಳನ್ನು ನಡೆಸುತ್ತಿದ್ದಾರೆ. 'ಗೋಪೂಜೆ' ಮತ್ತು 'ಅನ್ನದಾನ' ಒಳಗೊಂಡಂತೆ ವಿವಿಧ ರೀತಿಯ ದಾನಗಳನ್ನು ಕೈಗೊಂಡಿದ್ದಾರೆ.

ಮೋದಿ ಅವರು ಕಳೆದ ಕೆಲ ದಿನಗಳಿಂದ ದೇಶದ ವಿವಿಧ ಭಾಗಗಳಲ್ಲಿರುವ ದೇವಾಲಯಗಳಿಗೆ ಭೇಟಿ ನೀಡುತ್ತಿದ್ದಾರೆ. ನಾಸಿಕ್‌ನ ಕಾಳಾರಾಮ್ ದೇವಸ್ಥಾನ, ಆಂಧ್ರ ಪ್ರದೇಶದ ಲೇಪಾಕ್ಷಿಯ ವೀರಭದ್ರ ದೇವಾಲಯ, ಕೇರಳದ ಗುರುವಾಯೂರು ಮತ್ತು ತ್ರಿಪ್ರಯಾರ್ ದೇವಾಲಯಗಳಿಗೆ ಭೇಟಿ ನೀಡಿ ವಿಶೇಷ ಪೂಜೆಯಲ್ಲಿ ಪಾಲ್ಗೊಂಡಿದ್ದಾರೆ. ಮುಂದಿನ ಎರಡು ದಿನ ಅವರು ತಮಿಳುನಾಡಿನ ದೇವಾಲಯಗಳಿಗೆ ಭೇಟಿ ನೀಡಲಿದ್ದು, ಆ ಬಳಿಕ ಪ್ರಾಣ ಪ್ರತಿಷ್ಠಾಪನೆ ಸಮಾರಂಭಕ್ಕಾಗಿ ಅಯೋಧ್ಯೆಗೆ ಪ್ರಯಾಣಿಸಲಿದ್ದಾರೆ.

ಜೈಲುಗಳಲ್ಲಿ ನೇರ ಪ್ರಸಾರ: ಪ್ರಾಣ ಪ್ರತಿಷ್ಠಾಪನಾ ಸಮಾರಂಭದ ನೇರ ಪ್ರಸಾರಕ್ಕಾಗಿ ಉತ್ತರ ಪ್ರದೇಶದ ಜೈಲುಗಳಲ್ಲಿ ವ್ಯವಸ್ಥೆ ಮಾಡಲಾಗಿದೆ. ಜೈಲುಗಳಲ್ಲಿ ಕೈದಿಗಳಿಗೆ 'ಭಜನೆ' ಮತ್ತು 'ಕೀರ್ತನೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 'ಜೈಲುಗಳಲ್ಲಿ ನೇರ ಪ್ರಸಾರಕ್ಕೆ ಎಲ್ಲ ವ್ಯವಸ್ಥೆ ಮಾಡಲಾಗಿದೆ' ಎಂದು ಉತ್ತರ ಪ್ರದೇಶದ ಸಚಿವ ಧರ್ಮವೀರ್ ಪ್ರಜಾಪತಿ ತಿಳಿಸಿದ್ದಾರೆ.



ಅಯೋಧ್ಯೆಯಲ್ಲಿ ನಿರ್ಮಾಣಗೊಂಡಿರುವ ರಾಮ ಮಂದಿರವು ಶುಕ್ರವಾರ ರಾತ್ರಿ ವಿದ್ಯುತ್ ದೀಪಗಳಿಂದ ಕಂಗೊಳಿಸಿತು —ಪಿಟಿಐ ಚಿತ್ರ

- ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಸೇರಿದಂತೆ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳಿಗೆ ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕೆ ಆಹ್ವಾನ ನೀಡಲಾಗಿದೆ
- ಪ್ರಾಣ ಪ್ರತಿಷ್ಠಾಪನಾ ಸಮಾರಂಭದ ಹಿನ್ನೆಲೆಯಲ್ಲಿ ಅಯೋಧ್ಯೆಯಲ್ಲಿ 16 ಕಡೆ ಪ್ರಥಮ ಚಿಕಿತ್ಸಾ ಕೇಂದ್ರಗಳನ್ನು ತೆರೆಯಲಾಗುವುದು ಎಂದು ಅಯೋಧ್ಯೆಯ ಮುಖ್ಯ ವೈದ್ಯಾಧಿಕಾರಿ ಡಾ.ಸಂಜಯ್ ಜೈನ್ ತಿಳಿಸಿದ್ದಾರೆ.
- ಅಯೋಧ್ಯೆಯ ವಿವಿಧ ಜಾಗಗಳಲ್ಲಿ 40 ಆಂಬುಲೆನ್ಸ್‌ಗಳನ್ನು ನಿಯೋಜಿಸಲಾಗುತ್ತದೆ
- ತುರ್ತು ಅಗತ್ಯದ ಸಂದರ್ಭದಲ್ಲಿ ಕಾರ್ಯಾಚರಣೆಗಾಗಿ ಎನ್‌ಡಿಆರ್‌ಎಫ್‌ನ ಕೆಲವು ತುಕಡಿಗಳನ್ನು ಅಯೋಧ್ಯೆಯಲ್ಲಿ ನಿಯೋಜಿಸಲಾಗಿದೆ.
- ನವದೆಹಲಿಯ ಜಾಮಿಯಾ ಮಿಲ್ಲಿಯಾ ಇಸ್ಲಾಮಿಯಾ ಜ.22 ರಂದು ಅರ್ಧದಿನ (ಮಧ್ಯಾಹ್ನ 2.30ರ ವರೆಗೆ) ರಜೆ ಘೋಷಿಸಿದೆ

ಗಣ್ಯರ ಪಟ್ಟಿಯಲ್ಲಿ ಅಂಬಾನಿ, ಬಚ್ಚನ್

ರಿಲಯನ್ಸ್ ಇಂಡಸ್ಟ್ರೀಸ್‌ನ ಅಧ್ಯಕ್ಷ, ಉದ್ಯಮಿ ಮುಕೇಶ್ ಅಂಬಾನಿ ಮತ್ತು ಬಾಲಿವುಡ್ ನಟ ಅಮಿತಾಭ್ ಬಚ್ಚನ್ ಅವರು ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕೆ ಆಹ್ವಾನ ಪಡೆದ ಗಣ್ಯರ ಪಟ್ಟಿಯಲ್ಲಿ ಇದ್ದಾರೆ.

ಸಮಾರಂಭಕ್ಕೆ 8 ಸಾವಿರಕ್ಕೂ ಅಧಿಕ ಮಂದಿಯನ್ನು ಆಹ್ವಾನಿಸಲಾಗಿದೆ. ಅದರಲ್ಲಿ ರಾಜಕಾರಣಿಗಳು, ಸಿನಿಮಾ ತಾರೆಯರು, ಕ್ರೀಡಾಪಟುಗಳು ಮತ್ತು ಅಧಿಕಾರಿಗಳು ಸೇರಿದಂತೆ ನೂರಕ್ಕೂ ಅಧಿಕ ಮಂದಿಯನ್ನು ಗಣ್ಯರ ಪಟ್ಟಿಗೆ ಸೇರಿಸಲಾಗಿದೆ.

ನಟರಾದ ಅಜಯ್ ದೇವಗನ್, ಅಕ್ಷಯ್ ಕುಮಾರ್, ಅಲ್ಲು ಅರ್ಜುನ್, ಮೋಹನ್ ಲಾಲ್, ಅನುಪಮ್ ಖೇರ್, ಚಿರಂಜೀವಿ ಅಲ್ಲದೆ ಸರೋದ್ ಮಾಂತ್ರಿಕ ಅಮ್ಜದ್ ಅಲಿ ಖಾನ್, ಗೀತ ರಚನೆಕಾರ ಪ್ರಸೂನ್ ಜೋಶಿ, ನಿರ್ದೇಶಕ ಸಂಜಯ್ ಬನ್ಸಾಲಿ, ಚಂದ್ರಪ್ರಕಾಶ್ ದ್ವಿವೇದಿ ಪಾಲ್ಗೊಳ್ಳಲಿದ್ದಾರೆ.

ಉದ್ಯಮಿಗಳಲ್ಲಿ ಅಂಬಾನಿ ಕುಟುಂಬದ ಸದಸ್ಯರು, ಆದಿತ್ಯ ಬಿರ್ಲಾ ಸಮೂಹದ ಕುಮಾರ ಮಂಗಲಂ ಬಿರ್ಲಾ, ಮಹೀಂದ್ರಾ ಅಂಡ್ ಮಹೀಂದ್ರಾ ಕಂಪನಿಯ ಆನಂದ್ ಮಹೀಂದ್ರಾ, ಇನ್ಫೊಸಿಸ್ ಸ್ಥಾಪಕ ಎನ್.ಆರ್.ನಾರಾಯಣ ಮೂರ್ತಿ, ಜಿಂದಾಲ್ ಸ್ಟೀಲ್ ಮತ್ತು ಪವರ್ ಕಂಪನಿ ಅಧ್ಯಕ್ಷ ನವೀನ್ ಜಿಂದಾಲ್ ಒಳಗೊಂಡಿದ್ದಾರೆ.

100 ಖಾಸಗಿ ವಿಮಾನಗಳ ಸಂಚಾರ

ಅಯೋಧ್ಯೆ (ರಾಯಿಟರ್ಸ್): ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕಾಗಿ ಅಯೋಧ್ಯೆಗೆ ಬರುವ ಗಣ್ಯರನ್ನು ಕರೆತರಲು ದೇಶದ ವಿವಿಧ ಭಾಗಗಳಿಂದ ಸುಮಾರು 100 ಖಾಸಗಿ ವಿಮಾನಗಳು ಸಂಚರಿಸಲಿವೆ.

ಜ.22 ರಂದು ಅಯೋಧ್ಯೆ ಹಾಗೂ ಸಮೀಪದ ನಗರಗಳ ವಿಮಾನ ನಿಲ್ದಾಣಗಳಲ್ಲಿ 100 ವಿಮಾನಗಳು ಇಳಿಯಲಿವೆ ಎಂದು ಅಧಿಕಾರಿಗಳು ಅಂದಾಜು ಮಾಡಿದ್ದಾರೆ. ಅಯೋಧ್ಯೆ ವಿಮಾನ ನಿಲ್ದಾಣ ಅಲ್ಲದೆ ವಾರಾಣಸಿ ಮತ್ತು ಗೋರಖ್‌ಪುರ ವಿಮಾನ ನಿಲ್ದಾಣಗಳಲ್ಲೂ ಖಾಸಗಿ ವಿಮಾನಗಳು ಇಳಿಯಲು ಅನುಮತಿ ನೀಡಲಾಗಿದೆ.

'ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕೆ ಆಹ್ವಾನ ಲಭಿಸಿರುವುದು ಹಲವರಿಗೆ ಪ್ರತಿಷ್ಠೆಯ ವಿಚಾರ' ಎಂದು ಖಾಸಗಿ ವಿಮಾನ ಸೇವೆ ಒದಗಿಸುವ 'ಕ್ಲಬ್ ಒನ್ ಏರ್' ಸಂಸ್ಥೆಯ ಸಿಇಒ ರಾಜನ್ ಮೆಹ್ರಾ ಹೇಳಿದ್ದಾರೆ. ಆದರೆ ಖಾಸಗಿ ವಿಮಾನ ಸೇವೆಗೆ ಎಷ್ಟು ದರ ನಿಗದಿಪಡಿಸಲಾಗುತ್ತದೆ ಎಂಬುದನ್ನು ಅವರು ಬಹಿರಂಗಪಡಿಸಿಲ್ಲ. ಖಾಸಗಿ ವಿಮಾನ ಬುಕಿಂಗ್ ವೆಬ್‌ಸೈಟ್ 'JetSetGo' ಪ್ರಕಾರ, ಒಂಬತ್ತು ಮಂದಿ ಪ್ರಯಾಣಿಸಬಲ್ಲ 'ಫಾಲ್ಕನ್ 2000' ವಿಮಾನದ ಮುಂಬೈ–ಗೋರಖ್‌ಪುರ– ಮುಂಬೈ ನಡುವಣ ಪ್ರಯಾಣಕ್ಕೆ ₹ 61.47 ಲಕ್ಷ ದರ ನಿಗದಿಪಡಿಸಲಾಗಿದೆ.

ಸುದ್ದಿ 2 ನಿಮಿಷ

ಸ್ವಾಮೀಜಿಗಳಿಂದ ಅಪದ್ಧ ಮಾತು ನಿರೀಕ್ಷಿಸಿರಲಿಲ್ಲ: ಪ್ರತಾಪ ಸಿಂಹ

ಮೈಸೂರು: 'ಶಂಕರಾಚಾರ್ಯರ ಮಠಗಳಿಗೆ ದೊಡ್ಡ ಹಿನ್ನೆಲೆಯಿದೆ. ಪರಂಪರೆ ಇರುವ ಮಠಗಳ ಸ್ವಾಮೀಜಿಗಳಿಂದ ಅಪದ್ಧ ಮಾತುಗಳು ಬರುತ್ತವೆಂದು ನಿರೀಕ್ಷಿಸಲಿರಲಿಲ್ಲ. ಅದಕ್ಕೆ ಜನ ಗಮನ ಕೊಡುತ್ತಿಲ್ಲ' ಎಂದು ಸಂಸದ ಪ್ರತಾಪ ಸಿಂಹ ಹೇಳಿದರು.

'ಶಂಕರಚಾರ್ಯ ಮಠಗಳ ಸ್ವಾಮೀಜಿಗಳ ಹಿನ್ನೆಲೆ ಹಾಗೂ ಅವರ ರಾಜಕೀಯದ ನಿಲುವೇನೆಂದು ಗೊತ್ತಿದೆ. ಜಯೇಂದ್ರ ಸರಸ್ವತಿ ಅವರನ್ನು ಯುಪಿಎ ಸರ್ಕಾರ ಬಂಧಿಸಿದಾಗ, ಈ ಯಾವ ಸ್ವಾಮೀಜಿಗಳಿಗೂ ಧ್ವನಿಯೇ ಇರಲಿಲ್ಲ' ಎಂದರು.

ನಗರದಲ್ಲಿ ಶುಕ್ರವಾರ ಮಾತನಾಡಿ, '2014ರ ಲೋಕಸಭಾ ಚುನಾವಣೆಯಲ್ಲಿ ವಾರಾಣಸಿಯಲ್ಲಿ ನರೇಂದ್ರ ಮೋದಿ ವಿರುದ್ಧ ನಿಲ್ಲಲು ಹೋದವರು ಅವರು. ಇದೀಗ ಒಳ್ಳೆಯ ಕೆಲಸ ಮಾಡುವಾಗ ಖಾವಿ ಹಾಕಿಕೊಂಡವರು ಮಾತನಾಡುತ್ತಿದ್ದಾರೆ. ಮಾತನಾಡಲಿ. ರಾಮಮಂದಿರ ಅಪೂರ್ಣ ಎನ್ನುವವರಿಗೆ ಪರಿಪೂರ್ಣವಾದ ಜ್ಞಾನವಿಲ್ಲ' ಎಂದು ತಿರುಗೇಟು ನೀಡಿದರು.

'ದೇಶದಲ್ಲಿ ಭವ್ಯವಾದ ದೇಗುಲಗಳನ್ನು ಕಟ್ಟಲು ನೂರಾರು ವರ್ಷ ಸಮಯ ವ್ಯಯಿಸಿರುವುದು ಕಾಣುತ್ತದೆ. ಬೇಲೂರಿನ ಚನ್ನಕೇಶವ ದೇಗುಲ ನಿರ್ಮಿಸಲು 103 ವರ್ಷ ಬೇಕಾಯಿತು. ಚಾಮುಂಡೇಶ್ವರಿ ದೇಗುಲ ಹೊಯ್ಸಳರ ಕಾಲದಲ್ಲಿ ಆರಂಭವಾಗಿ ಯದುವಂಶದ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದ ವರೆಗೂ ಅಭಿವೃದ್ಧಿ ಹೊಂದಿದೆ' ಎಂದು ಉದಾಹರಿಸಿದರು.



ಮಂತ್ರಾಕ್ಷತೆಗಾಗಿ ಮಾಂಸ ನೈವೇದ್ಯ ಬಿಟ್ಟ ಗ್ರಾಮಸ್ಥರು

ನಾಗಮಂಗಲ: ಅಯೋಧ್ಯೆಯ ಶ್ರೀರಾಮ ಮಂತ್ರಾಕ್ಷತೆಯನ್ನು ಪೂಜಿಸುವ ಪ್ರಯುಕ್ತ, ತಾಲ್ಲೂಕಿನ ಬಿಂಡಿಗನವಿಲೆ ಹೋಬಳಿಯ ನಾರಗೋನಹಳ್ಳಿಯ ಗವಿರಂಗನಾಥಸ್ವಾಮಿ ದೇವಾಲಯದಲ್ಲಿ ಮಾಂಸ ನೈವೇದ್ಯವಿಡುವ ವಾಡಿಕೆಯನ್ನೇ ಗ್ರಾಮಸ್ಥರು ತ್ಯಜಿಸಿದ್ದಾರೆ.

ದೇವಾಲಯದಲ್ಲಿ ಸಂಕ್ರಾಂತಿ ಹಬ್ಬದ ಮಾರನೇ ದಿನ ದೇವರಿಗೆ ಮಾಂಸಾಹಾರ ನೈವೇದ್ಯವಿಟ್ಟು ಸಂಬಂಧಿಕರು ಹಾಗೂ ಸ್ನೇಹಿತರನ್ನು ಮನೆಗೆ ಊಟಕ್ಕೆ ಕರೆಯುವುದು ವಾಡಿಕೆ. ಆದರೆ ಆ ಸಮಯದಲ್ಲೇ ಗ್ರಾಮದ ಪ್ರತೀ ಮನೆಗೆ ಮಂತ್ರಾಕ್ಷತೆ ತಲುಪಿರುವುದರಿಂದ, ಮಾಂಸಾಹಾರವನ್ನು ತ್ಯಜಿಸಿ ಮಂತ್ರಾಕ್ಷತೆಯನ್ನು ಪೂಜಿಸುತ್ತಿದ್ದಾರೆ. ಗ್ರಾಮದ ರಾಜಬೀದಿಗಳಲ್ಲಿ ಕೇಸರಿ ಧ್ವಜ ಬಂಟಿಂಗ್‌ಗಳು ರಾರಾಜಿಸುತ್ತಿವೆ. ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಟ್ರ್ಯಾಕ್ಟರ್ ರ‍್ಯಾಲಿಯೂ ಶುಕ್ರವಾರ ನಡೆಯಿತು.

'ಉನ್ನತಾಧಿಕಾರ ಸಮಿತಿ ವಿಸರ್ಜಿಸಿ'

ಏಕಕಾಲದಲ್ಲಿ ಚುನಾವಣೆ ನಡೆಸುವ ಬಗ್ಗೆ ಪರಿಶೀಲನೆಗೆ ರಚಿಸಿರುವ ಸಮಿತಿ



ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಆಲೋಚನೆಯು 'ಪ್ರಜಾತಂತ್ರ ವಿರೋಧಿ' ಎಂದು ಆಕ್ರೋಶ ವ್ಯಕ್ತಪಡಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಇದು ಒಕ್ಕೂಟ ವ್ಯವಸ್ಥೆ ಹಾಗೂ ಸಂವಿಧಾನದ ಮೂಲ ಸ್ವರೂಪಕ್ಕೆ ವಿರುದ್ಧವಾಗಿದೆ ಎಂದು ಹೇಳಿದ್ದಾರೆ.

ಏಕಕಾಲಕ್ಕೆ ಚುನಾವಣೆ ನಡೆಸುವ ಆಲೋಚನೆಯನ್ನು ಕೈಬಿಡಬೇಕು, ಇದರ ಬಗ್ಗೆ ಅಧ್ಯಯನ ನಡೆಸಲು ರಚಿಸಿರುವ ಉನ್ನತಾಧಿಕಾರ ಸಮಿತಿಯನ್ನು ವಿಸರ್ಜಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ. 'ಒಂದು ದೇಶ, ಒಂದು ಚುನಾವಣೆ'ಗೆ ಸಂಬಂಧಿಸಿದ ಸಮಿತಿಯ ಕಾರ್ಯದರ್ಶಿ ನಿತಿನ್ ಚಂದ್ರ ಅವರಿಗೆ ಖರ್ಗೆ ಅವರು ಈ ಪತ್ರ ಬರೆದಿದ್ದಾರೆ.

ಚಂದ್ರ ಅವರು ಅಕ್ಟೋಬರ್ 18ರಂದು ಬರೆದ ಪತ್ರದಲ್ಲಿ, ಸಮಿತಿಯ ಪರಿಶೀಲನೆಗೆ ಸಲಹೆಗಳನ್ನು ಕಳುಹಿಸಬೇಕು ಎಂದು ಕೇಳಿದ್ದರು. ಇದಕ್ಕೆ ಪ್ರತಿಯಾಗಿ ಖರ್ಗೆ ಅವರು ಪತ್ರ ಬರೆದಿದ್ದಾರೆ. ಸಮಿತಿಯು ತನ್ನ ನಿಲುವು ಏನಿರಬೇಕು ಎಂಬುದನ್ನು ಈಗಾಗಲೇ ತೀರ್ಮಾನಿಸಿರುವಂತಿದೆ, ಸಮಾಲೋಚನೆಗೆ ಮುಂದಾಗುತ್ತಿರುವುದು ಕಣ್ಣೊರೆಸುವ ತಂತ್ರವೆಂಬಂತೆ ಕಾಣುತ್ತಿದೆ ಎಂದು ಖರ್ಗೆ ಹೇಳಿದ್ದಾರೆ.

ಸಮಿತಿಯ ಸಂರಚನೆಯು ಪಕ್ಷಪಾತಿಯಾಗಿದೆ. ಸಮಿತಿಯ ಶಿಫಾರಸುಗಳು ರಾಜ್ಯ ಸರ್ಕಾರಗಳ ಮೇಲೆಯೂ ಪರಿಣಾಮ ಬೀರುತ್ತದೆ. ಆದರೆ, ಬೇರೆ ಬೇರೆ ರಾಜ್ಯಗಳಲ್ಲಿ ಸರ್ಕಾರದ ನೇತೃತ್ವ ವಹಿಸಿರುವ ವಿರೋಧ ಪಕ್ಷಗಳಿಗೆ ಈ ಸಮಿತಿಯಲ್ಲಿ ಗಮನಾರ್ಹವಾದ ಪ್ರಾತಿನಿಧ್ಯವೇ ಇಲ್ಲ ಎಂದು ಖರ್ಗೆ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ದೇಶದ ಮಾಜಿ ರಾಷ್ಟ್ರಪತಿಯೇ ಈ ಸಮಿತಿಯ ನೇತೃತ್ವ ವಹಿಸಿದ್ದಾರೆ. ಆದರೆ, ಸಮಿತಿ ನಡೆಸುವ ಸಮಾಲೋಚನೆಯು ತೋರಿಕೆಯದ್ದು ಮಾತ್ರ ಎಂದು ಸಾಮಾನ್ಯ ಮತದಾರರಿಗೆ ಕೂಡ ಅನಿಸುತ್ತಿರುವುದು ನೋವು ತರುವಂಥದ್ದು. ಪ್ರಸ್ತಾವದ ಪರವಾಗಿ ಪ್ರಬಲವಾಗಿ ಅನಿಸಿಕೆಗಳನ್ನು ಈಗಾಗಲೇ ಸಾರ್ವಜನಿಕವಾಗಿ ಹೇಳಿಯಾಗಿದೆ. ಪ್ರಸ್ತಾವದ ಸಾಧಕ, ಬಾಧಕಗಳ ಬಗ್ಗೆ ರಾಗದ್ವೇಷಗಳು ಇಲ್ಲದೆ ವಿಶ್ಲೇಷಣೆ ನಡೆಸುವ ಗಂಭೀರ ಹಾಗೂ ವ್ಯವಸ್ಥಿತ ಯತ್ನವು ಆಗುತ್ತಿಲ್ಲ' ಎಂದು ಖರ್ಗೆ ಅವರು ಪತ್ರದಲ್ಲಿ ಬರೆದಿದ್ದಾರೆ.

ತಾವು ಜಾರಿಗೆ ತರಲು ಯತ್ನಿಸುತ್ತಿರುವ ಆಲೋಚನೆಯು ಸಂವಿಧಾನದ ಮೂಲಸ್ವರೂಪಕ್ಕೆ ವಿರುದ್ಧ ಹಾಗೂ ಆಲೋಚನೆಯನ್ನು ಅನುಷ್ಠಾನಕ್ಕೆ ತರಬೇಕು ಎಂದಾದರೆ ಮೂಲಸ್ವರೂಪದಲ್ಲಿ ಗಣನೀಯವಾದ ಬದಲಾವಣೆಯನ್ನು ತರಬೇಕಾಗುತ್ತದೆ ಎಂಬುದನ್ನು ಸರ್ಕಾರ ಹಾಗೂ ಸಮಿತಿಯು ಆರಂಭದಲ್ಲಿಯೇ ಪ್ರಾಮಾಣಿಕವಾಗಿ ಹೇಳಬೇಕಿತ್ತು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಪತ್ರದಲ್ಲಿನ ಮುಖ್ಯಾಂಶ

- ಈ ದೇಶದ ಸಂಸದೀಯ ಪ್ರಜಾಪ್ರಭುತ್ವ, ಸಂವಿಧಾನವನ್ನು ಬುಡಮೇಲು ಮಾಡುವ ಕೇಂದ್ರ ಸರ್ಕಾರದ ಕೆಲಸಕ್ಕೆ ತಮ್ಮ ಕಚೇರಿಯನ್ನು ಹಾಗೂ ತಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಳ್ಳಲು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಅವಕಾಶ ಕೊಡಬಾರದು.
- ಒಂದು ದೇಶ, ಒಂದು ಚುನಾವಣೆ ಎಂಬ ಪರಿಕಲ್ಪನೆಗೆ ಕಾಂಗ್ರೆಸ್ಸಿನ ಕಡು ವಿರೋಧವಿದೆ. ಗಟ್ಟಿಯಾಗಿ ಬೆಳೆಯುತ್ತಿರುವ ಪ್ರಜಾತಂತ್ರ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಈ ಆಲೋಚನೆಯನ್ನು ಕೈಬಿಡುವ ಅಗತ್ಯವಿದೆ. ಉನ್ನತಾಧಿಕಾರ ಸಮಿತಿಯನ್ನು ವಿಸರ್ಜಿಬೇಕಾಗಿದೆ.
- ಸಂಸದೀಯ ವ್ಯವಸ್ಥೆಯನ್ನು ಒಪ್ಪಿಕೊಂಡಿರುವ ದೇಶದಲ್ಲಿ ಏಕಕಾಲದಲ್ಲಿ ಚುನಾವಣೆ ನಡೆಸುವ ಆಲೋಚನೆಗೆ ಅವಕಾಶವೇ ಇಲ್ಲ.
- ಏಕಕಾಲಕ್ಕೆ ಚುನಾವಣೆ ನಡೆಸಬೇಕು ಎಂದಾದರೆ ಹಲವು ವಿಧಾನಸಭೆಗಳನ್ನು ವಿಸರ್ಜಿಸಬೇಕಾಗುತ್ತದೆ. ಕೆಲವು ವಿಧಾನಸಭೆಗಳು ಇನ್ನೂ ಅರ್ಧ ಅವಧಿಯನ್ನೂ ಪೂರ್ಣಗೊಳಿಸಿಲ್ಲ. ಈ ರೀತಿ ವಿಸರ್ಜಿಸುವುದು ಆ ರಾಜ್ಯಗಳ ಮತದಾರರಿಗೆ ಮಾಡುವ ದ್ರೋಹ.
- ಏಕಕಾಲಕ್ಕೆ ಚುನಾವಣೆ ನಡೆಸಿದರೆ ಹಣದ ಉಳಿತಾಯವಾಗುತ್ತದೆ ಎಂದು ಹೇಳುವುದು ತಮಾಷೆಯಂತಿದೆ.

ಕೆಜಿಎಫ್ ಶಿಲಾ ಸಂಸ್ಥೆ ವಿಜ್ಞಾನಿಗಳಿಂದ ರಾಮಮಂದಿರ ಕೆತ್ತನೆ ಕಲ್ಲು ಪರಿಶೀಲನೆ

ಪ್ರಜಾವಾಣಿ ವಾರ್ತೆ

ಕೆಜಿಎಫ್ (ಕೋಲಾರ ಜಿಲ್ಲೆ): ಅಯೋಧ್ಯೆಯಲ್ಲಿನ ರಾಮ ಮಂದಿರಕ್ಕೆ ಅಡಿಪಾಯ ಹಾಕುವುದರಿಂದ ಹಿಡಿದು ಕೆತ್ತನೆವರೆಗೆ ಬಳಸಿರುವ ಗ್ರಾನೈಟ್, ಸ್ಯಾಂಡ್‌ಸ್ಟೋನ್, ಮಾರ್ಬಲ್ ಸೇರಿದಂತೆ ವಿವಿಧ ಸ್ವರೂಪದ ಕಲ್ಲುಗಳ ಪರೀಕ್ಷೆಯನ್ನು ಕೆಜಿಎಫ್‌ನಲ್ಲಿರುವ ರಾಷ್ಟ್ರೀಯ ಶಿಲಾ ತಂತ್ರಜ್ಞಾನ ಸಂಸ್ಥೆ (ಎನ್‌ಐಆರ್‌ಎಂ) ನಡೆಸಿದೆ.

ರಾಮ ಜನ್ಮಭೂಮಿ ಟ್ರಸ್ಟ್ ನೀಡಿದ ಗುತ್ತಿಗೆ ಅನ್ವಯ ದೇವಾಲಯಕ್ಕೆ ಬಳಸಲಾದ ಕಲ್ಲುಗಳ ಗುಣಮಟ್ಟದ ತಪಾಸಣೆಯಂಥ ಸವಾಲಿನ ಕೆಲಸವನ್ನು ಕೇಂದ್ರ ಸರ್ಕಾರದ ಗಣಿ ಇಲಾಖೆ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎನ್‌ಐಆರ್‌ಎಂ ಸಮರ್ಪಕವಾಗಿ ಕೈಗೊಂಡಿದೆ. ನಗರದ ಚಾಂಪಿಯನ್ ರೀಫ್ಸ್‌ನಲ್ಲಿರುವ ಈ ಸಂಸ್ಥೆ ಶಿಲೆಗಳ ಅಧ್ಯಯನ ಮತ್ತು ಸಲಹೆ ನೀಡುತ್ತದೆ. ಈ ಮೊದಲು ಬಿಜಿಎಂಎಲ್ ಗಣಿಗಾರಿಕೆಗಾಗಿ ಸ್ಥಾಪನೆ ಮಾಡಲಾಗಿತ್ತು.

'ದೇವಾಲಯವನ್ನು ಸಂಪೂರ್ಣವಾಗಿ ಕಲ್ಲುಗಳಿಂದ ರಚಿಸಲಾಗಿದೆ. ಎಲ್ಲಿಯೂ ಕಬ್ಬಿಣ ಬಳಸಿಲ್ಲ. ಅಡಿಪಾಯಕ್ಕೆ ಏಳು ಹಂತದಲ್ಲಿ ಸುಮಾರು 83 ಸಾವಿರ ಟನ್ ಗ್ರಾನೈಟ್ ಬಳಕೆ ಆಗಿದೆ. ಚಿಕ್ಕಬಳ್ಳಾಪುರ, ದೇವನಹಳ್ಳಿ, ಸಾದರಹಳ್ಳಿಯಲ್ಲಿ ಸಿಗುವ ಗ್ರಾನೈಟ್ ಅನ್ನೇ ಬಹುತೇಕ ಬಳಸಲಾಗಿದೆ. ಕೊರತೆಯಾದ ಸಂದರ್ಭದಲ್ಲಿ ತೆಲಂಗಾಣ ರಾಜ್ಯದ ಕರೀಂನಗರ, ವಾರಂಗಲ್‌ನಲ್ಲಿ ಸಿಕ್ಕ ಕಲ್ಲುಗಳನ್ನು ಬಳಸಲಾಗಿದೆ. ರಾಮಲಲ್ಲಾ ವಿಗ್ರಹ ಆಯ್ಕೆಗೆ ಕೊನೆಯದಾಗಿ ಮೂರು ವಿಗ್ರಹಗಳನ್ನು ತಯಾರು ಮಾಡಲಾಗಿತ್ತು. ಈಗ ಪ್ರತಿಷ್ಠಾಪನೆಯಾಗುತ್ತಿರುವ ಎಚ್.ಡಿ.ಕೋಟೆಯಲ್ಲಿ ಸಿಕ್ಕ ಶಿಲೆಯನ್ನು ಮೂರ್ತಿಯಾಗಿ ರೂಪಿಸಿದ ಶಿಲ್ಪಿ ಅರುಣ್ ಯೋಗಿರಾಜ್ ಮೂರ್ತಿ ಶಿಲೆ ಸಂಬಂಧವೂ ಎನ್‌ಐಆರ್‌ಎಂ ಶಿಫಾರಸು ಮಾಡಿದೆ' ಎಂದು ಸಂಸ್ಥೆ ವಿಜ್ಞಾನಿ ಡಾ.ರಾಜನ್ ಬಾಬು 'ಪ್ರಜಾವಾಣಿ'ಗೆ ತಿಳಿಸಿದರು.

'ಅಡಿಪಾಯಕ್ಕೆ ಒಂದು ರೀತಿ ಶಿಲೆಯಾದರೆ, ಕಂಬಗಳು, ಕಲಂಗಳಿಗೆ ಮತ್ತೊಂದು ರೀತಿ ಕಲ್ಲು ಬಳಸಲಾಗಿದೆ. ಎನ್‌ಐಆರ್‌ಎಂ ಕಾರ್ಯವೈಖರಿಗೆ ಟ್ರಸ್ಟ್ ತೃಪ್ತಿ ವ್ಯಕ್ತಪಡಿಸಿದೆ' ಎಂದರು.

'ಕಲ್ಲಿನ ಎಲ್ಲ ಗುಣಗಳನ್ನು ಅರಿಯಲು ದೇಶದಾದ್ಯಂತ ಹಲವು ಕ್ವಾರಿಗಳಿಗೆ ಭೇಟಿ ನೀಡಲಾಗಿತ್ತು. ಅಡಿಪಾಯಕ್ಕೆ ಗ್ರಾನೈಟ್ ಸೂಕ್ತ ಎಂಬ ಅಭಿಪ್ರಾಯ ಬಂದಿತು. ಸೂಪರ್ ಸ್ಟ್ರಕ್ಚರ್‌ಗೆ ಸ್ಯಾಂಡ್ ಸ್ಟೋನ್ ಬಳಸಲಾಗಿದೆ. ಅಲಂಕಾರಿಕ ಶಿಲೆಗಾಗಿ ಮಕ್ರಾನ್ ಅಮೃತ ಶಿಲೆ ಬಳಸಲು ಶಿಫಾರಸು ಮಾಡಲಾಗಿತ್ತು. ಅದೇ ರೀತಿ ದೇವಾಲಯ ನಿರ್ಮಾಣವಾಗುತ್ತಿದೆ' ಎಂದು ಮಾಹಿತಿ ನೀಡಿದರು.

ಸುಮಾರು ಒಂದು ಲಕ್ಷ ಶಿಲೆಗಳನ್ನು ಏಳೆಂಟು ತಿಂಗಳ ಕಾಲ ಪರೀಕ್ಷೆ ನಡೆಸಲಾಗಿದೆ. ಸಂಸ್ಥೆಯ ನಿರ್ದೇಶಕ ಎಚ್.ಎಸ್.ವೆಂಕಟೇಶ್ ಮಾರ್ಗದರ್ಶನದಿಂದ ಇಷ್ಟೆಲ್ಲ ಸಾಧ್ಯವಾಯಿತು ಎಂದು ಸಂಸ್ಥೆ ವಿಜ್ಞಾನಿಗಳು ತಿಳಿಸಿದರು.



ಅಯೋಧ್ಯೆ ರಾಮಮಂದಿರ ಗರ್ಭಗುಡಿಯನ್ನು ಪರಿಶೀಲಿಸಿದ ಕೆಜಿಎಫ್ ಎನ್‌ಐಆರ್‌ಎಂ ಸಂಸ್ಥೆ ವಿಜ್ಞಾನಿಗಳು

ರಜೆ: ವಿರೋಧ ಪಕ್ಷಗಳ ಟೀಕೆ

ನವದೆಹಲಿ: ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ದೇಶದಾದ್ಯಂತ ಎಲ್ಲ ಕೇಂದ್ರ ಸರ್ಕಾರಿ ಕಚೇರಿಗಳಿಗೆ ಅರ್ಧ ದಿನ ರಜೆ ನೀಡಿರುವ ಕ್ರಮವನ್ನು ವಿರೋಧ ಪಕ್ಷಗಳು ಟೀಕಿಸಿವೆ.

'ಸರ್ಕಾರವು ಇಂತಹ ಸುತ್ತೋಲೆ ಹೊರಡಿಸುವ ಮೂಲಕ ಅಧಿಕಾರದ ದುರುಪಯೋಗ ಮಾಡಿದೆ. ಧಾರ್ಮಿಕ ನಂಬಿಕೆಯ ವಿಚಾರದಲ್ಲಿ ವೈಯಕ್ತಿಕವಾಗಿ ತೀರ್ಮಾನ ತೆಗೆದುಕೊಳ್ಳುವ ಹಕ್ಕು ನೌಕರರಿಗೆ ಇದೆ. ಸರ್ಕಾರದ ಇಂತಹ ಕ್ರಮವು ಸಂವಿಧಾನ ಮತ್ತು ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿಗಳಿಗೆ ವಿರುದ್ಧವಾಗಿದೆ' ಎಂದು ಸಿಪಿಎಂ ಹೇಳಿದೆ.

'ಬಿಜೆಪಿ ಅಧಿಕಾರದಲ್ಲಿರುವ ರಾಜ್ಯವೊಂದು ಈದ್ ಮಿಲಾದ್ ದಿನದ ರಜೆಯನ್ನು ರದ್ದುಗೊಳಿಸಿದೆ. ಶುಕ್ರವಾರದ ನಮಾಜ್‌ಗೆ ಮೀಸಲಿಟ್ಟಿದ್ದ 30 ನಿಮಿಷಗಳ ವಿರಾಮದ ಅವಧಿಯನ್ನು ಸಾಂವಿಧಾನಿಕ ಹುದ್ದೆಯಲ್ಲಿರುವ ಒಬ್ಬರು ರದ್ದು ಮಾಡಿದ್ದಾರೆ. ಯಾರ ತುಷ್ಟೀಕರಣವೂ ಇಲ್ಲದೆ (ಬಹುಸಂಖ್ಯಾತರನ್ನು ಹೊರತುಪಡಿಸಿ) ಎಲ್ಲರ ಅಭಿವೃದ್ಧಿ ಎಂದರೆ ಇದೇನಾ?' ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ವ್ಯಂಗ್ಯವಾಡಿದ್ದಾರೆ. ಬಿಜೆಪಿ ಆಡಳಿತವಿರುವ ಕೆಲವು ರಾಜ್ಯಗಳಲ್ಲೂ ಜ.22 ರಂದು ಅರ್ಧದಿನ/ ಪೂರ್ಣ ದಿನ ರಜೆ ಘೋಷಿಸಲಾಗಿದೆ. ಕೆಲವು ರಾಜ್ಯಗಳು ಮದ್ಯ ಮಾರಾಟವನ್ನೂ ನಿಷೇಧಿಸಿದೆ.

ಸಂಕ್ಷಿಪ್ತ ಸುದ್ದಿ

ಅಯೋಧ್ಯೆ ರೈಲು ನಿಲ್ದಾಣದಲ್ಲಿ ತ್ರಿ–ಡಿ ಅಳಿಲು

ಹುಬ್ಬಳ್ಳಿ: ರಾಮಮಂದಿರ ಉದ್ಘಾಟನೆ ಹಿನ್ನೆಲೆಯಲ್ಲಿ ಅಯೋಧ್ಯೆ ಧಾಮ ರೈಲು ನಿಲ್ದಾಣದ ಆವರಣದಲ್ಲಿ ಹುಬ್ಬಳ್ಳಿಯ ಕೊಪ್ಪಿಕರ್ ರಸ್ತೆಯ ಆರ್ಟ್‌ವಾಲೆ (ಆರ್ಟ್ ಇನ್ ಇನ್‌ಫ್ರಾಸ್ಟ್ರಕ್ಚರ್) ಸಂಸ್ಥೆಯ ತಂತ್ರಜ್ಞರು ಮತ್ತು ಕಲಾವಿದರು 19.5 ಅಡಿ ಎತ್ತರದ ತ್ರಿ–ಡಿ ಅಳಿಲು ಕಲಾಕೃತಿ ಸಿದ್ಧಪಡಿಸಿ, ಅಲ್ಲಿಯೇ ಅಳವಡಿಸಿದ್ದಾರೆ.

'ಕಲ್ಯಾಣ್ ಜ್ಯುವೆಲರ್ಸ್ ಪ್ರಾಯೋಜಕತ್ವದಲ್ಲಿ 20 ಕಲಾವಿದರ ತಂಡ 35 ದಿನಗಳಲ್ಲಿ ತ್ರಿ–ಡಿ ಅಳಿಲು ಸೇರಿ 5 ಬಗೆಯ ತ್ರಿ–ಡಿ ಕಲಾಕೃತಿಗಳನ್ನು ರೈಲು ನಿಲ್ದಾಣದಲ್ಲಿ ಸಿದ್ಧಪಡಿಸಿದೆ' ಎಂದು ಸಂಸ್ಥೆಯ ನಿರ್ದೇಶಕಿ ನಿಧಿ ಓಸ್ತವಾಲ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ರೈಲು ನಿಲ್ದಾಣದ ಮುಖ್ಯ ಪ್ರವೇಶ ದ್ವಾರದ ಬಳಿ ಎ-3 ವರಾಂಡದಲ್ಲಿ ಅಯೋಧ್ಯೆಗೆ ಸ್ವಾಗತ, ಅಯೋಧ್ಯೆ, ರಾಮಮಂದಿರ, ಶರಯೂ ಘಾಟ್ ತ್ರಿ–ಡಿ ಕಲಾಕೃತಿ ಅಳವಡಿಸಲಾಗಿದೆ. ಅಳಿಲು 19.5 ಅಡಿ ಎತ್ತರವಿದ್ದು, 2.5 ಟನ್ ತೂಕವಿದೆ. ದೇಶದಲ್ಲೇ ಅತೀ ಎತ್ತರದ ಅಳಿಲಿನ ಕಲಾಕೃತಿ ಇದು' ಎಂದರು. '40 ಅಡಿ ಎತ್ತರದ ರಾಮಮಂದಿರ, 8.5 ಅಡಿ ಎತ್ತರದ ಅಯೋಧ್ಯೆ, 9 ಅಡಿ ಎತ್ತರದ ಸ್ವಾಗತ ನಾಮಫಲಕ ಮತ್ತು 40 ಅಡಿ ಎತ್ತರದ ಶರಾಯೂ ನದಿ ಘಾಟ್ ಕಲಾಕೃತಿಗಳನ್ನು ಅಳವಡಿಸಲಾಗಿದೆ' ಎಂದರು.

ಆರ್ಟ್‌ವಾಲೆ ಸಂಸ್ಥಾಪಕ ಗೌತಮ ಓಸ್ತವಾಲ್ ಮಾತನಾಡಿ, 'ಹುಬ್ಬಳ್ಳಿ, ಬೆಳಗಾವಿ, ಹೊಸಪೇಟೆ ರೈಲು ನಿಲ್ದಾಣದಲ್ಲಿ ದೇಶದ ಸಂಸ್ಕೃತಿ ಸಾರುವ ಕಲಾಕೃತಿಗಳನ್ನು ಅಳವಡಿಸಿದ್ದೇವೆ. ಅದೆಲ್ಲವನ್ನೂ ಗಮನಿಸಿ ಉತ್ತರ ರೈಲ್ವೆ ವಲಯ ಅಯೋಧ್ಯೆಯ ರೈಲ್ವೆ ನಿಲ್ದಾಣದಲ್ಲಿ ಕಲಾಕೃತಿ ಅಳವಡಿಸಲು ಅವಕಾಶ ಕಲ್ಪಿಸಿದೆ' ಎಂದರು.

'ಚುನಾವಣೆಗೆ ಮಂದಿರ ಬಳಕೆ ಸರಿಯಲ್ಲ'

ಗುಂಡ್ಲುಪೇಟೆ (ಚಾಮರಾಜನಗರ): 'ರಾಮನ ಮೇಲೆ ನಮಗೂ ಭಕ್ತಿ ಗೌರವವಿದೆ. ಹಾಗೆಂದು ಚುನಾವಣೆಗೆ ರಾಮ ಮಂದಿರವನ್ನು ಬಳಸಿಕೊಳ್ಳಬಾರದು' ಎಂದು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್. ಪಾಟೀಲ ಶುಕ್ರವಾರ ಪ್ರತಿಪಾದಿಸಿದರು.

ರಾಮಮಂದಿರ ಉದ್ಘಾಟನೆ ವಿಚಾರವಾಗಿ ಪಟ್ಟಣದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, 'ಗುಡಿ ಕಟ್ಟಿಯೇ ರಾಮನ ಮೇಲಿನ ಭಕ್ತಿಯನ್ನು ತೋರಿಸಬೇಕು ಎಂದೇನಿಲ್ಲ. ರಾಮನ ಆದರ್ಶಗಳು ನಮಗೆ ಮುಖ್ಯ. ರಾಮಮಂದಿರ ಕಾಮಗಾರಿ ಇನ್ನೂ ಪೂರ್ಣವಾಗಿಲ್ಲ. ಅಪೂರ್ಣ ಮಂದಿರವನ್ನು ಉದ್ಘಾಟಿಸಬಾರದು ಎಂದು ಶಂಕರಾಚಾರ್ಯ ಪೀಠಗಳ ಪೂಜ್ಯರೂ ಹೇಳಿದ್ದಾರೆ. ಆದರೆ ರಾಮಮಂದಿರವನ್ನು ಚುನಾವಣೆಯ ವಿಷಯವಾಗಿ ಬಳಸಿಕೊಳ್ಳಲಾಗುತ್ತಿದೆ' ಎಂದರು.

'ಬಾಬರಿ ಮಸೀದಿ ಮಾದರಿಯಲ್ಲಿ ಭಟ್ಕಳದ ಮಸೀದಿ ಒಡೆಯುತ್ತೇವೆ' ಎಂಬ ಸಂಸದ ಅನಂತಕುಮಾರ ಹೆಗಡೆ ಹೇಳಿಕೆಗೆ ಪ್ರತಿಕ್ರಿಯಿಸಿ, 'ಸಂಸ್ಕಾರ ಇರುವವರು ಹೇಳುವಂತಹ ಮಾತಲ್ಲ ಇದು. ನಾವು ಜಾತ್ಯತೀತವಾಗಿರಬೇಕು. ಯಾವುದೇ ಸಮುದಾಯ, ಧರ್ಮವನ್ನು ಗುರಿ ಮಾಡುವುದು ತಪ್ಪು' ಎಂದರು.

'ನನ್ನ ಸರ್ಕಾರಕ್ಕೆ ರಾಮ ಪ್ರೇರಣೆ'

ಸೊಲ್ಲಾಪುರ (ಪಿಟಿಐ): 'ಪ್ರಾಮಾಣಿಕತೆ ಹಾಗೂ ಉತ್ತಮ ಆಡಳಿತ ಸೇರಿ ರಾಮನ ತತ್ವಗಳಿಂದ ನನ್ನ ಸರ್ಕಾರ ಪ್ರೇರಿತವಾಗಿದೆ. ಹೀಗಾಗಿ, ಅಯೋಧ್ಯೆಯಲ್ಲಿ ಬಾಲರಾಮ ವಿಗ್ರಹ ಪ್ರಾಣ ಪ್ರತಿಷ್ಠಾಪನೆ ನಡೆಯುವ ಜ.22ರಂದು ಎಲ್ಲರೂ 'ರಾಮ ಜ್ಯೋತಿ' ಬೆಳಗಿಸಿ. ಆ ಬೆಳಕು ದೇಶದ ಬಡತನವನ್ನು ನಿವಾರಿಸಲಿ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದರು.

ಇಲ್ಲಿ ₹2,000 ಕೋಟಿ ಮೊತ್ತದ ಎಂಟು 'ಅಮೃತ್' (ಪುನರುಜ್ಜೀವನ ಮತ್ತು ನಗರ ಪರಿವರ್ತನೆಗಾಗಿ ಅಟಲ್ ಮಿಷನ್) ಯೋಜನೆಗೆ ಅಡಿಗಲ್ಲು ಹಾಕಿದ ಪ್ರಧಾನಿ ಮೋದಿ, ನಂತರ ನಡೆದ ಸಾರ್ವಜನಿಕ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

'ವಿಶ್ವದ ಮೂರು ಪ್ರಬಲ ಆರ್ಥಿಕ ಶಕ್ತಿಗಳ ಸಾಲಿನಲ್ಲಿ ಭಾರತವನ್ನೂ ಸೇರಿಸುವುದು 'ಮೋದಿ ಗ್ಯಾರಂಟಿ' ಆಗಿರಲಿದೆ. ಇದನ್ನು ಜನರ ಆಶೀರ್ವಾದದೊಂದಿಗೆ ನನ್ನ ಮೂರನೇ ಆಡಳಿತಾವಧಿಯಲ್ಲಿ ಸಾಧಿಸಲಾಗುವುದು' ಎಂದು ಭರವಸೆ ನೀಡಿದರು.

'ಮೋದಿ ಗ್ಯಾರಂಟಿ ಅಂದರೆ, ಸಾಕಾರಗೊಳ್ಳುವ ಗ್ಯಾರಂಟಿ. ಅಂಥ ಬದ್ಧತೆ ರಾಮ ಕಲಿಸಿದ್ದಾನೆ' ಎಂದರು.

ರಾವಣನಾಗಲು ಸಿದ್ಧ: ಸಚಿವ ರಾಜಣ್ಣ

ಪ್ರಜಾವಾಣಿ ವಾರ್ತೆ

ತುಮಕೂರು: 'ಬಿಜೆಪಿಯವರು ನನ್ನನ್ನು ರಾವಣ ಎಂದು ಕರೆದಿದ್ದಾರೆ. ಇದರಿಂದ ಬೇಜಾರಿಲ್ಲ. ರಾವಣ ಎಂದು ಕರೆಸಿಕೊಳ್ಳಲು ಸಿದ್ಧನಿದ್ದೇನೆ. ಅವನಂತಹ ದೈವ ಭಕ್ತ ಮತ್ತೊಬ್ಬ ಇರಲಿಲ್ಲ. ಬಿಜೆಪಿಯವರು ಡೋಂಗಿ ದೈವ ಭಕ್ತರು' ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ವಾಗ್ದಾಳಿ ನಡೆಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದರು. 'ಬಾಬರಿ ಮಸೀದಿ ಗಲಾಟೆ ಸಮಯದಲ್ಲಿ ಅಯೋಧ್ಯೆಗೆ ಭೇಟಿ ನೀಡಿದ್ದೆ. ಒಂದು ಟೆಂಟ್‌ನಲ್ಲಿ ಎರಡು ಬೊಂಬೆ ತಂದಿಟ್ಟು ಶ್ರೀರಾಮ ಎಂದು ಹೇಳುತ್ತಿದ್ದರು. ಅದು ಟೂರಿಂಗ್ ಟಾಕಿಸ್‌ನ ಬೊಂಬೆಗಳಂತೆ ಕಂಡಿದ್ದವು' ಎಂದು ರಾಜಣ್ಣ ಸಮಾರಂಭವೊಂದರಲ್ಲಿ ಹೇಳಿದ್ದರು. ಈ ವಿಚಾರ ಮುಂದಿಟ್ಟುಕೊಂಡು ಬಿಜೆಪಿಯವರು ರಾವಣ ಎಂದು ಕರೆದಿರುವುದಕ್ಕೆ ಪ್ರತಿಕ್ರಿಯೆ ನೀಡಿದರು.

ಬೊಂಬೆಯನ್ನು ದೇವರು ಎಂದು ಕರೆದರೆ ತಪ್ಪೇನಿದೆ? ಬೊಂಬೆಯಲ್ಲಿ ದೈವತ್ವ ಇಲ್ಲವೆ? ಹೊಲದಲ್ಲಿ ಸಗಣಿ ಮೂರ್ತಿ ಮಾಡಿ ಗರಿಕೆ ಹುಲ್ಲು ಇಟ್ಟು ಪೂಜೆ ಮಾಡುತ್ತೇವೆ. ಹೊಲದಲ್ಲಿ ಸಿಕ್ಕ ಬೆಣಚು ಕಲ್ಲಿಗೂ ಪೂಜೆ ಮಾಡುತ್ತಾರೆ. ಅದು ನಮ್ಮ ನಂಬಿಕೆ ಎಂದು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡರು.

'ಹಿಂದೆ ತಮಿಳುನಾಡಿನ ಅಣ್ಣಾದೊರೈ ರಾಮಾಯಣಕ್ಕೆ ಬದಲಾಗಿ 'ರಾವಣಾಯಣ' ನಾಟಕ ಮಾಡಿದ್ದರು. ಆ ನಾಟಕದಲ್ಲಿ ಸೀತೆ ಮೇಲೆ ರಾವಣ ಬಲಾತ್ಕಾರ ಮಾಡುವುದಿಲ್ಲ. ಇದು ರಾವಣನ ದೊಡ್ಡ ಗುಣ ಅಲ್ಲವೆ? ರಾವಣ ಶಿವನ ಭಕ್ತ. ರಾವಣನಿಗೆ ಶಿವ ಆತ್ಮಲಿಂಗ ಕೊಟ್ಟಿದ್ದು. ಹಾಗಾಗಿ ನಾನು ಶ್ರೀರಾಮ ಹಾಗೂ ರಾವಣ ಇಬ್ಬರ ಪರ ಇದ್ದೇನೆ' ಎಂದರು.

ಹೈಕಮಾಂಡ್ ಮೆಚ್ಚಿಸಲು ರಾಜಣ್ಣ ಹೇಳಿಕೆ: ನಳಿನ್ ಕುಮಾರ್ ಕಟೀಲ್

ಮಂಗಳೂರು: ಅಯೋಧ್ಯೆಯಲ್ಲಿ ನಿರ್ಮಾಣವಾಗಿರುವ ರಾಮಮಂದಿರದ ಬಗ್ಗೆ ಕೀಳಾಗಿ ಮಾತನಾಡುವುದು, ರಾಮ, ಸೀತೆಯರನ್ನು ಟೂರಿಂಗ್ ಟಾಕೀಸ್‌ಗೆ ಹೋಲಿಸಿರುವುದು ಕಾಂಗ್ರೆಸ್ ಮಾನಸಿಕತೆಯನ್ನು ತೋರಿಸುತ್ತದೆ ಎಂದು ಸಂಸದ ನಳಿನ್‌ಕುಮಾರ್ ಕಟೀಲ್ ಹೇಳಿದರು.

